..ed No. M. 1393.

doc-36
P-16

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

ಸಂಪುಟ ೨೩ | ಮಂಗಳೂರು, ೧೯೪೧ನೇ ಇಸವಿ ಸಪ್ಟೆಂಬರ ತಾರೀಕು ೧೬ನೇ ಮಂಗಳವಾರ | ಸಂಚಿಕೆ ೪೯
VOL. XXIII | MANGALORE, TUESDAY, SEPTEMBER 16, 1941 | NO. 49

ಪಾಕಿಸ್ತಾನದ ಕರೆಯಲ್ಲಿ ಹುರುಳಿಲ್ಲ!

ಶ್ರೀ ಮುನ್ಶಿಯವರ ಧೋರಣೆ

ಮುಸ್ಲಿಂ ಲೀಗು, ಲಾಹೋರಿನ ಅಧಿವೇಶನದಲ್ಲಿ ಭಾರತವನ್ನು ಇಬ್ಭಾಗಿಸುವ ವಿನಾಶಕಾರಕ ಧೋರಣೆಯನ್ನು ಕೈಗೊಂಡಿತು. ಲೀಗ್ ಪಕ್ಷೀಯರ ಅವಿಶ್ರಾಂತ ಶ್ರಮದ ದೆಸೆಯಿಂದಲೇ ಇಂದೀಗ ಪಾಕಿಸ್ತಾನದ ಕೂಗು ದೇಶದ ಎಲ್ಲೆಡೆಗಳಲ್ಲೂ ಕೇಳಿ ಬರುವಂತಾಯಿತು.

ಈ ಪಾಕಿಸ್ತಾನ ಪದ್ಧತಿಯೆಂದರೇನು? ಅದು ಪ್ರಯೋಗಿಕವೆ? ನಾಡಿನ ಜನತೆ ಆಶಿಸುವಂತಹದೆ?

ಸ್ವರಕ್ಷಣೆಯ ವಿಷಯದಲ್ಲಿ ಅಹಿಂಸೆಯ ಪ್ರಯೋಗದ ಕುರಿತು, ವಿವಾದವೆದ್ದು, ಕಾಂಗ್ರೆಸ್ಸಿನಿಂದ ಹೊರಗೆ ಹೋಗಿರುವ ಮುಂಬಯಿ ಮಾಜಿ ಮಂತ್ರಿಗಳಲ್ಲೊಬ್ಬರಾದ ಶ್ರೀ! ಮುನ್ಶಿಯವರ ಇಂದಿನ ಚಟುವಟಿಕೆಗಳೇ, ಪಾಕಿಸ್ತಾನದಿಂದ ನಮ್ಮ ರಾಷ್ಟ್ರಕ್ಕೆ ಹಾನಿಯಿದೆಯೆಂಬುದನ್ನು ಸೂಚಿಸುತ್ತವೆ.

❀ ❀ ❀ ❀

ಭಾರತವನ್ನು ವಿಭಾಗಿಸುವಷ್ಟರ ಮಟ್ಟಿಗೂ ಹಿಂದೂ–ಮುಸ್ಲಿಮರೊಳಗೆ ಜಾತೀಯ ವೈಷಮ್ಯವಿದೆಯೆ? ಇದು ಚರ್ಚಾಸ್ಪದವಾದ ಪ್ರಶ್ನೆ.

ಶ್ರೀ! ಕನ್ಯಾಲಾಲ ಮುನ್ಶಿಯವರು, ಈ ಕುರಿತು, ತಮ್ಮ ವಾದ ಸರಣಿಯನ್ನು ತೊಡಗುತ್ತಾ, ಭಾರತದಲ್ಲಿ ಪರಸ್ಪರ ರಾಜಕೀಯ ವಿರೋಧವು ಜಾತೀಯತೆಯ ದೆಸೆಯಿಂದಾಗಿ ಉಂಟಾಗಿಲ್ಲವೆಂದಿರುವರು. ಅತಿ ಮತಾಂಧನೆಂದು ಪ್ರಖ್ಯಾತನಾಗಿರುವ ಔರಂಗಜೇಬ್, ಹಿಂದುಗಳೊಡನೆ ಮಾತ್ರ ಯುದ್ಧ ಹೂಡಿಲ್ಲ; ದಕ್ಷಿಣದ ಮುಸ್ಲಿಮ ರಾಷ್ಟ್ರುಗಳೊಡನೆಯೂ ಕಾದಾಡಿದ್ದಾನೆ. ಈಸ್ಟ್ ಇಂಡಿಯಾ ಕಂಪೆನಿಗಳ ಆಗಮನಾನಂತರದ ಯುದ್ಧಗಳಲ್ಲಿ, ಹಿಂದೂ ಸೈನಿಕರು, ಹಿಂದುಗಳನ್ನೂ, ಮುಸ್ಲಿಮರು ಮುಸ್ಲಿಮ್ ಸೇನೆಗಳನ್ನೂ ಇದಿರಿಸಿ ಹಲವೆಡೆ ಕಾದಾಡಿರುವರು. ಇತ್ತೀಚೆಗಿನ ಸ್ವಾತಂತ್ರ್ಯ ಯುದ್ಧದ ಸಮಯ ಪರದೇಶೀಯರನ್ನು ಹೊರಕ್ಕಟ್ಟುವುದಕ್ಕೆಂದು, ಹಿಂದುಗಳೂ, ಮುಸ್ಲಿಮರೂ ಪರಸ್ಪರ ಸಹಕಾರದಿಂದ ವರ್ತಿಸಿದ್ದರು. ಅಜ್ಞಾತದಲ್ಲಿ ಜೀವಿಸುತ್ತಲಿದ್ದ ಮೊಗಲ್ ಚಕ್ರವರ್ತಿ, ಅವರಿಬ್ಬರನ್ನೂ ಪ್ರೋತ್ಸಾಹಿಸುತ್ತಲಿದ್ದ. ಈಗಲೂ ಹಳ್ಳಿಗಳತ್ತ ನೋಡುವುದಾದರೆ, ಹಿಂದೂ–ಮುಸ್ಲಿಮರು, ಪರಸ್ಪರ ಬಂಧುಗಳಂತೆ ಜೀವನ ಸಾಗಿಸುತ್ತಿದ್ದಾರೆ. ನಗರಗಳ ಕುರಿತು ವಿಚಾರಿಸಿದರೂ, ಆರ್ಥಿಕ ದುಃಸ್ಥಿತಿ ಈ ಎರಡು ಜಾತಿಯವರನ್ನೂ ಸಾಮಿಪ್ಯಕ್ಕೆಳೆದುದು ಕಂಡುಬರುತ್ತದೆ. ಪದೇ ಪದೇ ಆಗುತ್ತಿರುವ ಮಜೂರ ಮುಷ್ಕರಗಳಲ್ಲಿ, ಜಾತೀಯತೆಯ ಭಾವನೆಗೆ ಎಳ್ಳಷ್ಟೂ ಆಸ್ಪದವಿದ್ದುದು ಕಂಡುಬರುವುದಿಲ್ಲ!

ನಮ್ಮ ಚರಿತ್ರೆಯ ಯಾವ ಪುಟವನ್ನೆತ್ತಿ ನೋಡಿದರೂ, ಹಿಂದೂ ಮುಸ್ಲಿಮರೊಳಗೆ ಸದಾ ಐಕ್ಯವಿದ್ದುದು ಕಂಡುಬರುತ್ತದೆ.



ಮಿಸೆಸ್ ಚರ್ಚ್‌ಹಿಲ್ ಮತ್ತು ಫ್ರಿ ಫ್ರೆಂಚ್ ನೌಕಾ ಅಧಿಕಾರಿ

ಸ್ವತಂತ್ರ ಫ್ರೆಂಚರಲ್ಲಿ ಗಾಯಗೊಂಡವರ ಶಿಶ್ರೂಷಾ ಮಂದಿರಕ್ಕಾಗಿ ಒಂದು ನಿಧಿಯ ಸಂಗ್ರಹದ ಬಗೆಗೆ ಬ್ರಿಟಿನಿನ ಫ್ರೆಂಚರೊಂದು ವ್ಯವಸ್ಥೆ ಮಾಡಿದ್ದಾಗ, ಮಿಸೆಸ್ ಚರ್ಚ್‌ಹಿಲ್ಲರು ಸ್ವತಂತ್ರ ಫ್ರೆಂಚ್ ನೌಕಾಧಿಪರಾದ ಎಡ್ಮಿರಲ್ ಮ್ಯಾಸ್ಲಿಯರರೊಡನೆ ವಿನೋದಗೋಷ್ಠಿಯಲ್ಲಿರುವುದು.

ಪಂಜಾಬಿನ ಜಾಟ್ ಹಿಂದೂ, ಜಾಟ್ ಮುಸ್ಲಿಂ ಮತ್ತು ಜಾಟ್ ಸಿಕ್ಖ್ ಈ ಭಿನ್ನಮತೀಯರನ್ನೆತ್ತಿ ನೋಡಿದರೆ, ಅವರೊಳಗಿದ್ದ ಆಪ್ತ ಸಂಬಂಧವು ಪಂಜಾಬಿನ ಹಿಂದೂ ಮತ್ತು ತಮಿಳು ನಾಡಿನ ಹಿಂದೂಗಳೊಳಗೆ ಇದ್ದಿಲ್ಲ. ಹಿಂದುಗಳಲ್ಲಿ ಹೇಗೆ ಜಾತೀಯ ವಿಭಾಗಗಳಿದ್ದುವೊ, ಮುಸ್ಲಿಮರಲ್ಲೂ ಹಾಗೆಯೇ ನಿಷ್ಠೆ, ಆಚಾರಗಳಿದ್ದುವು.

ಮತ ವಿಷಯಕವಾಗಿ ವಾದಗಳು ಜರಗುತಿದ್ದೂ, ಭಿನ್ನ ಪಂಗಡಿಗರು, ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದುದರ ಫಲವಾಗಿ, ಹಿಂದೂ ಮತ ಮುಸ್ಲಿಂ ಮತಗಳಲ್ಲಿ ಹೆಚ್ಚಿನ ವ್ಯತ್ಯಾಸ ವಿಲ್ಲವೆಂಬ ಭಾವನೆ ಬೇರೂರತೊಡಗಿದ್ದಿತು.

❀ ❀ ❀ ❀

ಹಾಗಿದ್ದರೆ, ಈ ಜಾತೀಯ ವೈಷಮ್ಯದ ಪ್ರಶ್ನೆ ಎಂದಿನಿಂದ ಬಲಗೊಳ್ಳುವುದಕ್ಕೆ ಆರಂಭವಾಯಿತು? ಇದಕ್ಕೆ ಕಾರಣರು ಯಾರು?

(೧೫ನೇ ಪುಟಕ್ಕೆ ಮುಂದುವರಿಸಿಯದೆ)

To meet WAR TIME orders FIXED DEPOSITS IN CASH

repayable after 3, 6, 9, 12 & 24 months

at 4, 4½, 5, 6 & 7½% interest respectively (interest paid quarterly) are accepted by

CALICUT HOSIERIES, LTD.,

(ESTD. 1936) CHALAPURAM POST. (Malabar.)

List will remain open only for one month and will close immediately the required amount of Deposits are received.

Apply with 0—2—0 postage stamps for rules and application form at once to Managing Agents.

N. B. Special Rates for Deposits for sums over Rs. 5000/–

Every Kanarite finds in the "**POPULAR**" a successful Life Assurance company of their own. To patronise it- to actively work for it- must continue to be the aim of every one who looks to the progress of Kanara enterprise.

Represent the "POPULAR". A permanent appointment on very remunerative basis awaits you.

THE POPULAR INSURANCE COMPANY LIMITED,

Head Office: Mangalore, S. India.

Pandit Bank,
MANGALORE.

ಪಂಡಿತ್ ಬೇಂಕ್,
ಕೋರ್ಟು ರಸ್ತೆ, ಮಂಗಳೂರು

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ಕಾಯಂ ಠೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ವಗೈರೆಗ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ ಸೇಫ್ ಡಿಪೊಜಿಟ್ ಪಡೆಯುವದೂ ವಗೈ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹ ಸುಲಭವಾದ ಬಡ್ಡಿ ವ ಶರತಗಳೊಡನೆ ಮಾಡೊ ಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬೆಲಿ ಯದು ಅಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಈ ಕೆಳಗಿನ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ರೂ. 50ರ ತನಕ ಸೇ. 8%
ರೂ. 51ರಿಂದ ರೂ. 500ರ ತನಕ ಸೇ 7%
ರೂ. 501ರಿಂದ ಮೇಲ್ಪಟ್ಟು ಸೇ. 6½%

ಬಡ್ಡಿ ದರವನ್ನು ಈ ತಿಂಗಳ ಮೊದಲ್ಗೊಂಡ ತಬ್ದಿಲು ಮಾಡಿದೆ.—

ಚಾಲ್ತಿ ಠೇವಣಾತಿ:
ಪ್ರತಿದಿನದ ಶಿಲ್ಕಿನ ಮೇಲೆ ಸೇ. 1 %
ಸೇವಿಂಗ್ಸ್ ಬ್ಯಾಂಕ್: ಸೇ. 3 %

ನಿರಖು ಠೇವಣಾತಿ:
6 ತಿಂಗಳುಗಳಿಗೆ ಸೇ 3½ %
1 ವರ್ಷಕ್ಕೆ ಸೇ. 4 %

PANDIT SHIVA RAO, B.A., LL.B
PROPRIETOR.
PANDIT SANJIVA RAO, B.A.
AGENT.

JAYA LAXMI BANK, LTD., MANGALORE.

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮಂಗಳೂರು.

(ಸ್ಥಾಪಿಸಲ್ಪಟ್ಟದ್ದು—1923)

ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮಗಳೂರು, ಮೂಡಿಗೆರೆ ಮತ್ತು ಕಣ್ಣಾನೂರು.

ಅಧಿಕೃತ ಮೂಲಧನ . . .	ರೂ. 5,00,000
ಅರ್ಪಿಸಲಾದ ಮತ್ತು ಚೆಂದಾಹಾಕಿದ ಮೂಲಧನ	ರೂ. 1,00,000
ತೆತ್ತ ಮೂಲಧನ . . .	ರೂ. 97,000
ಕ್ಷೇಮ ಮತ್ತಿತರ ನಿಧಿಗಳು . .	ರೂ. 1,14,830

ಕಾಯಂ ಠೇವಣಾತಿಗಳು.

3 ತಿಂಗಳ ಠೇವಣಾತಿಗಳಿಗೆ-ಸೇ.3%; 6 ತಿಂಗಳ ಠೇವಣಾತಿಗಳಿಗೆ-ಸೇ.3½%; 12 ತಿಂಗಳ ಠೇವಣಾತಿಗಳಿಗೆ—4%.

ಮಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಬಂಗಾರ, ಸರಕು ಈಡಿನ ಮೇಲೆ, ಸಾಲವನ್ನು ಕೊಡುವುದು.

M. Ganesh Rao,
ಸೆಕ್ರೆಟರಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಅತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನಿಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯಾ 1—2—0. ಅಂಚೆವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಆಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು ಒಂದಕ್ಕೆ ರೂ. 3—0—0 ಅಂಚೆವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯ ಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಆರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು. ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2—0—0 ಪೋಸ್ಟೇಜು ವಗೈರೆ ಬೇರೆ.

ಶ್ರೀ। ಪಿ. ಮಹಾಬಲ ಹೆಬ್ಬಾರ್,
ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯದೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

(ರಿಜಿಸ್ಟರ್ಡ್)

ಬಾಲಾರ್ಕಮಧು

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ; ಅಸ್ತಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಮಧುರವಿದೆ.

ಬೆಲೆ: 0-12-0, ಟ. ಖ. 0-9-0.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ ಧಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ:—

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ. (ಮೈಸೂರು ಸೀಮೆ)

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವಾ ಚದುರಂಗ ಆಡುವವರೆ? ನೀವು ಯಾರಾದರೂ ಸರಿ–ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ ಸ್ಫೂರ್ತಿಯೂ ತೋರಿಬರುವುದು. **ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ** (ಟಪ್ಪಾಲು ಖರ್ಚು ಪ್ರತ್ಯೇಕ.)

ಗುರುಬಸವ ಅಂಡ್ ಕಂಪನಿ, ಲಿಮಿಟೆಡ್,
ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

ನೆಪೋಲಿಯನ್ ಅತೃಪ್ತನಾಗಿ ಅಳಿದ,— ಹಿಟ್ಲರ್ ?

ಪರಸ್ಪರ ಸಾಮ್ಯಭೇದಗಳ ವಿಮರ್ಶೆ

ಹಿಟ್ಲರ್ ಮತ್ತು ನೆಪೋಲಿಯನ್

ಹಿಟ್ಲರ್ ಪ್ರಗತಿಗೆ ಬರತೊಡಗಿದಂದಿನಿಂದ, ಅವನ ಹಿಂಬಾಲಕರೂ, ಆರಾಧಕರೂ ಅವನನ್ನು ಕೀರ್ತಿಶೇಷ ನೆಪೋಲಿಯನ್ನನಿಗೆ ಹೋಲಿಸುತ್ತಾ ಬಂದಿದ್ದಾರೆ. ರಣಕ್ಷೇತ್ರಗಳ ವಿಷಯದಲ್ಲಂತೂ ನೆಪೋಲಿಯನನ್ನು ಹಿಟ್ಲರ್ ಮಿಗಿಸಿದ್ದಾನೆ ಎನ್ನುವವರೂ ಇದ್ದಾರೆ.

ನೆಪೋಲಿಯನ್ ಫ್ರಾನ್ಸನ್ನು ಪುನರ್ರಚಿಸಿದ್ದಾಗ ನಾಗರಿಕ ಹಕ್ಕುಬಾಧ್ಯತೆಗಳನ್ನು ಕಾಪಾಡುವ ವ್ಯವಸ್ಥೆಯಿತ್ತು.

ಹಿಟ್ಲರ್ ಜರ್ಮನಿಯಲ್ಲಿ ತನ್ನ ಅಧಿಕಾರವನ್ನು ಪ್ರತಿಷ್ಠಿಸಿದಾಗ ಜರ್ಮನ್ ಜನತೆಯ ಹಕ್ಕುಬಾಧ್ಯತೆಗಳನ್ನು ನೆಲಸಮ ಮಾಡಿದ.

ದಾರಿದ್ರ್ಯ ದೇವಿಯ ಮಡಿಲಿಂದ!

ಇಬ್ಬರೂ, ಉಚ್ಚ ತರಗತಿಗೆ ಏರಿದರು. ಕೆಲವೇ ಕಾಲದೊಳಗೆ, ತಮ್ಮ ರಾಷ್ಟ್ರಗಳ ಸರ್ವಾಧಿಪತಿಗಳೆನ್ನಿಸಿಕೊಂಡರು. ನೆಪೋಲಿಯನ್ ತಾನು ಬ್ರಿಯೆನ್ನಿನ ಸೈನಿಕ ಶಿಕ್ಷಣ ಶಾಲೆಯಲ್ಲಿ ಕಲಿಯುತ್ತಿದ್ದಾಗ, "ನನ್ನನ್ನೆಲ್ಲರೂ ದರಿದ್ರ—ಬಡವ ಎಂದು ಸಂಗಾತಿಗಳೆಲ್ಲ ಗೇಲಿ ಮಾಡುತ್ತಿದ್ದಾರೆ" ಎಂದು ತನ್ನ ತಂದೆಗೆ ಪತ್ರ ಬರೆದಿದ್ದ.

ವಿಯನ್ನಾದಲ್ಲಿ ಬೀದಿಯ ಹುಡುಗನಂತೆ ಅಲೆದಾಡಿದಾಗಲೂ, ಅನಾಥಾಲಯದಲ್ಲಿ ವಾಸಿಸುತ್ತಿದ್ದಾಗಲೂ ಕಳೆದ ಮಹಾಯುದ್ಧದಲ್ಲಿ ಸಾಮಾನ್ಯ ಸೈನಿಕನಂತೆ ಹಿಟ್ಲರ್ ಯುದ್ಧ ಮಾಡಿದಾಗಲೂ ತನ್ನ ದಾರಿದ್ರ್ಯವನ್ನೇ ಸ್ಮರಿಸುತ್ತಿದ್ದಿರಬೇಕು.

ಇಟೆಲಿಯ ಮೇಲಿನ ಜೈತ್ರ ಯಾತ್ರೆಯ ಬಳಿಕ, ನೆಪೋಲಿಯನ್ ಹೇಳಿದ್ದ—"ಇತರರ ಅನುಮತ ಚುನಾವಣೆಗಳಿಲ್ಲದೆ, ಸ್ವಪ್ರತಿಷ್ಠೆಯ ಬಲದಿಂದ ಪ್ರಗತಿಗೆ ಬಂದು, ಜಗದ್ವಿಖ್ಯಾತನಾಗುವ ವೀರನೊಬ್ಬನ ಅವಶ್ಯಕತೆ ನಮ್ಮ ರಾಷ್ಟ್ರಕ್ಕಿದೆ," ಎಂದು,

ಹಿಟ್ಲರ್ ಕೂಡಾ, ತಾನು ಅಧಿಕಾರಕ್ಕೆ ಬರುವ ಮೊದಲು ಆಗಿನ ತನ್ನ ಸಂಗಾತಿ ಥಿಸೆನ್ನನೊಡನೇ ಹೀಗೆಯೇ ಹೇಳಿರಬಹುದೇನು?

ಪರ ದೇಶೀಯರು

ಆ ಫ್ರಾನ್ಸಿನ ಸರ್ವಾಧಿಕಾರಿ ಜನಿಸಿದುದು ಇಟೆಲಿಯಲ್ಲಿ. ಈ ಜರ್ಮನಿಯ ಸರ್ವಾಧಿಪ ಜನ್ಮವೆತ್ತಿದುದು ಆಸ್ಟ್ರಿಯಾದಲ್ಲಿ. ಅವರವರ ಹಿಂಬಾಲಕರಿಗೆ, ರಾಷ್ಟ್ರದ ಜನರಿಗೆ ಅವರಿಬ್ಬರೂ ಪರದೇಶೀಯರು.

ಪ್ಯಾರಿಸ್—ಬರ್ಲಿನುಗಳು ಅವರಿಬ್ಬರ ಜನ್ಮಸ್ಥಾನಗಳ ಉತ್ತರದಲ್ಲಿದ್ದುವು.

ಇಬ್ಬರೂ ದಕ್ಷಿಣದಿಂದ ಉತ್ತರಕ್ಕೆ ಸಾಗಿದರು.

ಆದರೆ ನೆಪೋಲಿಯನ್ ಪ್ರತಿಷ್ಠಿತ ಕುಟುಂಬಕ್ಕೆ ಸೇರಿದ್ದ. ಹಿಟ್ಲರ್ ಸಾಮಾನ್ಯರ ಕುಟುಂಬದಲ್ಲಿ ಹುಟ್ಟಿದ.

ಅವರವರ ಆಶೆ

ನೆಪೋಲಿಯನ್ ವಿದ್ಯಾವಂತ; ಆದರೆ ಹಿಟ್ಲರ್ ಶಾಲೆಗಳ ಮುಖ ಕಂಡವನೇ ಅಲ್ಲ.

ನೆಪೋಲಿಯನ್, ಸಾಹಿತ್ಯದ ಕಡೆಗೆ ಗಮನವಿತ್ತು,—ಒಮ್ಮೆ ಕವಿಯಾಗಬೇಕೆಂದೂ ಭಾವಿಸಿದ್ದ.

ತಾನು ದೊಡ್ಡ ಚಿತ್ರಕಾರನಾಗಬೇಕೆಂದು ಹಿಟ್ಲರ್ ಮಹಾ ಸಾಹಸ ಮಾಡಿದ್ದ.

ಮೆಲ್ಲ ಮೆಲ್ಲನೆ, ಉತ್ತಮ ತರಗತಿಯ ಸ್ಥಾನಗಳಿಗೆ ನೆಪೋಲಿಯನಿಗೆ ತೇರ್ಗಡೆಯಾಗುತ್ತಿತ್ತು. ಅವನು ತನ್ನ ಬುದ್ಧಿಶಕ್ತಿಯನ್ನು ವಿಶಾಲಗೊಳಿಸಿದ್ದ.

ಹಿಟ್ಲರ್, ಅಂತಹ ಭಾಗ್ಯವೇ ಇಲ್ಲದೆ, ಜರ್ಮನ್ ಭಾಷೆಯೊಂದನ್ನು ಹೊರತು ಬೇರಾವ ಭಾಷೆಯನ್ನೂ ಅರಿಯದೆ ತನ್ನ ಮಾತೃ ಭಾಷೆಯ ಧಾರಾಳ ಪುಸ್ತಕಗಳನ್ನೋದಿದ. ಬರೆಯುವ ಹಂಬಲ ಹೆಚ್ಚಲು,—ಬರೆಯ ತೊಡಗಿದ,—ಒಳ್ಳೆಯ ಬರಹಗಾರನಾದ. ಇದರ ಪರಿಣಾಮವಾಗಿಯೇ ಉತ್ತಮ ಉಪನ್ಯಾಸಕನೂ ಆದ.

"ಹೆಚ್ಚು ಮಕ್ಕಳ ತಾಯಿ"

"ಫ್ರಾನ್ಸಿನಲ್ಲಿ ಶ್ರೇಷ್ಠ ಹೆಂಗುಸಾರು?" ಎಂದು ನೆಪೋಲಿಯನ್, ಒಮ್ಮೆ ಪ್ರಶ್ನಿಸಲ್ಪಟ್ಟಾಗ, "ಅತಿ ಹೆಚ್ಚು ಮಕ್ಕಳ ತಾಯಿ" ಎಂದು ಉತ್ತರ ಬಂದಿತ್ತು! ಅಂತಹ ಸಂದರ್ಭಗಳಲ್ಲಿ ಆಡೋಲ್ಫನ ಉತ್ತರವಾದರೂ ಅದೇ ಆಗಿರಬಹುದು.

ಸಾಹಿತ್ಯ ಸ್ನೇಹಿತ

ಜರ್ಮನಿಯ ಹೆಸರಾಂತ ಸಾಹಿತಿ ಗೋಥೆಯೊಡನೆ, ನೆಪೋಲಿಯನ್ನಿಗೆ ಮಿತ್ರತ್ವವಿತ್ತು. ಮೋಸ್ಕೊದಲ್ಲಿ, ಪರಾಜಿತನಾಗಿ, ಹಿಂದಕ್ಕೆ ಪಲಾಯನ ಮಾಡುತ್ತಿದ್ದಾಗಲೂ, ವೀಮಾರ್ ಎಂಬಲ್ಲಿ ತಳ ಊರಿದ;—ಗೋಥೆಗೆ ಶುಭಾಶ್ವಾಸನೆಗಳನ್ನು ಕಳುಹಿಸುವುದಕ್ಕಾಗಿ.

ಯುದ್ಧದ ಸಮಯದಲ್ಲೂ, ನೆಪೋಲಿಯನ್, ಫೋರ್ಸ್ಟಿಲಿಯ ಪ್ರಖ್ಯಾತವಾದ ದುರಂತ ನಾಟಕಗಳನ್ನು ಓದುತ್ತಿದ್ದ."—ಓ! ನಾನು ಅವನನ್ನೊಬ್ಬ ಅರಸು ಕುಮಾರನನ್ನಾಗಿ ಮಾಡಬೇಕಿತ್ತು!" ಎಂದನಂತೆ;—ಈ ಸಾಹಿತಿಯ ಕುರಿತು ನೆಪೋಲಿಯನ್ ಒಮ್ಮೆ.

ಹಿಟ್ಲರನ ವಿಷಯವಾಗಿ ಈ ಕುರಿತು ಹೆಚ್ಚು ಹೇಳುವುದಕ್ಕಿಲ್ಲ.

ಯುರೋಪಿನಲ್ಲಿ ನವ ವ್ಯವಸ್ಥೆ

"ಅಖಿಲ ಯುರೋಪಿನ ಉದ್ಧಾರ,—ಅದು ಒಬ್ಬ ನಾಯಕನ ಅಧೀನದಲ್ಲಿ ಬರುವ ತನಕ ಆಗುವುದಿಲ್ಲ," ಎಂದು ನೆಪೋಲಿಯನ್ ಹೇಳುತ್ತಿದ್ದ. ಹಿಟ್ಲರಾದರೂ ಆ ಕಾರ್ಯವನ್ನೇ ತಾನು ಕೊನೆಗಾಣಿಸುವವನಂತೆ "ಯುರೋಪಿನ ನವ ವ್ಯವಸ್ಥೆ"ಯ ಕುರಿತು ಕೂಗಾಡುತಿದ್ದಾನೆ.

ಇಬ್ಬರೂ ತಮಗೆ ಬೆಂಬಲ ಬರುವುದಕ್ಕಾಗಿ ತರುಣ ವರ್ಗದ ಸಹಾಯವನ್ನು ಪೇಕ್ಷಿಸಿದವರು.

ಪ್ರತಿಯೊಂದು ನೆರೆ ರಾಷ್ಟ್ರವನ್ನು, ನೆಪೋಲಿಯನ್ ಆಕ್ರಮಿಸಿದ್ದಾಗಲೂ, "ಆ ರಾಷ್ಟ್ರದ ಉದ್ಧಾರಕ್ಕಾಗಿ" ಎಂದು ಹೇಳದಿರುತ್ತಿರಲಿಲ್ಲ. ಹಿಟ್ಲರಾದರೂ ಅದನ್ನೇ—ಆ ಮಂತ್ರವನ್ನೇ ಜಪಿಸುತ್ತಿದ್ದಾನೆ.

ಈ ವಿಷಯಗಳೆಲ್ಲಾ, ಹಿಟ್ಲರ್ ನೆಪೋಲಿಯನ್ನನ ಆತ್ಮವೃತ್ತವನ್ನು ಜೆನ್ನಾಗಿ ಅಭ್ಯಸಿಸಿರಬೇಕೆಂದು ಸೂಚಿಸುತ್ತವೆಯೆ?

ಸಮರ ರಂಗದಲ್ಲಿ

ನೆಪೋಲಿಯನ್ ಉಪಯೋಗಿಸಿದ ವಿಧಾನಕ್ಕೂ, ಹಿಟ್ಲರನ ವಿಧಾನಗಳಿಗೂ ಏನೇನೂ ವ್ಯತ್ಯಾಸವಿಲ್ಲ. ನೆಪೋಲಿಯನ್ ವೇಗ—ತೀಕ್ಷ್ಣತೆಗಳ ಮೇಲೆ ಹೊಂದಿಕೊಂಡಿದ್ದು, ವಿರೋಧ ಪಕ್ಷೀಯರ ಹಳೆಯ ತರದ ಯುದ್ಧವಿಧಾನದಿಂದಾಗಿ, ಸದಾ ಜಯಶೀಲನಾಗುತಿದ್ದ. ಹಿಟ್ಲರನ "ಬ್ಲೀಜ್ ಕ್ರೀಗ್"ಆದರೂ ಇದೇ ಮಾದರಿಯದು.

ಅವರಿಬ್ಬರು

ಅಮೆರಿಕದ "ನ್ಯೂಯಾರ್ಕ್ ಟೈಮ್ಸ್" ಪತ್ರಿಕೆಯಲ್ಲಿ ಲೇಖಕರೊಬ್ಬರು ಹಿಟ್ಲರ್ ನೆಪೋಲಿಯನಿಗಿಂತ ಮಿಗಿಲಾಗಿದ್ದರೂ, ಇರಬಹುದು" ಎಂದಿರುವರು. ಇದರ ಸತ್ಯತೆಯನ್ನು ಭವಿಷತ್ತು ನಿರ್ಧರಿಸುವುದು.

(೬ನೇ ಪುಟಕ್ಕೆ ಮುಂದರಿಸಿಯದೆ)

ಕಾಲಿನ ಹುಣ್ಣು ಮತ್ತು ವ್ರಣ
ಅತ್ಯಾಶ್ಚರ್ಯಕರವಾಗಿ ಗುಣವಾಗುವುದು
— ಸಾಂಬಕ್ —
ಕುರೂಪ ಕಲೆಗಳನ್ನು ಳಿಯಗೊಡುವುದಿಲ್ಲ.

ಕಾಲು ನೋವು, ವಿಷಮಯ ವ್ರಣ ಆಥವಾ ಬೊಕ್ಕೆಗಳಿಂದ ನೀವು ಸಂಕಟಪಡುವಿರಾದರೆ, ಸಾಂಬಕ್ ಆತ್ಯಾಶ್ಚರ್ಯಕಾರಿ ಚಿಕಿತ್ಸೆ ಎಂದು ಕಂಡುಕೊಳ್ಳುವಿರಿ. ನೀವು ಮಾಡಬೇಕಾದುದೆಂದರೆ ಬೇನೆಯ ಜಾಗದ ಮೇಲೆ ಸಾಂಬಕನ್ನು ಸರಿಯಾಗಿ ತಿಕ್ಕಿ ಲೇಪಿಸಿ ಬ್ಯಾಂಡೇಜು ಕಟ್ಟರಿ.

ಸಾಂಬಕ್‌ನಲ್ಲಿರುವ ಉತ್ತಮ ಸಸ್ಯ ತೈಲ್ಯಗಳು ಚರ್ಮದೊಳಗೆ ಹೀರಲ್ಪಟ್ಟು, ನೋವು ಉಪಶಮನಗೊಂಡು, ಉರಿಬಾವು ತಗ್ಗಿ, ಸೋರುವುದೂ ಆರುತ್ತದೆ. ಸಾಂಬಕ್ ಕಲೆಯೊಂದೂ ಉಳಿಯದಂತೆ ವಾಸಿಮಾಡುತ್ತದೆ.

ಸಾಂಬಕ್ ಒಂದು ರೂಪ್ಯಾ ಆಥವಾ ರೂ. 2–4–0; ಸಾಬೂನ್ ರೂಪ್ಯಾ ಒಂದು. ಪೌಡರು ಒಂದು ರೂಪ್ಯಾ. ಏಜೆಂಟರು:— ಮೆಸರ್ಸ್ ದಾಧಾ & ಕೊ., ಪಿ. ಟಿ. ಮದ್ರಾಸು.

ಯಾವಾಗಲೂ ಸಾಂಬಕ್ ಉಪಯೋಗಿಸಿ

ZAM-BUK

ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾಗಿದೆ

ಇದ್ದುದನ್ನು ಇದ್ದಂತೆ ಹೇಳುತ್ತೇನೆ. ಶಂಕರು ವಿಲಾಸಿಯಲ್ಲ. ಯಾರು ಏನು ಬೇಕಾದರೂ ಆಡಿಕೊಳ್ಳಲೊಲ್ಲರೇಕೆ? ಕವಿಯಾದೊಡನೆಯೇ ವಿಲಾಸಿಯಾಗ ಬೇಕೆಂದಿದೆಯೇನು?

ಅವನು ನನ್ನ ಆಪ್ತ; ಜೀವದ ಗೆಳೆಯ. ಆತ ನನ್ನಿಂದ ಬಚ್ಚಿಟ್ಟ ರಹಸ್ಯ ಲ್ಲ. ನನಗರಿಯದಂತೆ ಮಾಡಿದ ರ್ಯಗಳಿಲ್ಲ. ಅಂತೆಯೇ ಅವನ ತು ಅಧಿಕಾರಪೂರ್ಣವಾಣಿಯಿಂದ ನು ಆಡಬಲ್ಲೆ; ಬರೆಯಬಲ್ಲೆ.

ಆ ದಿನ,–ತಿರುಮಲ ರಾಯರು ಕರುವನ್ನು ತಮ್ಮ ಮನೆಗೆ ಕರೆ ಯ್ದ ದಿನ,–ನಿಜವಾಗಿಯೂ ಒಂದು ರ್ದಿನ. ತಿರುಮಲರನ್ನೂ ಆಕರ್ಷಿಸು ತಹ ವ್ಯಕ್ತಿತ್ವ–ವೈಶಿಷ್ಟ್ಯ ಶಂಕರುವಿ ! ಏನಿತ್ತೋ ನಾನು ಬೇರೆ ಕಾಣೆ. ಯರು ಸಿರಿವಂತರ ಕುಲದಲ್ಲಿ ಹುಟ್ಟಿ ಗೌರವವನ್ನು ಕಾಪಾಡಿಕೊಂಡು ತ್ತಿದ್ದವರು. ಶಂಕರು, "ಸಂದೇಶ"ದ ಪಾದಕರು "ಹೋಗಲಿ ಬಿಡು" ಎಂಬ ವನೆಯಿಂದ ಕೊಡುತ್ತಿದ್ದುದ್ದಕ್ಕೆ ಕೈ ಡುತ್ತಿದ್ದ. ಆ ಇಪ್ಪತ್ತೈದು ರೂಪಾ ಗಳ ಮೇಲೆ ಆಧರಿಸಿ ಜೀವಿಸುತ್ತಿದ್ದ. ನು ಏಕಾಂಗಿ.

ಅಂತೂ ಇದಿಷ್ಟು ನಿಜ, ಶಂಕ ಕವಿತೆಗಳನ್ನೋದಿ ರಾಯರು ಂ ಗಾ ಗಿ ದ್ದಿ ರ ಬೇ ಕು. ಅವನ ವ್ಯ ಪ್ರಕೃತಿ–ಗುಣ· ನಡತೆಗಳನ್ನು ಡು, ಮುಗ್ಧರಾಗಿದ್ದಿರಬೇಕು.

ಅನುದಿನವೆಂಬಂತೆ, ಶಂಕರು ಸಂಜೆ ನ್ನೆಲ್ಲ ತಿರುಮಲ ರಾಯರಲ್ಲಿ ಕಳೆಯ ಡಗಿದ. ಎಂದಿಗಾದರೊಮ್ಮೆ ನಾವಿ ರೂ ಒಂದಾಗಿ ತಿರುಗಾಟಕ್ಕೆ ಹೋಗು ನಿತ್ತು. ಆದೂ ಅಂದಿನಿಂದ ಕೊನೆ ಂಡಿತು.

* * * *

ಹಾದಿಯಲ್ಲಿ ಆ ದಿನ ಸಿಕ್ಕಿದ.

"ಏನಪ್ಪಾ? ಪತ್ತೆಯೇ ಇಲ್ಲವಲ್ಲಾ ಕರೂ" ಎಂದೆ.

"ಬಿಡೋ!.....ಏನಾಯಿತೀಗ" ದಾತ ಉತ್ತರವಿತ್ತ ಮುಗುಳ್ನಗುತ್ತ. ಶಂಕರು ನಕ್ಕರೆ ನನಗೆ ಅಭಿಮಾನ; ಗುಳ್ನಕ್ಕರೆ ಹೆಮ್ಮೆ.

"ಸರಿಯಪ್ಪಾ, ದೊಡ್ಡವರ ಸಂಸರ್ಗ ಡಿಕೊಂಡಿದ್ದಿಯಾ....ನಾವೇನು ಳುಗಳು!...."ಎಂದೆ.

ತಲೆ ಬಾಗಿಸಿ, ಪಕ್ಕಕ್ಕೆ ತಿರುಗಿಸಿ ಕ್ಕನೆ ನಕ್ಕ ಶಂಕರು. ಆ ದೃಷ್ಟಿಯಲ್ಲಿ ೀನತನ [inferiority complex]. ತ್ತು, ನಗೆಯಲ್ಲಿ ಮಾಧುರ್ಯವಿತ್ತು. ಚ್ಚರ! ಎಚ್ಚರ!" ಎಂದೆ, ನಾನೂ ೊಳ್ಳನೆ ನಗುತ್ತಾ.

* * * *

ಶಶಿ, ತಿರುಮಲ ರಾಯರ ಮಗಳು. ಂದರ್ಶೋಪಾಸನೆ ಮಾಡುತ್ತಿದ್ದ ಳು; ಕಲಿತ ಹುಡುಗಿ,–ಧನವಂತರ ಡುಗಿ. ನಾನು ಅವಳನ್ನು ನೆನಸಿಗೆ ದುಕೊಂಡೇ, ಶಂಕರುವನ್ನು ಸಂಧಿಸಿ ಾಗ "ಎಚ್ಚರ! ಎಚ್ಚರ!" ಎಂದು ಕ್ಕಿದ್ದೆ. ನಾನು ಏನನ್ನು ಸೂಚಿಸಿದೆ ಬುದನ್ನು ಶಂಕರು ತಿಳಿದುಕೊಂಡೂ ದ್ದ.

* * * *

ಈ ವಾರದ ಕಥೆ

ಶಾಂತಿ— ಪ್ರೇಮಗಳ ನಾಡನ್ನರಸುತ್ತ . . . . !

ಬರೆದವರು: ಶ್ರೀ। "ಕುಳುಕುಂದ"

ಕಾರ್ಯಾಲಯದಲ್ಲಿ ಕುಳಿತು ಕೊಂಡು, ಬಂದಿದ್ದ ವಾರ್ತೆಗಳ ಮೇಲೆ ಕತ್ತರಿ ಪ್ರಯೋಗ ನಡೆಸುತ್ತ ಇದ್ದೆ. ಭರಭರಾಟಿಯಿಂದ ಬಾಗಿಲು ನೂಕಿ ಕೊಂಡು ಶಂಕರು ಒಳ ಬಂದ. ಕಂಕು ಳಲ್ಲಿ ಒಂದೆರಡು ಕರಡು ಹಾಳೆಗಳ ಪುಸ್ತಕಗಳಿದ್ದುವು. ಬಲಿಯಲ್ಲಿ ಅಡಿ ಮೊಗವಾಗಿ ಬಿದ್ದಿದ್ದ ಕುರ್ಚಿಗೆ ಬೆರಳು ತೋರಿಸಿದೆ. ಅದನ್ನು ಹಿಡಿದೆತ್ತಿ, ನೆಟ್ಟಗೆ ನಿಲ್ಲಿಸಿ, ಕುಳಿತ.

ಬರೆದ ಕಾಗದಗಳ ಮೇಲೆ, ಕೆಂಪು ಶಾಯಿ ಜೆಲ್ಲುತ್ತ ನಾನು ನಾಗಿದ್ದೆ. ಶಂಕರು, ಮೇಜಿನ ಮೇಲೆ ಮಂಡಿ ಯೂರಿ, ಅಂಗೈಗಳ ಮೇಲೆ ತಲೆಯಾನಿಸಿ ಕುಳಿತಿದ್ದ.....ಕೊಂಚ ಕವಿತೆ–ಹೊಸ ತೀನಾದರೂ ಇದ್ದರೆ ಓದುತ್ತಿ. ಯೇನಪ್ಪಾ? ಎಂದು ಕೇಳಿದೆ. ಉತ್ತರ ಬರಲಿಲ್ಲ.

ಸ್ವಲ್ಪ ತಡೆದು "ಶಂಕರೂ!.....?" ಎಂದು ಅರಚಿದೆ.

ಅವನು ನನ್ನೆಡೆಗೆ ಕಣ್ಣು ಹೊರಳಿಸಿ, "ಕೊಂಚ ಹೊರಹೋಗೋಣವೆ?" ಎಂದ.

ಕಛೇರಿಯ ಗುಡ್ಡವನ್ನೇರುತ್ತಿದ್ದೆವು. ಆ ತನಕವೂ ನಿಶ್ಶಬ್ದರಾಗಿಯೇ ಇಬ್ಬರೂ ನಾಗಿದ್ದೆವು.

"ನೀನು ಶಶಿಯನ್ನು ಬಲ್ಲೆಯೇನು?" ಶಂಕರು ಹಠಾತ್ತಾಗಿ ಪ್ರಶ್ನಿಸಿದ. ಅನಿರೀಕ್ಷಿತ ಪ್ರಶ್ನೆ. ಏಳನೆಯ ಪುಟದಲ್ಲಿ ಏನನ್ನು ಪ್ರಕಟಿಸೋಣವೆಂದು ಯೋಚಿ ಸುತ್ತಲಿದ್ದ ನಾನು, ಎಚ್ಚತ್ತು, ಏನೋ ವಿಶೇಷವಿದೆಯೆಂದುಕೊಂಡು, "ಬಲ್ಲೆ; ಬಲ್ಲೆ; ಏಕೆ? ಏಕೆ?" ಎಂದೆ.

"ಅವಳ ಕುರಿತು ನಿನ್ನ ಅಭಿಪ್ರಾಯ ವೇನು?"

"ಇದೇನಪ್ಪಾ....?"

"ಹೀಗೇ ಕೇಳಿದೆ; ಸರಿಯಾಗಿ ಉತ್ತ ರಿಸಿದರಾಯಿತಲ್ಲ!"

ನಾವು ಶಂಕರುವನ್ನು ದಿಟ್ಟಿಸಿ ನೋಡಿದೆ. ಆತ ಹುಡುಗಾಟಿಕೆಯಿಂದಿರ ಲಿಲ್ಲ. ಮುಖ ಗಂಭೀರವಾಗಿತ್ತು.

"ಏನಪ್ಪಾ ಉತ್ತರಿಸದೆ....ಕಲಿತ ಹುಡುಗಿ. ಐಶ್ವರ್ಯವಂತರ ಹುಡುಗಿ."

"ಗೊತ್ತು, ಬಿಡು....ಆಕೆ ಜೀವನದ ಸಹಚಾರಿಣಿಯಾಗಲು ಸಮರ್ಥಳೇನು?"

"ಏ ಕವಿ? ನಿನಗೆ ಮದುವೆಯ ಹುಚ್ಚೂ ಹಿಡಿಯಿತೇನು?"

ಶಂಕರು ನನ್ನ ಮುಖಭಾವವನ್ನು ನೋಡಿದ. ನನ್ನ ಕೈಗೆ ಕೈ ಹಾಕಿದ. "ಶಿವೂ,....ಮುಚ್ಚುಮರೆಯಿಲ್ಲ.... ನನಗೆ ಶಶಿಯನ್ನು ವಿವಾಹವಾಗಲೇಬೇಕಾ ಗಿದೆ. ನೀನೇನು ಹೇಳುವೆ?"

ನಾನು ಮೂಕನಂತಾಗಿ ಹೋದೆ. ಶಶಿಯ ಒಡನಾಟದಿಂದಾಗಿ ಶಂಕರು ವಿನ ಲೆಕ್ಕಣಿಕೆ, ಒಂದಷ್ಟು ಒಳ್ಳೆಯ ಕವಿತೆಗಳನ್ನಾದರೂ ಬರೆಯಲಿ ಎಂದು ನಾನು ಆಶಿಸಿದ್ದೆ. ಆದರೆ ಪರಿಸ್ಥಿತಿ ಇಂತಹ ವಿಷಮ ಮಟ್ಟಕ್ಕೂ ತಲಪುವುದೆಂದು ನಾನು ಭಾವಿಸಿರಲಿಲ್ಲ.

"ಕೃಷ್ಣಭವನಕ್ಕೆ ಹೋಗದೆ ತಿಂಗ ಳೊಂದಾಯಿತು. ಸದ್ಯಃ ಆ ಯೋಗ ವಾದರೂ ಒದಗಿತಲ್ಲ!" ಎನ್ನೋಣ ವೆನ್ನಿಸಿತು. ಆದರೆ ಇದರಿಂದ ಶಂಕರು ನೊಂದುಕೊಳ್ಳುವಂತಿದ್ದ.

ತೆರವು ಬಿದ್ದಿದ್ದ ಒಂದು ಆಸನದ ಮೇಲೆ ಕುಳಿತುಕೊಂಡೆವು.

* * * *

ಶಂಕರು ಮನಸ್ಸು ಬಿಚ್ಚಿ ಮಾತಾ ಡಿದ.

ತಿರುಮಲರಾಯರು ಆ ದೊಡ್ಡವರ ಹುಡುಗಿಯನ್ನು ಅವನಿಗೆ,—ದಾರಿದ್ರ್ಯ ದೇವಿಯ ಆರಾಧಕನಾದ ಒಬ್ಬ ಕವಿಗೆ,– ಕೊಡಲು ನಿಶ್ಚೈಸಿದ್ದರಂತೆ. ಅವಳ ಪಾಣಿಗ್ರಹಣ ಮಾಡಿಕೊಳ್ಳಲು ಶಂಕರ ನಿಗೆ ಒತ್ತಾಯಿಸಿದ್ದರಂತೆ. ವಚನ ತೆಗೆದು ಕೊಂಡಿದ್ದರಂತೆ.

ಇನ್ನು ಶಶಿಯ ವಿಚಾರ.

ಶಂಕರು ತನ್ನ ಕವಿತೆಗಳನ್ನು ಹಾಡಿ ತೋರಿಸುವುದನ್ನು ಅವಳು ಸದಾ ಕೇಳು ತ್ತಿದ್ದಳು. ಕೆಲವೊಮ್ಮೆ ನಕ್ಕು ಬಿಡು ತ್ತಿದ್ದಳು.

ಆದರೆ ಆ ನಗುವಿನಲ್ಲಿ ಉಪಹಾಸ ವಡಗಿತ್ತೆಂಬುದನ್ನು, "ನೀನೂ ಒಬ್ಬ ಕವಿಯೆ?" ಎಂಬ ತುಚ್ಛೀಕಾರವನ್ನೂ ಸರಳಹೃದಯದ ಶಂಕರು ಅರಿತಿರಲಿಲ್ಲ.

ಒಂದು ದಿನ ಸಂಜೆ, ಅವರ ಹೂ ದೋಟದಲ್ಲಿ ಶಂಕರು ವಿಹರಿಸುತ್ತಿದ್ದಾಗ ಶಶಿ ಹಿಂದಣಿಂದ ಬಂದಳು.

"ಕವಿಗಳೆ! ಬೆನ್ನ ಮೇಲೆ ಚೇಳು!.." ಎಂದು, ಶಂಕರನ ಖಾದಿ ಶರಟಿನ ಬೆನ್ನಿ ನಲ್ಲಿದ್ದ ತೂತಿಗೆ ಬೆರಳು ಹಾಕಿ, ಎಳೆದು ಹರಿದುಬಿಟ್ಟಳು. ಇಬ್ಬರೂ ನಕ್ಕರು. ಶಂಕರು ಭಾವೋದ್ರೇಕದಿಂದ ನಕ್ಕ. ಶಶಿ ಪರಿಹಾಸ ಮಾಡುತ್ತ ನಕ್ಕಳು. ತನ್ನನ್ನು ಅವಮಾನಿಸಲು ಶಶಿ ಯತ್ನಿಸಿದಳೆಂದು ನನ್ನ ಕವಿ ತಿಳಿಯಲಿಲ್ಲ!

ಅಂದು ಬೆಳಗ್ಗಿನ ಕಾಫಿಗೆ ಶಂಕರು ವಿಗೆ ಆಹ್ವಾನ ಬಂದಿತ್ತು.

ಕಾಫಿಯ ಬಳಿಕ, ಶಶಿಯ ಕೋಣೆ ಯನ್ನು ಶಂಕರು ಹೊಕ್ಕಾಗ, "ಶಶಿ, ನನ್ನನ್ನು ಪ್ರೀತಿಸುತ್ತೀಯಾ?" ಎಂದ. ಪುನಃ ಅವಳು ಹೊಟ್ಟೆ ತುಂಬ ನಕ್ಕಳು. ಆಕೆಯ ಮುಖ ಕೆಂಪೇರಿತು. ತನ್ನನ್ನು ಅವಮಾನಿಸಿದನೆಂದು ಆಕೆ ಭಾವಿಸಿ ಕೊಂಡಿದ್ದಳು.

ಆದರೆ ತಿರುಮಲರಾಯರಿಗೆ ಮಗಳ ಮೇಲೆ ಅಸಾಧ್ಯ ಪ್ರಭಾವವಿತ್ತು..... ನಾನು ಕೇಳಿದೆ, "ಶಶಿಯನ್ನು ಮದುವೆ ಯಾದರೆ ಸುಖಿಯಾಗುತ್ತೀಯಾ?" ಎಂದು.

ಶಂಕರು ಉತ್ತರರೂಪವಾಗಿ, ತನ್ನ ಕವಿತೆ ಬರೆಯುವ ಪುಸ್ತಕವನ್ನು ನನ್ನೆಡೆಗೆ ಎಸೆದ. ತೆರೆದು ನೋಡಿದೆ. ಅವನು ಬರೆದ ಅತ್ಯುತ್ಕೃಷ್ಟ ಕವಿತೆಗಳು; ಭಾವ ಗೀತೆಗಳು; ಪ್ರೇಮಗಾನಗಳು; "ಅವಳಿ ಗಾಗಿ ಬರೆದೆ" ಎಂದ ಶಂಕರು.

ನಾನು ತಲೆದೂಗಿದೆ.

* * * *

ಅವರಿಬ್ಬರೊಳಗೆ ವಿವಾಹ ಜರುಗಿ ಹೋಯಿತು.

❀ ❀ ❀ ❀

ಆ ಬಳಿಕ—ತಿರುಮಲರಾಯರು ಜಡ್ಡು ಬಿದ್ದು, ಮಗಳೊಡನೆಯೂ ಇತರ ಪರಿವಾರದೊಡನೆಯೂ ಸುಧಾರಿಸುವುದ ಕ್ಕೆಂದು ಬೆಂಗಳೂರಿಗೆ ಹೋದ ಬಳಿಕ ವಿವಾಹಾನಂತರದ ಪ್ರಥಮ ಭೇಟಿಯ ಕುರಿತು ವಿಸ್ತಾರವಾಗಿ ಶಂಕರು ಹೇಳಿದ.

ಆಕೆ ಸಿಡುಮೊಗದಿಂದ, "ಕವಿ ವರ್ಯರಿಗೆ ಕವಿತೆ ಕಳುಹಿಸಲು ಅಂಚೆಯ ಚೀಟಿ ಬೇಕೇನು?" ಎಂದು ಒಂದು ದೊಡ್ಡ 'ಸ್ಟ್ಯಾಂಪ್ ಆಲ್ಬಮ್'ನ್ನು ಶಂಕರು ವಿನತ್ತ ಎಸೆದಿದ್ದಳಂತೆ. ಉತ್ತಮ ಲೇಖನಿ,

(೧೫ನೇ ಪುಟಕ್ಕೆ ಮುಂದರಿಸಿಯುದೆ)

To serve you —
— Is our Ambition.

Resources of over A Crore and over Forty Lacs of Surplus Funds—these are the means by which we can serve you. The men in our thirty-eight offices, from the senior-most Director to the junior-most employee, are all eager to serve you. Come in to-day and tell us how we can serve you. Or, if you so prefer, we will call upon you at your request.

CANARA BANK, LIMITED.
ESTD: 1906.

ಕಳೆದ ವಾರ

ಈ ದುಡ್ಡಿದ್ದರೆ!

"ಪಬ್ಲಿಕ್ ಎಕೌಂಟ್ಸ್ ಕಮಿಟಿ"ಯ ಮಿಾಟಿಂಗ್ ಒಂದು ಈಚಿಗೆ ಸಿಮ್ಲದಲ್ಲಿ ನಡೆಯಿತು. ಅದರಲ್ಲಿ ಜನಾಂಗ ಸಂಘದ ಕ್ಷಯಿಸಿದ ಚಟುವಟಿಕೆಗಳ ಕಾರಣ ದಿಂದ ಆ ಸಂಘದ ಖರ್ಚನ್ನೂ ಸಹಜ ವಾಗಿ ತಗ್ಗಿಸಲಾಯಿತೆಂದು ಪ್ರಕಟಗೊಂ ಡಿತು. ಪರಿಣಾಮವಾಗಿ ಇಂಡಿಯದ ವಂತಿಗೆಯ ಪೊತ್ತವೂ ಕಡಿಪೆಯಾ ಯಿತು. ೧೯೩೯-೪೦ ರಲ್ಲಿ ಇಂಡಿಯ ದಿಂದ ಈ ಸಂಘಕ್ಕೆ ಸಲ್ಲಿಸಲಾದ ವಂತಿಗೆ ರೂ. ೧೦,೭೦,೫೦೦; ಈ ವರ್ಷದಲ್ಲಿ ಅದು ರೂ. ೭,೫೦,೦೦೦ಕ್ಕೆ ಇಳಿಸಲಾ ಗಿದೆ. ಇದೇನೋ ಶುಭ ವಾರ್ತೆಯೇ. ಆದರೆ ಈ ವಾರ್ಷಿಕ ವಂತಿಗೆ ತೆತ್ತು ದಕ್ಕೆ ಪ್ರತಿಫಲವಾಗಿ, ಇಂಡಿಯಕ್ಕೆ ದೊರಕಿದು ದೇನೋ ತಿಳಿಯದು. ಮುಖ್ಯ ಈ ವಂತಿಗೆಯನ್ನು ನಮ್ಮಿಂದ ಕೊಡಿಸಲು ಜವಾಬುದಾರರಾದವರು, ಈ ದುಡ್ಡಿ ದ್ದರೆ, ಎಷ್ಟು ಮುಂದಿ ಭಾರತದ ಹೆಸಿದ ಮುಂದಿಗೆ ಅನ್ನ ಕೊಡಬಹುದೆಂದು ಎಂದಾದರೂ ಯೋಚಿಸಿರುವರೇ? ಎಂಬು ದಿದೂ ಗೊತ್ತಿಲ್ಲ.

* * * *

"ಇಂಡಿಯವು ಕೈಗಾರಿಕೆಯ ಒಂದು ಕೇಂದ್ರವಾಗಿ

ಬೆಳೆಯುವಂತೆ, ಅದರ ಭಾವೀ ಮಹತ್ವವು ಹೆಚ್ಚುವಂತೆ, ಈಗಲೀಗ ಸರಿ ಯಾದ ತಳಹದಿಯನ್ನು ಹಾಕಿದಂತಾ ಯಿತು" ಎಂದು, "ಈಸ್ಟರ್ನ್ ಗ್ರೂಪ್ ಸಪ್ಲೈ ಕೌನ್ಸಿಲಿನ" ಆಸ್ಟ್ರೇಲಿಯದ ಪ್ರತಿ ನಿಧಿಗಳಾದ ಮಿ। ಬೆರ್ಟ್ರಮ್ ಸ್ಟಿವಿನ್ಸ್ ರವರು, ಜಮದೇಶ್ಪುರ ಮತ್ತು ಬರ್ನ್ ಪುರಗಳನ್ನು ನೋಡಿಕೊಂಡು ಬಂದ ಮೇಲೆ ತಿಳಿಸಿರುತ್ತಾರೆ. ಈ ದೇಶದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳ ಮಟ್ಟಿಗೆ ಈ ಪೂತು ಅಸ್ಪಯಿಸಬಹು ದಾದರೂ, ಸಾಮಾನ್ಯವಾಗಿ ಇಂಡಿಯದ ಒಟ್ಟು ಕೈಗಾರಿಕೆಗಳ ಮೇಲ್ಮೈಯ ವಿಷಯ ದಲ್ಲಿ ಈ ಮಾತನ್ನು ಒಪ್ಪಿಕೊಳ್ಳಲು ಬರುವುದಿಲ್ಲ. ಹಿಂದೆ ಹಲವು ಬಾರಿ ಹೀಗೇ "ಇಂಡಿಯದ ಕೈಗಾರಿಕೆಗಳ ಮಹೋ ನ್ನತ ಸ್ಥಾನಕ್ಕಾಗಿ ತಳಹದಿಯನ್ನು ಹಾಕಿದೆ" ಎಂದು ಸಾರಲಾಗಿದ್ದಿತು. ಆನ್ನುವಾಗ, ಈ ತಳಹದಿಯ ಮೇಲೆ ಆ ಮಹೋನ್ನತ ಮಂದಿರದ ನಿರ್ಮಾಣವು ಎಂದು ಆಗುವುದೆಂದು ಯಾರು ಹೇಳ ಬಲ್ಲರೋ?

* * * *

ಬರಹಗಳಲ್ಲೆಲ್ಲ ಉರ್ದು

ಸಾಹಿತ್ಯದ ಕೈ ಬರಹವನ್ನೋದಿ ತಿಳಿ ಯುವುದು ಬಹಳ ಪ್ರಯಾಸವಂತೆ. ಕೆಲ ವೇಳೆ, ತಾನು ಬರೆದುದನ್ನೇ ಬರೆದವನೇ ಓದುವುದೂ ಕಷ್ಟವೆಂದೂ ಹೇಳಲಾಗು ತ್ತಿದೆ. ಈಚಿಗೆ ಅಲ್ಲಹಾಬಾದಿನ ಒಂದು ಪೊಕದ್ದಪೆಯ ತೀರ್ಮಾನವು ಇಂತಹ ಕೆಲ ಕಾಗದ ಪತ್ರಗಳ ಮೇಲೆ ಆದರಿಸಿ ಕೊಂಡಿತ್ತು. ಈ ವ್ಯಾಜ್ಯ ಹಿಂದೂ ಮುಸ್ಲಿಮರೊಳಗೆ; ಒಂದು ಸ್ಥಳದ ಕುರಿ ತಾಗಿ. ಹಿಂದೂಗಳು ಅದನ್ನು ಒಬ್ಬ ಮಹಾತ್ಮ ಹಿಂದೂವಿನ ಸಮಾಧಿ ಎಂದು ಸಾಧಿಸಿದರು; ಮುಸ್ಲಿಮರು ಅದು ಮುಸ ಲ್ಮಾನ್ ಭಕ್ತನೊಬ್ಬನ ಗೋರಿ ಎಂದರು. ದಾಖಲೆಯಲ್ಲಿ ಬರೆದಿದ್ದ ಹೆಸರನ್ನು ಹಿಂ ದೂಗಳು "ಮಕಾನ್ ಜೈರಾತ್ ಹನೂ ಮಾನ್" ಎಂದು ಓದಬಹುದಾಗಿದ್ದರೆ, ಮುಸ್ಲಿಮರು ಅದನ್ನೆ "ಮಕಾನ್ ಜೈರಾತ ಮುನ್ನೋಖಾನ್" ಎಂದು ಓದಲೂ ಬರುವಂತಿದ್ದಿತು. ಹೈಕೋ ರ್ಟಿನವರು ಅದನ್ನು ಮುಸ್ಲಿಮರ ಪರ ವಾಗಿ ತೀರ್ಪು ಕೊಟ್ಟರು. ಆದರೆ ಈಗಿನ ಸುಧಾರಣೆಯ, ನಾಗರಿಕತನದ ಕಾಲ ದಲ್ಲಿ, ಆ ಉರ್ದೂ ಬರಹದ ಇಂತಹ ಸಂದಿಗ್ಧತೆಯನ್ನೂ ಪರಿಹರಿಸುವ ಜಳ ವಳವೇಕಿಲ್ಲವೋ ಅದೇ ಆಶ್ಚರ್ಯ!

* * * *

ಎಲ್ಲಿಯಾದರೂ ವಿಮಾನ ದಾಳಿ

ಆಗುವ ಸಂಭವಗಳಲ್ಲಿ, ಆಗ ಮೃತ ರಾಗುವವರನ್ನು ಗುರುತಿಸಿ, ಆ ಮೃತ ಶರೀರಗಳನ್ನು "ಏಲೆ" ಮಾಡುವ ಈ ಗಭೀರ ಕಾರ್ಯದ ಏರ್ಪಾಡುಗಳು, ನಮ್ಮ ಹಿಂದುಸ್ಥಾನದ ಹಲವು ದೊಡ್ಡ ನಗರ ಶಹರುಗಳಲ್ಲಿ ಈಗ ನಡೆಯುವಂತೆ ತಿಳಿದು ಬಂದಿದೆ. ಬಂಗಾಳ ಸರಕಾರವು ಈ ಕುರಿತು ಒಂದು ಯೋಜನೆ ತಯಾ ರಿಸಿ, ಅದರಲ್ಲಿ "ಸಿವಿಲಿಯನ್ ಯುದ್ಧ ಮರಣಗಳ ಸಂಸ್ಥೆ"ಗಳನ್ನು ಸ್ಥಾಪಿಸುವ ಸಲಹೆ ಕೊಟ್ಟಿದೆ; ದಹನ ಹಾಗೂ ಸಮಾಧಿ ಕಾರ್ಯಗಳ ಸಮಿತಿಯವರ ಸೂಚನೆಗಳೇನೆಂದೂ ಕೇಳಿದೆ. ಇದನ್ನೆಲ್ಲ ಹೊಡೂವಾಗ ವಿಷಾದವಾಗುತ್ತಿದೆಯಾ ದರೂ, ಇಂಡಿಯಕ್ಕೆ ಶತ್ರುಗಳು ಸಮೂ ಪಿಸುತ್ತ ಬರುವರೆಂಬುದರಿಂದ, ಇಂಡಿಯ ದ ವೈಲಿನ ವೈರಿ ದಾಳಿಗಳಿಂದ ತಪ್ಪಿಸಿ ಕೊಳ್ಳಲು ಉಪಾಯವೇನೂ ಇಲ್ಲವೆಂಬು ದನ್ನು ನಾವೆಂದಿಗೂ ಮರೆಯಲಾಗದು. ಆದರೆ ವೈರಿಗಳ ಆಘಾತ ಬಲವಾಗಿದ್ದರೆ, ಮನುಷ್ಯ ದೇಹವೆಲ್ಲ ನೂರಾರು ಚೂರು ಚೂರಾಗುವುದರಿಂದ, ಆಗ ಗುರುತಿಸುವ ಕೆಲಸವೇ ಯಾರಿಗೂ ಇಲ್ಲವೆಂಬುದನ್ನು ಯಾರೂ ಒಪ್ಪಲೇ ಬೇಕಾಗಿದೆ.

* * * *

ಬಹಳ ಗಟ್ಟಿಯಾದುದು
ಮತ್ತು ಬಹಳ ತಕ್ಕುದಾದ್ದು!
ವೆಸ್ಟ್ ಎಂಡ್ ಕ್ವೀನ್ ಎನ್ನಿ ಬಹಳ ಗಟ್ಟಿಯಾದ ಮಿಲಿಟರಿ ಮಾದರಿಯ ವಾಚು. ಹಲವು ಸೈನ್ಯಖಾತೆಯವರಲ್ಲಿ ಇದು ಪಡೆದ ಮೆಚ್ಚುಗೆಯು ಅತ್ಯಾ ಶ್ಚರ್ಯಕರ. ವಿಶ್ವಾಸಾರ್ಹಕ ಹಾಗೂ ಹಣಕ್ಕೆ ತಕ್ಕ ಯೋಗ್ಯ ಉಪಯುಕ್ತತೆ ಗೊಡುವಂಥದ್ದು. ಹೊರಗಿನ ಕೆಲಸ ಮಾಡುವಾಗ ದೈಹಿಕ ಲುಉತ್ತಮ ಆಯ್ಕೆಯದು. ಹಾಕೆಟ್ ಮತ್ತು ರಿಸ್ಟ್ ನಮೂನೆಗಳಲ್ಲಿ ಸಿಗು ತ್ತದೆ.
ಕ್ವೀನ್ ಎನ್ನಿ— 7 ಜ್ಯುವೆಲ್‌ಗಳು
ನಿಕ್ಕಲ್ ಬೆಳ್ಳಿಯ ಕೇಸ್-ಸಾದಾ ರೂ. 26
ರೇಡಿಯಂ ಅಂಕೆ, ಮುಳ್ಳುಗಳ ಸಹಿತ ರೂ. 29
ಹಾಕೆಟ್ ವಾಚುಗಳ ಬೆಲೆಯೂ ಇವೆ. ಸಚಿತ್ರ ಉಚಿತ ಕೆಟ್ ಲಾಗಿಗೆ ಬರೆಯಿರಿ. ವೆಸ್ಟ್ ಎಂಡ್ ವಾಚ್ ಕೊ., ಬೊಂಬಾಯಿ, ಮತ್ತು ಕಲ್ಕತ್ತ.
WEST END WATCH CO.
BOMBAY
CALCUTTA

ಅಬಿಸೀನಿಯಾ ಚಕ್ರವರ್ತಿಗಳು ಸ್ವದೇಶಕ್ಕೆ ಮರಳುತ್ತಿದ್ದಾರೆ.

ಸ್ವದೇಶದ ಅಂಗರಕ್ಷಕರ ಸಹಿತರಾಗಿ ಅಬಿಸೀನಿಯದ ಚಕ್ರವರ್ತಿಗಳು ಸ್ವದೇಶಕ್ಕೆ ಮರಳಿದ್ದಾರೆ ಈ ಚಿತ್ರದಲ್ಲಿ, ಹೈಲ್‌ಸಿಲಾಸಿಯವರು ತಮ್ಮ ಅಂಗರಕ್ಷಕ ಮತ್ತು ಪುರೋಹಿತರ ಸಹಿತ, ಕಾಡಿನ ಪಯಣಮಾಡಿ ಬರುತ್ತಿರುವುದು ಕಂಡುಬರುತ್ತಿದೆ.

ಜರ್ಮಕ್ಸ್

ಉಷ್ಣ ತುರಿಕೆ, ಕಡಿತ, ಚರ್ಮದ ಬಾತು ಕೊಳ್ಳುವಿಕೆ, ಮುದ್ದಣ, ಗಾಯ ಇತ್ಯಾದಿಗಳಿಗೆ ನಾನು ಉಪಯೋಗಿಸಿದ್ದೇನೆ ಮತ್ತು ಇದು ಚರ್ಮ ರೋಗಗಳಿಂದ ಬಾಧೆಪಡುವವರಿಗೆ ನಿಜಕ್ಕೂ ಸ್ವರ್ಗತುಲ್ಯ ವರಪ್ರದವಾಗುದಾಗಿದೆ ಎಂದು ಮಿ॥ ಅಬ್ದುಲ್ ಹಮಿದ್, ನ್ಯೂ ಡೆಲ್ಲಿ, ಇವರು ಬರೆಯುತ್ತಾರೆ

ಇತರರಿಗೆ ಜರ್ಮಕ್ಸ್ ಅದೇನನ್ನು ಮಾಡಿರುವದೋ ಅದನ್ನದು ನಿಮಗೆ ಮಾಡದಿರದು.

ಲಿಟ್ಲ್ಜರ ಓರಿಯಂಟಲ್ ಬಾಂ ತಯಾರಿ

ಜಬಲ್ಪುರದ ಹಿಂದುಗಳು

ಈ ವರ್ಷ ದಸರಾ ಅಥವಾ ಕಾಳೀ ಪೂ ಜೆ ಯ ನ್ನು ಆಚರಿಸುವುದಿಲ್ಲವಾಗಿ ತೀರ್ಮಾನಿಸಿರುವರೆಂದು ತಿಳಿದು ಬಂದಿದೆ. ಇದಕ್ಕೆ ಕಾರಣ ಅಲ್ಲಿ ಜ್ಯಾರಿಯಲ್ಲಿರುವ ೧೫೪ನೇ ಪ್ರಕರಣ. ಈ ಸಂದರ್ಭದಲ್ಲಿ ಹಿಂದೂ ಮುಖಂಡರು, ಈ ಹಬ್ಬದ ಸಮಯದಲ್ಲಿಯಾದರೂ ಆ ಪ್ರಕರಣದ ಬಿಗಿ ಸಡಲಿಸಬೇಕೆಂದು ಸ್ಥಳೀಯಾಧಿ ಕಾರಿಗಳನ್ನು ಪ್ರಾರ್ಥಿಸಿದ್ದರು. ಆದರೆ ಅವರೊಪ್ಪಲಿಲ್ಲವಾಗಿ, ಅದರ ನಿಷೇಧ ಕ್ಕೆಂದು ಅವರು ದಸರಾ ಪೂಜೆಯನ್ನೇಲ್ಲಿನ ಸಿಬಿಡುವುದರಲ್ಲಿದ್ದಾರೆ. ಏನೆಂಜ, ಯಾವ ಕಾರಣದಿಂದಲೇ ಆದರೂ, ಹಿಂದೂಗಳ ಪ್ರಾಮುಖ್ಯವೂ, ಪವಿತ್ರವೂ ಆದ ದಸರಾ ಹಬ್ಬವು ಅದರ ಸಮಾರಂಭವು ನಿಲ್ಲುವಂ ತಾಗಿರುವುದು ವಿಷಾದಕರ. ಆದರೆ ಅಧಿ ಕಾರಿಗಳ ಮನಸ್ಸು ಇನ್ನಾದರೂ ಕೊಂಚ ಪ್ರಸನ್ನವಾಗದೆನ್ನಲು ಬರುವುದಿಲ್ಲ.

ಪೆಟ್ರೋಲಿನ ಮಿತವ್ಯಯ

ಪೆಟ್ರೋಲನ್ನು ಉಳಿಸುವ ವಿಚಾರ

೧೫ ಸೂಚನೆಗಳು

ಕೆಟ್ಟ ಡ್ರೈವಿಂಗ್

ಏಕ್ಸಲರೇಟರ್ ಮತ್ತು ಬ್ರೇಕ ಪೆಡಲುಗಳನ್ನು ಅಕಸ್ಮಾತ್ತಾಗಿಯೂ ಬಲವತ್ತಾಗಿಯೂ ಅಷ್ಟೊಂದು ಆವಶ್ಯಕವಿಲ್ಲದೆ ಉಪಯೋಗಿಸಕೂಡದು. ಈ ಕಂಟ್ರೋಲುಗಳನ್ನು ಸರಿಯಾಗಿ ಉಪಯೋಗಿಸದಿದ್ದಲ್ಲಿ ೧೬ H. P. ಕಾರಿನ ಪೆಟ್ರೋಲಿನ ಖರ್ಚು ಗ್ಯಾಲನೊಂದರ ೫ ಮೈಲುಗಳಷ್ಟು ಹೆಚ್ಚಬಹುದು.

ಫಾಸ್ಟ್ ಡ್ರೈವಿಂಗ್

(ವೇಗತೆಯ ಓಡಿಸೋಣ)

ಘಂಟೆಯೊಂದರ ೬೦ ಮೈಲುಗಳ ವೇಗದಲ್ಲಿ ಬಿಡುವ ಕಾರಿಗೆ ಘಂಟೆಯೊಂದರ ೪೦ ಮೈಲುಗಳ ವೇಗದಲ್ಲಿ ಬಿಡುವ ಕಾರಿಗಿಂತಲೂ ಹೆಚ್ಚಿಗೆ ಪೆಟ್ರೋಲು ತನ್ನ ವೇಗತೆಗಾಗಿ ಬೇಕಾಗುವದು; ವಾಸ್ತವಿಕವಾಗಿ ೬೦ ಮೈಲುಗಳ ವೇಗತೆಗೆ ೪೦ ಮೈಲುಗಳ ವೇಗತೆಗಿಂತಲೂ ಶೇಕಡಾ ೫೫ರಷ್ಟು ಅಧಿಕ ಪೆಟ್ರೋಲು ಬೇಕಾಗುವದು. ಸಾಮಾನ್ಯ ಕಾರಿಗೆ ಅತ್ಯಂತ ಮಿತವ್ಯಯದ ವೇಗತೆಯೆಂದರೆ ಘಂಟೆಯೊಂದರ ೩೫ರಿಂದ ೪೫ ಮೈಲುಗಳ ವರೆಗಿನ ವೇಗತೆ.

ಸ್ಪಾರ್ಕ್ ಪ್ಲಗ್ಗುಗಳು

"ಸ್ಪಾರ್ಕ್ ಪ್ಲಗ್ಗು" ಉತ್ತಮ ಸ್ಥಿತಿಯಲ್ಲಿದ್ದರೇನೇ ಬೆಂಕಿ ಹತ್ತಿಸುವ ಕಾರ್ಯವು ಸರಿಯಾಗಿ ನಡೆಯುವದು. ಈ ಪ್ಲಗ್ಗುಗಳು ಸವೆದು ಹೋದಲ್ಲಿ, ಅಥವಾ ಹಾಳಾದಲ್ಲಿ ಅಥವಾ ಸರಿಯಾಗಿ ಇಡಲ್ಪಡದೇ ಇದ್ದಲ್ಲಿ ಪೆಟ್ರೋಲಿನ ಖರ್ಚು ಹೆಚ್ಚುವದು.

ಕೊಂಟ್ಯಾಕ್ಟ್ ಬ್ರೇಕರ್

ಪ್ಯಾಂಟುಗಳು

ಇವುಗಳು ಕೂಡ ಸರಿಯಾಗಿಡಲ್ಪಡದೆ, ಉತ್ತಮ ಸ್ಥಿತಿಯಲ್ಲಿಡಲ್ಪಡದೆ ಇದ್ದಲ್ಲಿ ಪೆಟ್ರೋಲಿನ ಖರ್ಚು ಜಾಸ್ತಿಯಾಗುವದು.

ಸ್ಪಾರ್ಕ್ ಏಡ್ವಾನ್ಸು

ಸ್ಪಾರ್ಕ್ ಏಡ್ವಾನ್ಸು ಮಾಡಿದುದರಿಂದಾಗಿ, ಹೆಚ್ಚಿನ ಪವರು ಏಂಜಿನಿನಲ್ಲಿ ಬೆಳೆಯುವದೆಂದು ಒಂದು ಭಾವನೆಯು. ಆದರೆ ವಾಸ್ತವವಾಗಿ ಇದು ಅಂಡರ್ ಏಡ್ವಾನ್ಸಿನಷ್ಟೇ ದುಷ್ಪರಿಣಾಮಕಾರಿ ಇದರಿಂದಾಗಿ ಏಂಜಿನಿನಲ್ಲಿ ಇತರ ಬಾಧೆಗಳೂ ಆರಂಭಿಸುವ ಸಂಭವವಿದೆ. ಸ್ಪಾರ್ಕನ್ನು ಅದರ ಸರಿಯಾದ ಸೆಟ್ಟಿಂಗಿಗೆ ತರುವದರಿಂದಾಗಿ ಕಾರಿನ ಓಡಾಟವನ್ನೂ ಪೆಟ್ರೋಲಿನ ಖರ್ಚನ್ನೂ ಉತ್ತಮಗೊಳಿಸಬಹುದು.

ಏಯರ್ ಫಿಲ್ಟರ್

"ಏಯರ್ ಫಿಲ್ಟರ್" ಕಶ್ಮಲದಿಂದ ತುಂಬಿದ್ದಲ್ಲಿಯೂ ಅಡ್ಡಕಟ್ಟಲ್ಪಟ್ಟಿದ್ದಲ್ಲಿ ಅದರಿಂದ ಗಾಳಿಯು ಏಂಜಿನಿಗೆ ಸರಿಯಾಗಿ ಹೋಗದೆ, ಮಿಕ್ಶ್ಚರುಗಳು ಸಮೃದ್ಧವಾಗುವುವು. ಫಿಲ್ಟರುಗಳನ್ನು ಶುಚಿಗೊಳಿಸುವ ವಿಚಾರ ಬಹಳ ಆಸಡ್ಡೆಯಿದ್ದು, ಇದರಿಂದಾಗಿ ಪೆಟ್ರೋಲಿನ ಖರ್ಚು ಬಹಳ ಅಧಿಕವಾಗುವದು.

ಚೋಕ್

ಅನೇಕ ಡ್ರೈವರುಗಳು ಚೋಕನ್ನು ಎಷ್ಟು ಉಪಯೋಗಿಸಬಹುದೋ ಅದಕ್ಕಿಂತಲೂ ಹೆಚ್ಚಿಗೆಯಾಗಿ, ಉಪಯೋಗಿಸುತ್ತಾರೆ. ಈ ಚೋಕನ್ನು ಬಹಳವಾಗಿ ಉಪಯೋಗಿಸುವದರಿಂದಾಗಿ ಪೆಟ್ರೋಲಿನ ಖರ್ಚು ಜಾಸ್ತಿಯಾಗುವದು.

ಕಾರ್ಬ್ಯುರೇಟರುಗಳು

ಈಗಣ ದಿನಗಳಲ್ಲಿ ಅನೇಕ ಕಾರುಗಳು ಅತೀ ಸಮೃದ್ಧ ಮಿಕ್ಶ್ಚರುಗಳನ್ನು ಕೊಡುವ "ಕಾರ್ಬ್ಯುರೇಟರು"ಗಳಿಂದ ಜೋಡಿಸಲ್ಪಡುತ್ತಿವೆ; ಇದರಿಂದಾಗಿ ಪೆಟ್ರೋಲಿನ ಖರ್ಚು ಹೆಚ್ಚುತ್ತದೆ. ಹಾಗೆಂದು ಮಿಕ್ಶ್ಚರಿನ ಶಕ್ತಿಯನ್ನು ಅತ್ಯಂತ ಕಡಮೆ ಮಾಡಲೂ ಕೂಡದು. ಅಂಟಿಕೊಳ್ಳುವ ಫ್ಲೋಟುಗಳು ಅಥವಾ ನೀಡ್ಲ್ ವಾಲ್ವುಗಳು ಪೆಟ್ರೋಲಿನ ಖರ್ಚನ್ನು ಹೆಚ್ಚಿಸುತ್ತವೆ.

ಲುಬ್ರಿಕೇಟಿಂಗ್ ಎಣ್ಣೆಯ

ತರಗತಿಗಳು

ಕಾರು ತಯಾರಿಸುವವರು ಶಿಫಾರಸು ಮಾಡುವದಕ್ಕಿಂತಲೂ ಭಾರವಾದ ಎಣ್ಣೆಯನ್ನು ಏಂಜಿನಿಗೆ ಹಾಕುವದರಿಂದಾಗಿ ಪೆಟ್ರೋಲಿನ ಖರ್ಚು ಹೆಚ್ಚುತ್ತದೆ. ಇದು ಟ್ರಾನ್ಸ್‌ಮಿಶನ್ ಮತ್ತು ರಿಯರ್ ಏಕ್ಸ್‌ಲ್‌ಗಳ ವಿಚಾರದಲ್ಲೂ ಅನ್ವಯಿಸುತ್ತದೆ.

ಟಾಯರುಗಳು

ಟಾಯರುಗಳಲ್ಲಿ ಸರಿಯಾದ ಪ್ರೆಶರಿ ನಷ್ಟು ಗಾಳಿ ತುಂಬಿರಬೇಕು. ಗಾಳಿ ಕಮ್ಮಿಯಾದಲ್ಲಿ ಶಕ್ತಿಯು ನಷ್ಟವಾಗಿ, ಇದರಿಂದಾಗಿ ಪೆಟ್ರೋಲಿನ ಖರ್ಚು ಹೆಚ್ಚುವದು.

ಬಿಸಿಲಿನಲ್ಲಿ ಕಾರನ್ನಿಡುವದು

ಹಗಲಿಡೀ ಕಾರನ್ನು ಬಿಸಿಲಲ್ಲಿ ನಿಲ್ಲಿಸುವದರಿಂದಾಗಿ ಅದು ತಾಪವೇರಿ, ಪೆಟ್ರೋಲು ಟ್ಯಾಂಕಿನಿಂದ ಆರಿಹೋಗಿ ನಷ್ಟ ಹೊಂದುವದು.

ಬ್ರೇಕುಗಳು

ಫೂಟ್ ಯಾ ಹ್ಯಾಂಡ್ ಬ್ರೇಕುಗಳನ್ನು ಬಿಟ್ಟಲ್ಲಿ, ಕೆಲವು ಸಂದರ್ಭಗಳಲ್ಲಿ, ಬ್ರೇಕ್‌ಶೂಗಳು ಸಂಪೂರ್ಣವಾಗಿ ಬ್ಯಾಂಡುಗಳಿಂದ ಹೊರಬಾರದೆ, ಇದರಿಂದಾಗಿ ಸ್ವಲ್ಪ ಫ್ರಿಕ್ಶನ್ ಉಂಟಾಗಿ ತತ್ಸಂಬಂಧ ಓಡಾಟದಲ್ಲಿ ಶಕ್ತಿಯ ವ್ಯಯವಾಗುತ್ತದೆ.

ಕಾಲಹರಣ

ಕಾರು ನಿಂತುಕೊಂಡಿರುವಾಗ, ಏಂಜಿನನ್ನು ದೀರ್ಘ ಕಾಲದ ವರೆಗೆ ನಿಲ್ಲಿಸದೆ ಇದ್ದಲ್ಲಿ, ಅದನ್ನು ಪುನಃ ಸ್ಟಾರ್ಟ್ ಮಾಡಿದ ನಂತರ ಬೇಕಾಗಬಹುದಾದುಕ್ಕಿಂತಲೂ ಅಧಿಕ ಪೆಟ್ರೋಲು ವ್ಯಯವಾಗುತ್ತದೆ.

ಪೆಟ್ರೋಲು ಸೋರುವದು

ಪೆಟ್ರೋಲು ವ್ಯವಸ್ಥೆಯಲ್ಲಿ ಸೋರಿಕೆಯಿಲ್ಲದ ಹಾಗೆ ನೋಡಿಕೊಳ್ಳಬೇಕು ಇಂಜಿನಿನಿಂದಾಗಿ ತಾಪವೇರುವ ಎಡೆಗಳಲ್ಲಿ ಪೆಟ್ರೋಲು ಕ್ಷಿಪ್ರವಾಗಿ ಆರಿಹೋಗುವದರಿಂದಾಗಿ, ಸೋರುವದನ್ನು ನಿಲ್ಲಿಸುವದು ಕಷ್ಟ; ಆದರೆ ಅದನ್ನು ನಿಲ್ಲಿಸುವದು ಲಾಭಕರ.

ಏಂಜಿನಿನ ಸಾಮಾನ್ಯ

ವಿದ್ಯಮಾನಗಳು

ಏಂಜಿನನ್ನು ಪರಿಪೂರ್ಣ ಸ್ಥಿತಿಯಲ್ಲಿಡುವದು ಆವಶ್ಯಕ; ಆದುದರಿಂದಾಗಿ ಸೆಲೆಂಡರುಗಳಲ್ಲಿನ ಕಂಪ್ರೆಶನ್, ವಾಲ್ವ್‌ಗಳು ಮತ್ತು ಸ್ಪಾರ್ಕ್ ಪ್ಲಗ್ಗುಗಳು ಸರಿಯಾದ ಸ್ಥಿತಿಯಲ್ಲಿವೆಯೋ ಎಂಬುದನ್ನು ಆಗಾಗ್ಗೆ ಪರೀಕ್ಷಿಸಬೇಕು.

ಕಾರುಗಳನ್ನು ಸರಿಯಾಗಿ ಟ್ಯೂನ್ ಮಾಡಿಸುವದರಿಂದಾಗಿ ಪೆಟ್ರೋಲಿನ ಹೆಚ್ಚಿನ ಮಿತವ್ಯಯವಾಗುವದು. ಇದನ್ನು ವಿಚಕ್ಷಣರಾದ ಗೆರೇಜು ಮತ್ತು ಸರ್ವಿಸ್ ಮೆಕ್ಯಾನಿಕರುಗಳಿಂದ ಶೀಘ್ರದಲ್ಲಿ ಮಾಡಿಸಬಹುದು.

(ಬರ್ಮಾ ಶೆಲ್‌ನವರ ಸೌಜನ್ಯದಿಂದ)

ಪಿತ್ಥತಲಿನೋವಾಗಲಿ ಮಲಬದ್ಧತೆಯಾಗಲಿ ಆಮ್ಲರಸ ಹೆಚ್ಚಿರುವ ಸೂಚನೆಗಳು.



ಪ್ರಾಯಶಃ ಎಲ್ಲರೂ, ಅಜೀರ್ಣದಿಂದಲೂ, ಪಿತ್ಥ ತಲೆನೋವಿನಿಂದಲೂ ಅಥವಾ ಮಲಬದ್ಧತೆಯಿಂದಲೂ ಕಷ್ಟವಡುತ್ತಾರೆ. ಆತಿಪುಷ್ಟಿಯಾದ ಮತ್ತು ಹೆಚ್ಚಾದ ಮಸಾಲೆ ಸಾಮಗ್ರಿಗಳಿಂದಕೂಡಿದ ಭಕ್ಷ್ಯಭೋಜ್ಯಗಳನ್ನು ಸೇವಿಸುವುದರಿಂದ ಹೊಟ್ಟೆಯಲ್ಲಿ ಮಿತಮೀರಿ ಉತ್ಪತ್ತಿಯಾಗುವ ಆಮ್ಲ (ಹುಳಿ) ರಸದಿಂದ ಈ ಬಾಧೆಗಳು ಉಂಟಾಗುತ್ತವೆ. ಈ ಹೆಚ್ಚಿದ ಆಮ್ಲರಸವು ಸಾಧಾರಣವಾಗಿ ಜರುಗುವ ಜೀರ್ಣಕ್ರಮವನ್ನು ಅಡ್ಡಿಪಡಿಸುವುದರಿಂದ, ಹೊಟ್ಟೆಯಲ್ಲಿರುವ ಆಹಾರಗಳನ್ನು ಹುಳಿಸಿ, ವಾಯುವನ್ನೂ ಮಲಬದ್ಧತೆಯನ್ನೂ ಉಂಟುಮಾಡುತ್ತದೆ. ವೈದ್ಯಶಾಸ್ತ್ರಕ್ಕೆ ತಿಳಿದಿರುವ, ಹೊಟ್ಟೆ ಹುಳಿಗಳನ್ನು ನಿಸ್ಸಾರಪಡಿಸುವ ಸಾಧಕಗಳೆಲ್ಲೆಲ್ಲಾ ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾವೇ ಅತ್ಯಂತ ಶಕ್ತಿಯುಳ್ಳದ್ದು. ಒಂದುಲೋಟಾ ನೀರಿನಲ್ಲಿ ಎರಡು ಟೇಸ್ಪೂನು ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾವನ್ನು ಕರಗಿಸಿ ತೆಗೆದುಕೊಂಡರೆ ಅದು ಆಮ್ಲವನ್ನು ಖಂಡಿಸಿ ನೋವನ್ನು ತಕ್ಷಣವೇ ಪರಿಹಾರಮಾಡುವುದು. ಈ ಅತ್ಯುತ್ತಮವಾದ ಆಮ್ಲನಿವಾರಣೆಗೆ ಮಲವಿಸರ್ಜನೆಯನ್ನು ಸುಲಭಪಡಿಸುವ ಗುಣಗಳೂ ಇವೆ. ಅದು ಜೀರ್ಣನಾಳಗಳನ್ನು ಶುದ್ಧಮಾಡಿ ಕರುಳುಗಳನ್ನು ಕ್ರಮಪಡಿಸಿ ಪೂರಾದೇಹಕ್ಕೂ ಶಕ್ತಿಯನ್ನುಂಟುಮಾಡುತ್ತದೆ.

ಈಹೊತ್ತು ಒಂದು ಸೀಸೆಯನ್ನು ಉಪಯೋಗಿಸಿನೋಡಿರಿ. ಆದರೆ ನೀಲಿಕಾಗದದಿಂದ ಸುತ್ತಲ್ಪಟ್ಟು ನೀಲಿಸೀಸೆಯಲ್ಲಿ ಪ್ಯಾಕ್ ಮಾಡಿರುವ ಖಾತರಿಯಾದ ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾವನ್ನೇ ಕೊಂಡುಕ್ಕೊಳ್ಳಿರಿ. ಪ್ರತಿಯೊಂದು ಸೀಸೆಯ ಜತೆಯಲ್ಲಿಯೂ ಇಟ್ಟಿರುವ ಕಾಗದದಲ್ಲಿ ಈ ಔಷಧಿಯ ನಾನಾವ್ಯಯೋಜನಗಳಿಗೆ ತಕ್ಕ ಪ್ರಯೋಗಗಳು ವಿವರಿಸಲ್ಪಟ್ಟಿವೆ.

ಬಿಲ್ಲೆಯರೂಪದಲ್ಲಿಯೂ ಸಿಕ್ಕುತ್ತದೆ. ನಿಮ್ಮ ಜೇಬಿನಲ್ಲಿಯೇ ಇಟ್ಟುಕ್ಕೊಂಡು ಯಾವಕ್ಷಣದಲ್ಲಿ ಅಜೀರ್ಣವುಂಟಾದರೂ ಉಪಯೋಗಿಸಲು ಒದಗುವುದು.

ಫಿಲ್ಲಿಪ್ಸ್

ಮಿಲ್ಕ್ ಆಫ್ ಮ್ಯಾಗ್ನೀಷಿಯಾ

ಆಮ್ಲನಿವಾರಣೆಮಾಡುವ ಮಲವಿಸರ್ಜನ ಸಹಕಾರಿ.

M 4V

ನೆಪೋಲಿಯನ್ ಅತೃಪ್ತನಾಗಿ ಅಳಿದ್ದು—

(೩ನೇ ಪುಟದಿಂದ ಮುಂದುವರಿದುದು)

ನೆಪೋಲಿಯನ್ನನ ಪ್ರಗತಿಯನ್ನು ಕಂಡು, "ಇದು ಕ್ಷಣಿಕವಾಗದಿದ್ದರೆ ಸಾಕು," ಎನ್ನುತ್ತಿದ್ದ ತಾಯಿ ಇದ್ದಳು. ಆ ಭಾಗ್ಯ ಹಿಟ್ಲರನಿಗಿಲ್ಲ.

ಹಿಟ್ಲರ್ ಬ್ರಹ್ಮಚಾರಿ. ನೆಪೋಲಿಯನ್ನಿಗೆ ಎರಡು ಬಾರಿ ವಿವಾಹವಾಗಿದೆ.

ನೆಪೋಲಿಯನಿಗೆ ತಂದೆತಾಯಿಗಳಷ್ಟೆ ಅಲ್ಲದೆ, ಏಳು ಮಂದಿ ಅಣ್ಣತಮ್ಮಂದಿರಿದ್ದರು. ಹಿಟ್ಲರಿಗೆ ಯಾರೂ ಇಲ್ಲ.

ನೆಪೋಲಿಯನ್, ಅತೃಪ್ತನಾಗಿಯೇ ಅಳಿದ;—ಅನ್ನು ಹಿಟ್ಲರ್—? ಉತ್ತರ ಭವಿಷ್ಯತ್ತಿನ ಅಗೋಚರ ಬ್ರಹ್ಮಕೋಶದಲ್ಲಿ ಅಡಗಿದೆ.

ಪ್ರಪಂಚದ ಪಾನಿಪತ್ತು

ರಷ್ಯದ ರಣರಂಗ

ರಷ್ಯದಲ್ಲಿ ಹಿಟ್ಲರ್ ತನ್ನ ಅನುಯಾಯಿಗಳೊಡೆಗೂಡಿ ಕೆಲವು ಕಡೆಗಳಲ್ಲಿ ಮುಂದೆ ನುಗ್ಗುತ್ತಿರುವನಾದರೂ, ಅವನಿಗೂ ಸೋಲೆಂಬುದು ಇದೆ ಎಂದು ರಷ್ಯದವರು ಸಿದ್ಧಾಂತ ಮಾಡಿಕೊಟ್ಟಿದ್ದಾರೆ. ಸೊಮ್‌ಲೆನಸ್ಕಿನ ಬಳಿ ಹಿಟ್ಲರಿಗೆ ಅಪಜಯವಾಗುತ್ತಿದೆ; ಅವನಿಗೆ ಅಲ್ಲಿ ಅಪಾರ ನಷ್ಟವಾಗಿದೆ. ೨೦೦ ಮೈಲು ವಿಸ್ತಾರದ ಆ ರಣರಂಗದಲ್ಲಿ ರಷ್ಯದವರು ಜರ್ಮನರಿಗೆ ಬಲವಾದ ಏಟು ಕೊಟ್ಟಿದ್ದಾರೆ. ಇನ್ನೂ ಖಚಿತವಾಗಿ ತಿಳಿದುಬಾರದಿದ್ದರೂ, ಸೋಮ್‌ಲೆನಸ್ಕನ್ನು ರಷ್ಯದವರು ತಿರುಗಿ ಹಿಡಿದರೆ? ಎಂಬ ವದಂತಿಯೂ ಹರಡಿದೆ. ನೀಪಿಯರ್ ನದೀ ಪ್ರಾಂತದಲ್ಲಿ, ಒಬ್ಬನೇ ಒಬ್ಬ ಜರ್ಮನ್ ಪಿಳ್ಳೆಯನ್ನೂ ಇರಗೊಡಿಸಿಬಾರದೆಂದು ಅನರನ್ನೆಲ್ಲ ಅಟ್ಟಲು ರಷ್ಯದವರ ಪ್ರಯತ್ನ. ಉಕ್ಕೈನಿನ ಒಂದು ಭಾಗವನ್ನು ಹಿಡಿಯಲು ಜರ್ಮನರು ಬಹಳ ಕಷ್ಟಪಡುತ್ತಿದ್ದಾರೆ; ಇನ್ನೂ ಸಾಧ್ಯವಾಗಿಲ್ಲ. ರಷ್ಯದವರು, ಜರ್ಮನರನ್ನು ಇಲ್ಲಿ ಮೂರು ಸಲ ಹಿಡಿದು ನಿಲ್ಲಿಸಿ, ಪ್ರತಿ ಸಲವೂ ಶತ್ರುಗಳ ಅಪಾರ ಸೇನೆಗಳನ್ನು ನಷ್ಟಪಡಿಸಿದ ವಾರ್ತೆಗಳನ್ನು ನಾವು ಕೇಳುತ್ತಿದ್ದೇವೆ. ಲೆನಿನ್‌ಗ್ರಾಡಿನ ಬಳಿಯ ಸಮಾಚಾರಗಳೇನೆಂದು ಇನ್ನೂ ಸರಿಯಾಗಿ ತಿಳಿದುಬಾರದಿದ್ದರೂ, ಅದಿನ್ನೂ ಜರ್ಮನರ ವಶವಾದುದು ಗೊತ್ತಾಗಿಲ್ಲ. ಅದೇನೂ ಸುಲಭದಲ್ಲಿ ಜರ್ಮನರ ವಶವಾಗುವಂತಿಲ್ಲ.

ರಷ್ಯದ ವೀರ ಮಹಿಳೆಯರು

ರಷ್ಯದ ಮಹಿಳೆಯರಿಗೆ ಯುದ್ಧ ಬೇಕಿಲ್ಲವಾದರೂ, ಅವರ ನಾಡಿನ ಸ್ವಾತಂತ್ರ್ಯಾಭಿಲಾಷೆ ಅವರಲ್ಲಿ ಕಡಿಮೆಯಾಗಿಲ್ಲ. ಅವರಲ್ಲಿ ಒಬ್ಬ ಉಕ್ಕೈನಿನ ತಾಯಿ, ರಣರಂಗದಲ್ಲಿ ಸೈನಿಕರಾಗಿರುವ ತನ್ನ ೫ ಮಂದಿ ಮಕ್ಕಳಿಗೆ ಒಂದು ಪತ್ರ ಬರೆದು, "ಹಿಟ್ಲರನ ನಿಪಾತಕ್ಕಾಗಿ ಕಾದಾಡಿ; ಶತ್ರುಗಳ ಮೇಲಿನ ಗುರಿ ತಪ್ಪಬೇಡಿ; ಈ ನಗರ ನಿವಾಸಿಗಳು ಸ್ಟಾಲಿನನ ಕರೆಯಂತೆ ಯುದ್ಧರಂಗದ ಹಿತಾಸಕ್ತಿಯೇ ಎಲ್ಲದಕ್ಕೂ ಮೊದಲಿನದೆಂದು ಹಾಗೆ ಕಾರ್ಯಾಸಕ್ತರಾಗಿದ್ದಾರೆ" ಎಂದು ಸಾರಿದುದನ್ನು ನೋಡಿದರೆ, ರಷ್ಯದ ಮಹಿಳೆಯರ "ವೀರಾವೇಶ"ವು ಖಚಿತವಾಗುವುದು. ರಷ್ಯದ ಮಹಿಳೆಯರು, ನಾನಾ ಕಸುಬಿನವರು, ರಣರಂಗದ ಸೇನೆಗಳಿಗೆ ಅಗತ್ಯವಿರುವ ರಕ್ತದ ಸರಬರಾಯಿಯನ್ನು, ತಮ್ಮ ದೇಹದ ರಕ್ತದಿಂದ ಒದಗಿಸಲು ಮುಂದೆ ಬಂದಿದ್ದಾರೆ. ರಣರಂಗದ ನರ್ಸುಗಳಾಗಿ, ಡಾಕ್ಟರುಗಳಾಗಿ ಹೋಗಲು ಅವರು ಹವಣಿಸುತ್ತಿದ್ದಾರೆ. ಗಂಡಸರು ಕೆಲಸ ಮಾಡುವ ಗಣಿಗಳಲ್ಲಿ, ಕಾರ್ಖಾನೆಗಳಲ್ಲಿ ಸಾವಿರಾರು ಮಂದಿ ರಷ್ಯದ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಬಾಂಬಿನ ಅಪಾಯವಿದ್ದರೂ ಅವರು ತಮ್ಮ ಕೆಲಸವನ್ನು ಬಿಡದೆ ಮಾಡುತ್ತಿದ್ದಾರೆ. ರಷ್ಯದ ಮಹಿಳೆಯರು ಇಂದು ಎಮಾನದಾಳಿಯ ರಕ್ಷಣಾ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಅಂತೂ ಜರ್ಮನಿಯನ್ನು ಸೋಲಿಸುವಲ್ಲಿ, ರಷ್ಯದ ಮಹಿಳೆಯರ ಉತ್ಸಾಹ ಗಂಡಸರಿಗೇನೂ ಕಡಿಮೆಯಾಗಿಲ್ಲ.

ಶತ್ರುಗಳ ಅಪಪ್ರಚಾರ

ಯುದ್ಧರಂಗದಲ್ಲಿ ಪ್ರಥಮತಃ ಗಾಯಗೊಂಡುದುದೆಂದರೆ "ಸತ್ಯ"; ಅಲ್ಲಿ ಪ್ರಥಮತಃ ಪ್ರತಿಷ್ಠಾಪಿಸಲ್ಪಟ್ಟ ಆರಾಧ್ಯ ದೇವತೆಯೆಂದರೆ ಸುಳ್ಳು. ಜರ್ಮನರೀ ವಿದ್ಯೆಯಲ್ಲಿ ಮಹಾ ಪಾರಂಗತರೆನ್ನಲು ಒಂದೆರಡು ಉದಾಹರಣೆ ಸಾಕು. "ಜರ್ಮನ್ ಬಲಗಳೊಡನೆ ಡಚ್ ಅಧಿಕಾರಿಗಳು ಸಹಕರಿಸಿರುವುದರಿಂದ ಪರಿಣಾಮ ಉತ್ತಮವಾಗಿದೆ" ಎಂದು ಕಳೆದ ವರ್ಷ ಸೆಪ್ಟೆಂಬರ್ ತಾ. ೭ರಲ್ಲಿ ಏಕ್ಸಿಸ್ ರೇಡಿಯೋ ಸಾರಿತ್ತು. ಆದರೆ ಆಗಲೇ "ಜರ್ಮನರ ಹಿಡಿತದಿಂದ ತಪ್ಪಲು ೧೦ ಲಕ್ಷ ಮಂದಿ ಗುಪ್ತ ಸದಸ್ಯರುಳ್ಳ ನೆದರ್‌ಲ್ಯಾಂಡ್ಸ್ ಯೂನಿಯನ್ ಸ್ಥಾಪಿಸಲ್ಪಟ್ಟಿದ್ದಿತೆಂದು" ಅದು ಹೇಳಲಿಲ್ಲ! ಮತ್ತೆ ಇದೊಂದು ಲಾರ್ಡ್ ಹಾ ಹಾರವರ ವಿಮರ್ಶೆ;–"ರುಮೇನಿಯ ಬ್ರಿಟನಿಗಿಂತಲೂ ಏಕ್ಸಿಸ್ ರಾಷ್ಟ್ರಗಳಿಂದ ಗ್ಯಾರೆಂಟಿ ಪಡೆಯುವಲ್ಲಿ, ಹೆಚ್ಚು ವಿಶ್ವಾಸ ತೋರಿಸಿತು." ಆದರೆ ಈ ಗ್ಯಾರೆಂಟಿಯ ಪ್ರಥಮ ಫಲವಾಗಿ ಹಂಗೆರಿಯೂ, ಬಲ್ಗೇರಿಯವೂ ರುಮೇನಿಯದ ಭಾಗಗಳನ್ನು ಆದೇ ದಿನ ಕಳೆದ ವರ್ಷ ಸೆಪ್ಟೆಂಬರ ತಾ. ೮ರಲ್ಲಿ ತಮ್ಮ ರಾಷ್ಟ್ರಗಳಿಗೆ ಸೇರಿಸಿಕೊಂಡುದನ್ನು ಅವರು ಹೇಳಲೇ ಇಲ್ಲ. ಜರ್ಮನಿಯವರ ಪ್ರತ್ಯಕ್ಷ ಸುಳ್ಳಿನ ಕಥೆಗಳೆಂದರೆ ಹೀಗೆ.

ಹಿಂದುಸ್ಥಾನದ ಸೈನ್ಯ

ಯುದ್ಧಕ್ಕೆ ಮೊದಲು ಹಿಂದುಸ್ಥಾನದಲ್ಲಿ ಎಲ್ಲ ತರಗತಿಯ ಸೈನಿಕರೂ ಸೇರಿ ೨,೩೭,೦೦೦ ಮಂದಿ ಇದ್ದರು. ಈಗ ಆ ಸಂಖ್ಯೆ ೭,೦೦,೦೦೦ ಮಟ್ಟಕ್ಕೇರಿದೆ. ಇದೀಗ ಪರದೇಶಕ್ಕೆ ತೆರಳಿದ ನಮ್ಮ ಸೈನಿಕರ ಸಂಖ್ಯೆ ಸುಮಾರು ೧,೮೦,೦೦೦ ಮಂದಿ ಎಂದು ತಿಳಿದು ಬಂದಿದೆ.


ಶ್ರೀಗಂಧ
ತಂಪಾದ ಸುಗಂಧ
ತಂಪನ್ನುಂಟುಮಾಡುವ ಗುಣವು ಶ್ರೀಗಂಧದ ಅಮೌಲ್ಯ ಗುಣಗಳಲ್ಲಿ ಒಂದೆಂಬುದು ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾಗಿದೆ. ಜ್ವರದಿಂದ ಹುಟ್ಟಿದ ದಾಹವನ್ನು ನಿವಾರಿಸುವುದಕ್ಕಾಗಿ ಶ್ರೀಗಂಧವು ಔಷಧರೂಪವಾಗಿ ಉಪಯುಕ್ತವಾಗಿರುವುದು ಮಾತ್ರವಲ್ಲದೆ, ಶ್ರೀಗಂಧದ ಎಣ್ಣೆಯು ಬಳಲಿದ ದೇಹಕ್ಕೆ ನವಚೈತನ್ಯವನ್ನೊದಗಿಸಲು ಸಹಕಾರಿಯಾಗಿದೆ. ಪೂರ್ವಕಾಲದಿಂದಲೂ ಪರಿಪೂರ್ಣತೆಗೆ ಪರ್ಯಾಯ ಪದವೆನಿಸಿದ್ದ ಶ್ರೀಗಂಧವು ಇಂದು ತನ್ನ ಅಧುನಿಕರೂಪವಾದ ಮೈಸೂರು ಸ್ಯಾಂಡಲ್ ಸೋಪಿನ ರೂಪದಲ್ಲಿ ತಂಪನ್ನೂ, ನವಚೈತನ್ಯವನ್ನೂ ಒದಗಿಸುತ್ತಿದೆ!
ಮೈಸೂರು
ಸ್ಯಾಂಡಲ್ ಸೋಪ್
"ಶ್ರೀಗಂಧವು ಪರಿಪೂರ್ಣತೆಯ ಗುರುತಾಗಿದೆ"
ದಕ್ಷಿಣ ಭಾರತದ ಪ್ರಧಾನ ಪ್ರತಿನಿಧಿಗಳು:- ಬೆಸ್ಟ್ ಆಂಡ್ ಕೊ., ಲಿಮಿಟೆಡ್, ಮದರಾಸು.
B-I. Kn.

ವೆಪೆಕ್ಸ್

ತಲೆಯಲ್ಲಿ ನೆಗಡಿಯಿಂದುಂಟಾಗ ಬಹುದಾದ ಅಸ್ವಸ್ಥತೆ ಮತ್ತು ಅಸಾಯವನ್ನು ಶೀಘ್ರವಾಗಿ ಹಾಗೂ ಖಾತರಿಯಾಗಿ ನಿವಾರಿಸುತ್ತದೆ.

ಪ್ರತಿ ಪ್ರಾತಃಕಾಲ, ಮೊದಲನೆಯದಾಗಿ, "ವೆಪೆಕ್ಸ್"ನ ಬಿಂದು ಒಂದನ್ನು ನಿಮ್ಮ ಕರವಸ್ತ್ರಕ್ಕೆರೆದು. ಅದರ ಕ್ರಿಮಿನಾಶಕ ಹಬೆಯನ್ನು ಉಸಿರಾಡಿಸಿರಿ.

ಚಿಕ್ಕದು ರೂ. 1/4. ದೊಡ್ಡದು ರೂ. 2/4.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಸಿಗುತ್ತದೆ.

ಹೊಟ್ಟೆನೋವು, ವಾಂತಿ, ಅಜೀರ್ಣ, ಕಾಲರಾ. ಸೆಟೆಬೇನೆ, ಬವಳಿ ಮುಂತಾದ ಅನೇಕ ಬೇನೆಗಳಿಗಾಗಿ

ಜವೇರಿಯನ್ನರ ಜೀವನ ಮಿಕ್ಶ್ಚರವು

ರಾಮಬಾಣದಂಥ ಉಪಾಯವಾಗಿದೆ. ಇದನ್ನು ಹೊಟ್ಟೆಯಲ್ಲಿ ತೆಗೆದುಕೊಳ್ಳಬಹುದು. ಇಲ್ಲವೆ ಮೈ ಮೇಲೆ ಲೇಪಿಸಬಹುದು. ಡಾಕ್ಟರ ಮತ್ತು ವೈದ್ಯರು ಇಲ್ಲದ ವೇಳೆಯಲ್ಲಿ ಜವೇರಿಯನ್ನರ ಜೀವನ ಮಿಕ್ಶ್ಚರದಂಥ ನೆರವಾಗುವಂಥ ಔಷಧವು ಮತ್ತೊಂದಿಲ್ಲ.

ಪಟ್ಟಣಗಳಲ್ಲಿ ಕೆಮಿಸ್ಟರ ಅಂಗಡಿಗಳಲ್ಲಿಯೂ ಹಳ್ಳಿಪಳ್ಳಿಗಳಲ್ಲಿ ಕಿರಾಣೀ ಅಂಗಡಿಗಳಲ್ಲಿಯೂ ಈ ಔಷಧವು ಮಾರಲಿಕ್ಕೆ ಸಿಗುತ್ತದೆ.

ಎಮ್. ಎಚ್. ಜವೇರಿಯನ ಮತ್ತು ಕಂಪೆನಿ,
ದೇವಕರಣ ಮ್ಯಾನ್ಶನ್,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ, ೨.

EARN Rs. 50/–PER MONTH

without investment or security. Wanted energetic candidates to represent for securing orders of High Class Art Calendars. Ask for our illustrated Free Booklet.

Glasgow Printing Co. Howrah

THE CANARA BANKING CORPORATION, LTD.

(Incorporated in British India)

ESTD: 1906

Head Office: UDIPI, S. Kanara.

STANDING ORDERS OF CUSTOMERS:

1. Collection of Interest on Govt. & other securities on due dates.
2. Payment of Premia on Policies.
3. Other remittances to specified persons,

ETC. ETC. ETC.

ARE EXECUTED.

Entrust this to us and save worry.

For full particulars apply to our nearest Office.

ಸಮಸ್ತ ಸತ್ಯ ವಿದ್ಯೆಗೂ ಈ ವಿದ್ಯೆಯ ಸಮಸ್ತ ಫಲಾನುಭವಗಳಿಗೂ ಮೂಲನಾಗಿರುವವನು ಸರ್ವೇಶ್ವರನು —**ಸೂಕ್ತಿಮಾಲೆ.**

XXIII] ಮಂಗಳೂರು, ತಾರೀಕು ೧೬—೯—೧೯೪೧ [೪೯
೧೮೬೩ ವೃಷ ಸಂವತ್ಸರದ ಭಾದ್ರಪದ ಬ। ೧೦ ಮಂಗಳವಾರ

ಕಾಮನ್ಸ್ ಮಂದಿರದ ಚರ್ಚೆ

'ಕಾಂಗ್ರೆಸ್ ಮಂತ್ರಿಮಂಡಲಗಳು ಪ್ರಾಂತಗಳಲ್ಲಿ ಕೆಲಸಮಾಡದಿರುವಷ್ಟು ಕಾಲ, ಭಾರತದಲ್ಲಿ ಚುನಾವಣೆ ನಡೆಸಿ ಫಲವಿಲ್ಲ, ಅದರಿಂದ ರಾಜ್ಯರಚನಾತ್ಮಕವಾದ ಸರಕಾರಕ್ಕೆ ಉಪಕಾರವಾಗದು'—ಹೀಗೆಂದು ಮಿ। ಅಮರಿಯವರು ಒಂದೇ ಮಾತಿನಲ್ಲಿ ಆ ಚರ್ಚೆಯ ಪ್ರದರ್ಶನದ ಮಂಗಳ ಪದ ಹಾಡಿದರು. ಇಂಡಿಯದಲ್ಲಿ ಎಲ್ಲವೂ ಮೆತ್ತಗೆ ಸಾಗುತ್ತಿದೆ ಎಂಬ ಈ ವರೆಗಿನ ನಂಬಿಕೆ ಈಗ ಅಲ್ಲಾಡುವಂತೆ ಮಾಡಿದರು.

ಮಿ। ಅಮರಿಯವರ ಈ ಹೇಳಿಕೆಯಿಂದ ಏನು ಗೊತ್ತಾಗುತ್ತಿದೆ? ಭಾರತದಲ್ಲಿ ಕಾಂಗ್ರೆಸ್ ಪಾರ್ಟಿಯ ಶ್ರೇಷ್ಠತೆಯನ್ನು ಪ್ರತಿಭಟಿಸಿ ಅದಕ್ಕೆ ಎದುರು ನಿಲ್ಲುವ ಪಾರ್ಟಿ ಇನ್ನೊಂದಿಲ್ಲ ಎಂದಲ್ಲವೇ? ಆದುದರಿಂದಲೇ,—ಈ ಕಾಲದಲ್ಲಿ ನಡೆಸುವ ಚುನಾವಣೆಗಳಲ್ಲಿ ಬಹುಪಕ್ಷದ ಜನರು ಸದ್ಯದ ಸರಕಾರದ ಕಾರ್ಯನೀತಿಯನು ಒಪ್ಪದಿರಬಹುದೆಂಬುದರಿಂದಲೇ ಶಾಸನಸಭೆಯ ಚುನಾವಣೆಗಳು ಮುಂದೆ ಬಿದ್ದಿರಲೂ ಬಹುದು.

ಚರ್ಚೆಯ ಕಾಲದಲ್ಲಿ, ಚುನಾವಣೆಗಳಿಂದ ಸರಕಾರದ ಕಾರ್ಯನೀತಿಗೆ ಅನುಕೂಲವಾಗದೆಂಬ ಸಂದೇಹವನ್ನು ಒಬ್ಬಿಬ್ಬರು ಪಾರ್ಲಿಮೆಂಟ್ ಸದಸ್ಯರೂ ಬಯಲಿಗೆಳೆಯದೆ ಇಲ್ಲ. ಅನ್ನುವಾಗ, "ಇಂಡಿಯದಿಂದ ಯಾವತ್ತು ಸಹಕಾರವನ್ನೂ ಬ್ರಿಟನ್ ಪಡೆಯುತ್ತಿದೆ" ಎಂಬ ಈ ಹೇಳಿಕೆಗೆ ಬುಡವೆಲ್ಲಿ ಎಂಬುದು ತಿಳಿಯದು!

ನಮ್ಮ ಪ್ರಭುತ್ವವು, ಯುದ್ಧಪ್ರಯತ್ನದಲ್ಲಿ ಭಾರತೀಯರ ಸಹಕಾರವು ಇನ್ನಷ್ಟು ಹೆಚ್ಚುವಂತೆ, ವೈಸರಾಯರ ಕೌನ್ಸಿಲನ್ನು ವಿಸ್ತರಿಸಿತು; ನ್ಯಾಶನಲ್ ಡಿಫೆನ್ಸ್ ಕೌನ್ಸಿಲನ್ನು ಏರ್ಪಡಿಸಿತು. ಅದೇ ರೀತಿಯಲ್ಲಿ ಚುನಾವಣೆಗಳನ್ನೂ ಏರ್ಪಡಿಸಬಾರದಾಗಿದ್ದಿತೇ? ಆ ಚುನಾವಣೆಗಳಲ್ಲಿ ಜನಮತವು ತಮಗೆ ಅನುಕೂಲವಾಗಿರುವಂತೆ, ಆ ಜನಮತವನ್ನು ಒಲಿಸಿಕೊಳ್ಳುವ ರಾಷ್ಟ್ರೀಯ ಕೇಳಿಕೆಗಳನ್ನು ನಮ್ಮ ಪ್ರಭುತ್ವವು, ಕೊಂಚ ಮಟ್ಟಿಗಾದರೂ, ನಡೆಸಿ ಕೊಡಬಾರದಾಗಿದ್ದಿತೇ?

'ಜಾತೀಯ ಜಗಳ'ವೆಂಬ ಈ ನೆವನವನ್ನು "ಚುನಾವಣೆಯ ಪ್ರಕರಣ"ದಲ್ಲಿ ಮುಂದೆ ನೂಕಿದುದು ಸುಮ್ಮನೆ. ಅದು ವ್ಯರ್ಥವೆಂಬುದನ್ನು ಮಿ। ಸಿಲ್ವರ್‌ಮ್ಯಾನರು ಸಕಾರಣವಾಗಿ ಆಡಿ ತೋರಿಸಿದ್ದಾರೆ.

ಭಾರತ ಸಚಿವರು, ಕಳೆದ ಅಗೋಸ್ತಿನ ಪ್ರಕಟಣೆಯಲ್ಲಿ "ಅಟ್ಲಾಂಟಿಕ್ ದಾನಶಾಸನ"ದ ತತ್ತ್ವಗಳೆಲ್ಲ ಸಮಾವಿಷ್ಟವಾಗಿವೆ ಎನ್ನುತ್ತಾರೆ. ಇದು ಸರಿ-ಎಂದು ಹಲವರಿಗೆ ತೋರುವುದಿಲ್ಲ; ಕಾರಣ ಆ ಪ್ರಕಟಣೆ ಮತ್ತು ಈ ದಾನಶಾಸನ ಸ್ವರೂಪತೀರಾ ಭಿನ್ನವಾಗಿವೆ. ವಸ್ತುತ ಆ ದಾನಶಾಸನದ ಒಂದು ಷರತ್ತಿನ ಮೇರೆಗೆ, ತಮ್ಮ ಸರಕಾರದ ಸ್ವರೂಪವನ್ನು ನಿರ್ಧರಿಸುವುದು ಆಯಾ ರಾಷ್ಟ್ರಗಳ ಜನಗಳದೇ ಎಂದಿದ್ದರೂ ಆ ಹಕ್ಕು ಭಾರತಕ್ಕಿಲ್ಲವಾಗಿದೆ. ಅನ್ನುವಾಗ ಆ ಪ್ರಕಟಣೆಯೂ, ಈ ದಾನಶಾಸನವೂ ಭಾರತದ ಭಾಗಕ್ಕೆ ಒಂದೇ ಎಂದು ಹೇಗೆ ಹೇಳಬಹುದು?

ವೃಥಾ ಶುಷ್ಕ ವಾದದ ಕಾಲಹರಣಕ್ಕಿಂತ, ಭಾರತದ ಸೆರೆಮನೆಯ ಬಾಗಿಲುಗಳನ್ನು ತೆರೆದು ವಿಶ್ವಾಸ ಹೆಚ್ಚುವ ವಾತಾವರಣವನ್ನು ಕಲ್ಪಿಸಿ, ಯಥಾಯೋಗ್ಯವಾದ ಅಧಿಕಾರ ದಾನ ಮಾಡುವುದೇ ಭಾರತದ ಸರ್ವತೋಮುಖವಾದ ಸಹಕಾರಕ್ಕೆ ಕಾರಣವಾಗುವುದೆಂದು ಇಲ್ಲಿ ಸೂಚಿಸದಿರಲಾಗುವುದಿಲ್ಲ.

ಇಂಡಿಯದಲ್ಲಿ ಬ್ರಿಟಿಷರ ಕಾರ್ಯನೀತಿ

ಕಾಮನ್ಸ್ ಮಂದಿರದಲ್ಲಿ ಮಿ। ಅಮರಿಯವರು ಮಿ. ಸೊರೆನ್ಸ್‌ರವರ ದೊಂದು ಪ್ರಶ್ನೆಗೆ ಉತ್ತರ ಹೇಳುತ್ತ,—

"ಕಳೆದ ಜುಲ್ಯಾ ತಾ. ೧೫ರಲ್ಲಿ (ಭಾರತದಲ್ಲಿ) ಶಾಸನಭಂಗದ ಕೈದಿಗಳಾಗಿರುವವರ ಸಂಖ್ಯೆ ೧೭೧೯; ಅವರಲ್ಲಿ ೨೮ ಮಂದಿ ಮಾಜಿ ಮಂತ್ರಿಗಳು; ೯೯೦ ಮಂದಿ ಪ್ರಾಂತಿಕ ಶಾಸನ ಸಭಾ ಸದಸ್ಯರು" ಎಂದರು.

ಭಾರತದ ಚುನಾವಣೆಗಳನ್ನು ಮುಂದುವರಿಸುವ ಮಸೂದೆಯ ಕುರಿತು ಲೇಬರ್ ಮೆಂಬರುಗಳು ಸ್ಪಷ್ಟೋಕ್ತಿಯ ವಾದಗಳನ್ನೇ ಧಾರಾಳವಾಗಿ ಹೂಡಿದ್ದರು. ಮಿ. ಡೇವಿಸರು, "ಜಾತೀಯ ವೈಷಮ್ಯದಿಂದ ಈ ಚುನಾವಣೆಗಳು ಮುಂದುವರಿಸಬೇಕೆಂದು ನೀವೆನ್ನುವುದು ತೀರ ಅಸಂಬದ್ಧ; ಆ ಹನ್ನೆರಡು ಸಾವಿರ ರಾಜಕೀಯ ಬಂದಿಗಳು ಇಂಡಿಯದ ಭೂರಿಜನ ಸಮುದಾಯದ ನಾಯಕರು; ಅವರ ಸೆರೆಗೂ ಜಾತೀಯ ವೈಷಮ್ಯಕ್ಕೂ ಯಾವ ಸಂಬಂಧವಿದೆ?" ಎಂದರು. ಮಿ। ಸೊರೆನ್‌ಸೆನರು, ಆಸ್ಟ್ರೇಲಿಯ ತನ್ನ ಚುನಾವಣೆಯನ್ನು ತಾನೇ ನಿರ್ಧರಿಸಬಲ್ಲುದೆಂದು ಹಂಗಿಸಿದರು.

"ನ್ಯೂಸ್ ಕ್ರಾನಿಕಲ್" ಪತ್ರಿಕೆ ಅಟ್ಲಾಂಟಿಕಿನ ತತ್ತ್ವಗಳನ್ನು ಇಂಡಿಯಕ್ಕೆ ಅನ್ವಯಿಸುವ ಕುರಿತು ಮಿ। ಚರ್ಚ್‌ಹಿಲ್ಲರು ಕೊಟ್ಟ ಹೇಳಿಕೆಯ ವಿಷಯದಲ್ಲಿ ಬರೆದಿದೆ. ಇಂಡಿಯದಲ್ಲಿ ಈ ನಾಸ್ತಿಮಂತ್ರವು ಅನುಷ್ಠಾನದ ಮಟ್ಟಿಗೆ "ಪ್ರಬಂಧ" ಮಾತ್ರವೆಂದು ಅರ್ಥಮಾಡಿಕೊಳ್ಳುವಂತಾಗಿದೆ. ಬ್ರಿಟನ್ ಯುಗೋಸ್ಲಾವಿಯಕ್ಕೆ ಸಂತೋಷದಿಂದ ಕೊಡುವೆನೆಂದಿರುವುದನ್ನೂ ಇಂಡಿಯಕ್ಕೆ ಇಲ್ಲವೆಂದಿದೆ. ಮಿ। ಚರ್ಚ್‌ಹಿಲ್ಲರ ಇಂಡಿಯದ ಕುರಿತಾದ ದಾಖಲೆಗಳು ಚೆನ್ನಾಗಿಲ್ಲ. ಇಂಡಿಯದ ಬಿಲ್ಲನ್ನು ನಾಶಮಾಡಲೆಳಸಿದ ಟೋರಿ ಪುಂಗಡದ ನಾಯಕರೇ ಅವರಾಗಿದ್ದರು. ಆದರೂ ಆ ಹಳೆಯದನ್ನು ತುಂಡರಿಸಿ, ಇಂದಿನ ವಿದ್ಯಮಾನಗಳಿಗೆ ತಕ್ಕಂತೆ ಪ್ರಮಾಣಿಕತೆಯಿಂದ ವರ್ತಿಸಬಲ್ಲಷ್ಟು ಸಮರ್ಥರವರು. ನಿಜವಾಗಿಯೂ ನ್ಯಾಯದೊಂದಿಗೆ ಔದಾರ್ಯವನ್ನೂ ತೋರಲು ಇದೀಗ ಸುಮುಹೂರ್ತ. ಆ ದೃಷ್ಟಿಯಿಂದ ಇಂಡಿಯದ ಸಮಸ್ಯೆಗಳ ಕಡೆಗೆ ನೋಡಬೇಕು; ಅವನ್ನು ವ್ಯವಹರಿಸಬೇಕು. ಅಲ್ಲದಿದ್ದರೆ ಅಟ್ಲಾಂಟಿಕ್ ತತ್ತ್ವಪ್ರಕಟಣೆ, ಲಕ್ಷ್ಯಗಟ್ಟಲೆ ಮುಂಬಯ ಭಾಗಕ್ಕೆ, ಆಷಾಢಭೂತಿತನದ ಎಂದು ಚಿನ್ಸೆಯಾಗಿಯೇ ಪರಿಣಮಿಸದಿರದು."

ವಿದೇಶ—ಹಿಂದೂದೇಶ

ಅಮೆರಿಕವು ಏಕ್ಸಿಸಿನವರನ್ನು ಎಚ್ಚರಿಸಿದೆ

ಅಮೆರಿಕದ ಪ್ರೆಸಿಡೆಂಟ್ ರುಜ್‌ವೆಲ್ಟರು ತಮ್ಮದೊಂದು ಭಾಷಣದಲ್ಲಿ ಏಕ್ಸಿಸ್ ರಾಷ್ಟ್ರಗಳನ್ನು ಎಚ್ಚರಿಸಿದ್ದಾರೆ. "ಅಮೆರಿಕದ ರಕ್ಷಣಾ ಜಲಧಿಯ ಕ್ಷೇತ್ರದಲ್ಲಿ ಪ್ರವೇಶಿಸುವ ಏಕ್ಸಿಸ್ ರಾಷ್ಟ್ರಗಳ ಯುದ್ಧಹಡಗುಗಳೆಲ್ಲ ಅಪಾಯ ನಿರೀಕ್ಷಣೆಯಿಂದಲೇ ಪ್ರವೇಶಿಸಬೇಕು; ಅಮೆರಿಕದ ಕಾವಲು ಹಡಗುಗ್ಗಳೂ, ವಿಮಾನಗಳೂ ಏಕ್ಸಿಸ್ ಹಡಗು ಮೊದಲು ಆಕ್ರಮಿಸಲಿ ಎಂದು ಕಾಯುವಂತಿಲ್ಲ. ಹಾಗೆಂದೇ ನಾನು ಅಮೆರಿಕದ ನೌಕಾ ಮತ್ತು ಭೂಸೇನೆಗಳಿಗೆ ಅಪ್ಪಣೆಮಾಡಿದ್ದೇನೆ— ನೀವೇ ನೂ ಕಾಯಬೇಕಾಗಿಲ್ಲ ಎಂದು. ಅಮೆರಿಕದ ಕಾವಲುಹಡಗುಗಳೂ ವಿಮಾನಗಳೂ, ನಮ್ಮ ರಕ್ಷಣಾ ಜಲಧಿಯ ಕ್ಷೇತ್ರದಲ್ಲಿ ಯಾವತ್ತು ವ್ಯಾಪಾರಿ ಹಡಗುಗಳನ್ನೂ ರಕ್ಷಿಸುವುವು. ಅಮೆರಿಕದ ಡಿಸ್ಟ್ರಾಯರ್ "ಗ್ರೀರ್"ನ ಮೇಲೆ ಜರ್ಮನರೇ ಮೊದಲು ಗುಂಡುಹಾರಿಸಿದುದು ಸಮುದ್ರಕಳ್ಳರ ಕೆಲಸದಿಂದ ಕಡಿಮೆಯಾದುದಲ್ಲ" ಎಂದು ಮುಂತಾಗಿ ನುಡಿದಿದ್ದಾರೆ.

ಪಾರ್ಲಿಮೆಂಟಿನಲ್ಲಿ

"ಹೌಸ್ ಆಫ್ ಕಾಮನ್ಸ್" ಮಂದಿರದಲ್ಲಿ ಬರ್ಮ–ಇಂಡಿಯಗಳ ಚುನಾವಣೆ ಮುಂದುವರಿಸುವ ಕುರಿತಾದ ಬಿಲ್ಲು ಮೂರನೆಯ ಸಲವೂ ಓದಿ ಮಂಜೂರಾಯಿತು. ಮಿ. ಅಮರಿಯವರು ಈ ಚುನಾವಣೆಗಳನ್ನು ಮುಂದುವರಿಸಲು, "ಜಾತಿಯ ಜಗಳ, ಕಾಂಗ್ರೆಸ್ ಮಂತ್ರಿ ಮಂಡಲಗಳ ವಿಸರ್ಜನೆ" ಮೊದಲಾದ ತಮಗೆ ಯುಕ್ತಕಂಡ ಕಾರಣಗಳನ್ನು ಮುಂದಿಟ್ಟರು. ಚರ್ಚೆ ನಡೆದುದರಲ್ಲಿ, ಲೇಬರಿನವರಾದ ಮಿ. ಸಿಲ್ವರ್ ಮ್ಯಾನರು "ಈ ಮಸೂದೆ ವೈಯಕ್ತಿಕ ಆಳಿಕೆಯ ಒಂದು ಕಾರ್ಯ; ನಿರಂಕುಶ ಪ್ರಭುತ್ವದ ಒಂದು ಆಚರಣೆ; ಸರ್ವಾಧಿಕಾರದ ಒಂದು ಕೃತಿ;ಜನಗಳ ನಿಜವಾದ ಅಭಿವ್ಯಾಯದ ಪ್ರಕಟಣೆಗೆ ಅವಕಾಶವಿಲ್ಲದ ಒಂದು ಘೋರಣೆ. ಈ ಮಸೂದೆ, ಜಾತಿಯ ಭಾವನೆ ನಿರ್ಮೂಲವಾಗುವ ವರೆಗೂ ಚುನಾವಣೆಯನ್ನು ಮುಂದರಿಸುವುದಲ್ಲ; ಯುದ್ಧ ಮುಗಿದು ೧೨ ತಿಂಗಳ ವರೆಗೆ ಮಾತ್ರ. ಜಾತಿಯ ಜಗಳ ಯುದ್ಧದಿಂದ ಹುಟ್ಟಲಿಲ್ಲ; ಯುದ್ಧದ ಅಂತ್ಯದಲ್ಲಿ ಅದು ಕೊನೆಗೊಳ್ಳುವುದೂ ಇಲ್ಲ. ಯುದ್ಧ ನಾಳೆ ಮುಗಿಯಬಹುದಾದರೂ, ಇಂಡಿಯದ ಜನಗಳಿಗೆ ತಮ್ಮನ್ನಾಳಿಕೊಳ್ಳುವಂತೆ ಏನಾದರೂ ಹಕ್ಕುಗಳನ್ನು ಕೊಡದ ವಿನಾ, ಇಂಡಿಯದ ಪರಿಸ್ಥಿತಿ ಬದಲಾಯಿಸದು" ಎಂದು ಮುಂತಾಗಿ ಟೀಕಿಸಿದರು. ಲೇಬರಿನ ಮಿ। ಸೊರೆನ್‌ಸೆನ್‌ರವರು, "ಇಂಡಿಯದ ಜನರು, ಈಗ ಚುನಾವಣೆ ನಡೆದರೆ, ಬಹುಮತವಾಗಿ ಸರಕಾರದ ಕಾರ್ಯನೀತಿಯ ವಿರುದ್ಧವಾಗಿಯೇ ಓಟುಕೊಡಬಹುದೆಂಬುದರಿಂದಲೇ ಈ ಮಸೂದೆ ಹುಟ್ಟಿದೆ. ಚುನಾವಣೆಗಳನ್ನು ಮುಂದುವರಿಸುವುದಕ್ಕಿಂತ ಅವನ್ನು ನಡೆಸುವುದು ಡೆಮೊಕ್ರೆಸಿಯ ತತ್ತ್ವಗಳಿಗೆ "ಭೂಷಣ" ಎಂದು ಮುಂತಾಗಿ ವಾದಿಸಿದರು. ಇನ್ನು ಕೆಲವರು ಬಿಲ್ಲನ್ನು ಸಮರ್ಥಿಸಿ ಮಾತಾಡಿದರು. ಅಟ್ಲಾಂಟಿಕ್ಕಿನ ಎಂಟು ಪ್ಯಾಂಟುಗಳನ್ನು ಭಾರತಕ್ಕೂ ಅನ್ವಯಿಸಬೇಕೆಂಬ ಧ್ವನಿ ಇಂದಿನ ಚರ್ಚೆಯಲ್ಲಿ ಕೇಳಬಂದಿತು!

ಮಿ। ಜಿನ್ನರು ತಪ್ಪು ಗ್ರಹಿಕೆಯನ್ನು ಮಾಡಿಸಿದರೇ?

ಇಂಡಿಯದ ನ್ಯಾಶನಲ್ ಡಿಫೆನ್ಸ್ ಕೌನ್ಸಿಲಿನ ರಾಜೀನಾಮೆಗಳ ಕುರಿತು ಕಾಮನ್ಸ್ ಮಂದಿರದಲ್ಲಿ ಬಂದ ಒಂದು ಪ್ರಶ್ನೆಗೆ ಮಿ. ಅಮರಿಯವರು ಉತ್ತರ ಕೊಡುತ್ತ ಆ ರಾಜೀನಾಮೆಯ ಸಂದರ್ಭಗಳನ್ನು ವಿವರಿಸಿ, ಮಿ. ಜಿನ್ನರು ಎಲ್ಲಿ ಯಾವ ಸಂಗತಿಯಲ್ಲಿ ತಪ್ಪು ಗ್ರಹಿಕೆಯನ್ನು ಮಾಡಿಸಿರುವರೆಂದೂ ಸೂಚಿಸಿರುವರು.

ಬ್ರಿಟಿಶ್ ಪ್ರಧಾನರಿಗೂ, ಸದಸ್ಯರಿಗೂ ಝಟಾಪಟಿ

"ಬ್ರಿಟನಿನ ವಿಮಾನಗಳ ಉತ್ಪತ್ತಿ ಶಾಖೆಯ ಮಿನಿಸ್ಟರರ ಷರಾ" ಎಂದು ಹೇಳಲಾಗಿರುವ ಕೆಲವೊಂದು ವಿಚಾರಗಳನ್ನು ಆದರಿಸಿ, "ಹೌಸ್ ಆಫ್ ಕಾಮನ್ಸ್"ನಲ್ಲಿ ಪ್ರಶ್ನೋತ್ತರ ನಡೆಯುತ್ತಿದ್ದ ಹಾಗೆ ಬ್ರಿಟಿಶ್ ಪ್ರಧಾನ ಮಿ. ಚರ್ಚ್‌ಹಿಲ್ಲರಿಗೂ, ಕಮ್ಯೂನಿಸ್ಟ್ ಮೆಂಬರ್ ಮಿ. ವಿಲ್ಲಿಯಂ ಗೆಲ್ಹಾರ್‌ರಿಗೂ ತೀವ್ರ ವಾಗ್ವಾದಗಳಾಗಿ ಕೊನೆಗೆ ಮಿ. ಗೆಲ್ಹಾರರು, ತಾವು ಪ್ರಧಾನರ ಕುರಿತಾಡಿದ ಷರಾಗಳನ್ನು ಹಿಂದೆಗೆದು ಕ್ಷಮೆ ಕೇಳಿದರು.

ವಿವಿಧ ವಾರ್ತೆಗಳು

ಟರ್ಕಿಯಲ್ಲಿ ಭೂಕಂಪ; ಅಗ್ನಿಯಲ್ಲಿ ೫೦೦ ಮಂದಿ ಸತ್ತರು. ಅಮೆರಿಕದಲ್ಲಿನ ವ್ಯಾಪಾರಿ ಹಡಗುಗಳನ್ನು ಆಯುಧ ಪಾಣಿಗಳನ್ನಾಗಿ ಮಾಡುವ ಆಲೋಚನೆಯಾಗುತ್ತಿದೆ. ರಷ್ಯಕ್ಕೆ ಇರಾನಿನ ಮೂಲಕ ಅಮೆರಿಕದ ಸರಬರಾಯಿ ಹೋಗಲಿದೆ. ಗ್ರೀನ್‌ಲ್ಯಾಂಡ್ ಐಸ್‌ಲ್ಯಾಂಡಿನ ನಡುವೆ ಅಮೆರಿಕದ ಸ್ವಾಮಿತಕ್ಕೆ ಸೇರಿದ ಒಂದು ಹಡಗು ಮುಳುಗಿ ಸಲ್ಪಟ್ಟಿತು ಹಿಟ್ಲರನು ಜರ್ಮನಿಯ ಸ್ವಾರ್ಥತ್ಯಾಗಕ್ಕಾಗಿ ಪ್ರಾರ್ಥಿಸಿದ್ದಾನೆ.

ರಷ್ಯದವರ ಮರುದಾಳಿ

ಕೆಳಭಾಗದ ನೀಪಿಯರ್ ನದಿದಾಟಿ, ರಷ್ಯದವರು ಆ ಭಾಗದ ಎರಡು ಹಳ್ಳಿಗಳನ್ನು ಹಿಡಿದಿದ್ದಾರೆ. ಲೆನೆನ್‌ಗ್ರಾಡ್‌ನ ಬಳಿ ಘೋರ ಕಾದಾಟ ಸಾಗುತ್ತಿದೆ. ಒಡೆಸಕ್ಕೆ ಸಮುದ್ರದ ಮೂಲಕ ರಷ್ಯದವರ ಸಹಾಯ ಒದಗುತ್ತಿದೆ. ಜರ್ಮನರು ಎಲ್ಲಿಯೂ ಮುನ್ನುಗ್ಗಿದ ವಾರ್ತೆ ಇಲ್ಲ.

ವಿದ್ಯಾರ್ಥಿಗಳ ಸಭೆಯಲ್ಲಿ ಗಲಭೆ

ಫೆಶಿಯಿಸ್ಟ್ ವಿರೋಧಿಗಳೆನ್ನಿಸಿದ ಪೂನಾ ವಿದ್ಯಾರ್ಥಿಗಳ ಸಭೆಯೊಂದು ಪೂನೆಯಲ್ಲಿ ಬ್ಯಾರಿಸ್ಟರ್ ತಾರ್ಕುಂಡಿಯವರ ಅಧ್ಯಕ್ಷತೆಯಲ್ಲಿ ಜರುಗಿದಾಗ, ವಿದ್ಯಾರ್ಥಿಗಳು, ಕಾರಣಾಂತರದಿಂದ, ಎರಡಾಗಿ ವಿಭಜಿಸಿ, ಬೇರ್ಪಟ್ಟು, ಇತ್ತಂಡದವರೂ ಇಬ್ಬರು ಅಧ್ಯಕ್ಷರನ್ನು ಆರಿಸಿ ಸಭಾಕಾರ್ಯಗಳನ್ನು ನಡೆಸಿದರು. ಅವರೂ ಇವರೂ ಠರಾವುಗಳನ್ನು "ಪಾಸು" ಮಾಡಿದರಾದರೂ, ಸಭಾ ಕಾರ್ಯಗಳೆಲ್ಲ ಗಲಭೆಯಲ್ಲಿಯೇ ಕೊನೆಗಂಡಿತೆಂದು ತಿಳಿದು ಬರುತ್ತಿದೆ.

ಡಾ. ರಾಜೇಂದ್ರ ಪ್ರಸಾದರ ಆರೋಗ್ಯ

ಉಬ್ಬಸದಿಂದ ಕಷ್ಟಪಡುತ್ತಿರುವ ಡಾ. ರಾಜೇಂದ್ರ ಪ್ರಸಾದರಿಗೆ ಪೂರ್ಣ ವಿಶ್ರಾಂತಿ ಕೆಲ ಕಾಲ ಅಗತ್ಯವೆಂದು ಅವರ ಡಾಕ್ಟರರು ಹೇಳಿರುತ್ತಾರೆ. ಅವರು ಸಾಮಾನ್ಯ ಒಂದು ತಿಂಗಳನ್ನು ವಾರ್ಧಾದಲ್ಲಿ ಕಳೆಯಬಹುದು. ಅಲ್ಲಿ ಹವೆ ಅವರಿಗೆ ಚೆನ್ನಾಗಿ ಒಗ್ಗುತ್ತಿದೆಯಂತೆ.

ಸ್ಮರಣೋತ್ಸವ ಗ್ರಂಥ ಸಮರ್ಪಣೆ

ಶಿಕ್ಷಣ ವಿಚಕ್ಷಣರೂ ಅರ್ಥ ಶಾಸ್ತ್ರಜ್ಞರೂ ಆಗಿರುವ ತಿರುಚಿನಾಪಳ್ಳಿಯ ಸೈಂಟ್ ಜೊಸೆಫ್ ಕಾಲೇಜಿನ ರೆವೆರೆಂಡ್ ಫಾದರ್ ಕಾರ್ಟಿಯವರ ೫೫ನೇ ವರ್ಷ ವರ್ಧಂತಿಯಂದು, ಒಂದು ಸಾರ್ವಜನಿಕ ಸಭೆ ಸೇರಿ ಅವರ ವಿದ್ಯಾ ಪಾಂಡಿತ್ಯದ ಕುರಿತು ಹಲವು ಮಂದಿ ಆಪ್ತರ ಭಾಷಣಗಳಾದುವು; ಉತ್ಸವ ಸಮಿತಿಯವರು ರೆವರೆಂಡರಿಗೊಂದು ಸ್ಮರಣೋತ್ಸವ ಗ್ರಂಥವನ್ನೂ ಕಾಣಿಕೆಯನ್ನೂ ಸಮರ್ಪಿಸಿದರು.

ಶ್ರೀ। ಭುಲ್ಲಾಭಾಯಿ ದೇಸಾಯಿಯವರು

ಜೈಲಲ್ಲಿ ಅನಾರೋಗ್ಯದಲ್ಲಿದ್ದ ಮೇಲ್ಕಂಡ ಮಹನೀಯರನ್ನು ಪೂನದ ಸಾಸೂನ್ ಆಸ್ಪತ್ರೆಗೊಯ್ಯಲಾಗಿದೆ. ಅವರಿಗೆ ವಿಪರೀತ ತಲೆ ನೋವು; ದುರ್ಬಲರಾಗಿದ್ದಾರೆ.

ಮುಸ್ಲಿಂ ಲೀಗಿನಿಂದ ಹೊರ ಹಾಕಲಾಯಿತು!

ಬೇಗಂ ಷಹಾನವಾಜರನ್ನೂ ಸರ್. ಸುಲ್ತಾನ್ ಅಹಮ್ಮದರನ್ನೂ ಮುಸ್ಲಿಂ ಲೀಗಿನಿಂದ ಹೊರ ಹಾಕಲಾಗಿದೆ. ಅವರಿಗಿನ್ನು ೫ ವರ್ಷ ಲೀಗ್ ಮೆಂಬರಿಕೆ ದೊರೆಯುವಂತಿಲ್ಲ.

ಕೊನೆಯಚ್ಚೊತ್ತು

ಲೆನೆನ್‌ಗ್ರಾಡಿನ ಸುತ್ತ ಘೋರ ಯುದ್ಧ; ಬುಖಾರೆಸ್ಟಿನ ಮೇಲೆ ರಷ್ಯದವರ ತೀವ್ರ ವಿಮಾನ ದಾಳಿ; ಇರಾನಿನಲ್ಲಿ ಜರ್ಮನರನ್ನು ಮಿತ್ರರ ಕೈಗೊಪ್ಪಿಸುವ ಕಾರ್ಯಾರಂಭವಾಗಿದೆ; ಅಮೆರಿಕ ಜಪಾನುಗಳ ಮಾತುಕಥೆಗಳಿಂದ ಹೆಚ್ಚಿನ ಫಲ ತೋರದಾಗಿದೆ; ದಕ್ಷಿಣ ಆಫ್ರಿಕದಲ್ಲಿ ಭಾರತದ ಹೈ ಕಮಿಶನರರಾಗಿ ಸರ್ ಷಫತ್ ಅಹಮ್ಮದ್ ಖಾನ್ ಅವರು ನೇಮಿಸಲ್ಪಟ್ಟಿದ್ದಾರೆ; ಅಟ್ಲಾಂಟಿಕಿನಲ್ಲಿ ೮ ಬ್ರಿಟಿಶ್ ಹಡಗುಗಳು ಮುಳುಗಿವೆ ಎಂದು ಸುದ್ದಿ.

ಮೃದು ಚರ್ಮಕ್ಕೆ
ಪರಿಶುದ್ಧವೂ, ನಯವೂ ಆದ
ಸಾಬೂನಿನ ಅವಶ್ಯಕತೆಯಿದೆ.

ಮಗುವಿನ ಮೃದು ಚರ್ಮಕ್ಕೆ, ಕಾಂತಿಗೆ ಸಮಾನವಾದುದು ಬೇರಾವುದೂ ಇಲ್ಲ, ಏಕೆಂದರೆ ಕಾಂತಿಯು ಶತಮಾನಗಳಿಂದ ಚರ್ಮದ ಆರೋಗ್ಯಕ್ಕೂ ಸೌಂದರ್ಯಕ್ಕೂ ಅತ್ಯಂತ ಸಮಾಧಾನಕಾರಿಯೂ, ಮುಖ್ಯ ಸಹಾಯಕಾರಿಯೂ ಆದ ಪರಿಶುದ್ಧ ವನಸ್ಪತೀಯ ತೈಲಗಳಿಂದಲೇ ಮಾಡಲ್ಪಡುತ್ತದೆ.

ಕಾಂತಿಯು ನಿಮಗೂ ಅತ್ಯುತ್ತಮವಾಗಿರುತ್ತದೆ. ಅದರ ಸಮೃದ್ಧವಾದ ನೊರೆಯು ಚರ್ಮದ ಪ್ರತಿಯೊಂದು ರಂಧ್ರದೊಳಕ್ಕೂ ಹೋಗುತ್ತದೆ. ಮತ್ತು ಅಂಟಿಕೊಂಡಿರುವ ಕೊಳೆಯ ಯಾವತ್ತೂ ಚೂರನ್ನು ತೆಗಿಯುತ್ತದೆ.

ಕಾಂತಿ ಸಾಬೂನನ್ನು ಪ್ರಯೋಗಿಸಿ, ಮತ್ತು ನಿಮ್ಮ ಚರ್ಮವು ನುಣುಪಾಗಿಯೂ, ಮೃದುವಾಗಿಯೂ ಸೌಂದರ್ಯಕನುವಾಗಿಯೂ, ಬೆಳೆಯುವುದನ್ನು ನಿರೀಕ್ಷಿಸಿರಿ.

* ಕಾಂತಿ ಸಾಬೂನು *

ಆದರಲ್ಲಿ ಪ್ರಾಣಿಗಳ ಕೊಬ್ಬು ಏನೊಂದು ಕೂಡಿಲ್ಲವೆಂಬುದನ್ನು ನೆನಪಿನಲ್ಲಿಡಿ. ತಯಾರಿಸಿದವರು:
ಸ್ವಸ್ತಿಕ್ ಆಯಿಲ್ ಮಿಲ್ಸ್ ಲಿ॥ ಬೊಂಬಾಯಿ 15

Manufactured by SWASTIK OIL MILLS LTD., BOMBAY-15.

It is hereby notified for public information that the power of attorney granted by me on 12-4-'40 in favour of Mr. B A. Willson, son of Luther Bangera, Mangalore, stands cancelled.

Mangalore, 11th Sept. 1941 } M. PERES.

ಮಂಗಳೂರು

ಶ್ರೀ। ರಾಜಗೋಪಾಲನ್‌ರವರ ಸಂಚಾರ

ಹಿಂದುಸ್ಥಾನ ಸ್ಕೌಟ್ ದಳದ ಅಸಿ। ಪ್ರೊವಿನ್ಸಿಯಲ್ ಆರ್ಗನೈಜರ್ ಶ್ರೀ। ರಾಜಗೋಪಾಲನ್ ಅವರು, ಈ ಜಿಲ್ಲೆಯನ್ನು ಅಕ್ಟೋಬರ ತಾ. ೧೦ರಿಂದ ತಾ. ೨೦ರ ವರೆಗೆ ಸಂದರ್ಶಿಸುವರೆಂದು ತಿಳಿದು ಬಂದಿದೆ.

ಶ್ರೀ ಕೃಷ್ಣ ಜಯಂತಿ ಉತ್ಸವ

ಸ್ಥಳೀಯ ಅತ್ತಾವರ ಅರಸು ಮುಂಡತ್ತಾಯ ದೇವಸ್ಥಾನದ ಕಡೆಯಿಂದ ಅದಕ್ಕೆ ಸಂಬಂಧಿಸಿದ ಶ್ರೀ ಕೃಷ್ಣ ಜಯಂತಿ ಉತ್ಸವ ಸಮಿತಿಯವರು, ಆಚರಿಸಿ ಬರುತ್ತಿರುವ ವರ್ಷಾವಧಿಯ ಆ ಸಮಾರಂಭವು ಕಳೆದ ಆದಿತ್ಯವಾರ ಸಂಜೆ ನಂದಿಗುಡ್ಡೆಯ ರಸ್ತೆಯ ಮೈದಾನಿನಲ್ಲಿ ರಾಧಾಕೃಷ್ಣ ಸಂವಾದ, ಬಕಾಸುರ ವಧೆ, ಮೊಸರು ಕುಡಿಕೆ, ವಿವಿಧ ವೇಷ ಪ್ರದರ್ಶನ, ಸಂಕೀರ್ತನ ಮೊದಲಾದ ನಾನಾ ಮನೋಹರ ಕಾರ್ಯಕ್ರಮಗಳೊಡನೆ ಯಶಸ್ವಿಯಾಗಿ ಜರುಗಿತು.

ಸಾರ್ವಜನಿಕ ಸಭೆ

ಇದೇ ಬರುವ ತಾ. ೨೧ನೇ ಸಂಜೆ ಗಂಟೆ ೫-೪೫ಕ್ಕೆ ಕದ್ರಿಯಲ್ಲಿ ಪಿ. ಡಬ್ಲ್ಯು. ಡಿ. ಟ್ರಾವಲರ್ಸ್ ಬಂಗಲೆಯ ಬಳಿ ಒಂದು ಸಾರ್ವಜನಿಕ ಸಭೆಯ ಏರ್ಪಾಡಾಗಿದೆ. ಅಂದು "ಡಿಫೆನ್ಸ್ ಸರ್ವೀಸ್"ಗಳ ಕುರಿತಾಗಿ ಭಾಷಣಗಳು ನಡೆಯಲಿರುವವು.

ನಗರದ ಗಡಿಗಳ ವಿಸ್ತಾರಕ್ಕೆ ವಿರೋಧ

ಶ್ರೀ। ಕೆ. ಗೋವಿಂದ ಶೆಣೈಯವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಈಚೆಗೆ ಉರ್ವದ ಇಗರ್ಜಿಯ ಬಳಿ ಸೇರಿ, ಮುನಿಸಿಪಲ್ ಗಡಿಗಳ ವಿಸ್ತರಣದ ಕಾರ್ಯಕ್ಕೆ ವಿರೋಧ ಸೂಚಿಸಿತು. ಶ್ರೀ। ಆಲೆಕ್ಸ್ ಪ್ಯಾಸ್, ಕೆ. ಭೋಜರಾಪ್ ಮುಂತಾದವರು ವಿಸ್ತರಣದಿಂದ ಉಂಟಾಗುವ ತೊಂದರೆಗಳನ್ನು ಸೂಚಿಸಿ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣಾದಿಗಳೊಂದಿಗೆ ಸಭೆ ಮುಗಿಯಿತು.

ಹಿಂದುಸ್ಥಾನ್ ಸ್ಕೌಟ್ ದಿನಾಚರಣೆ

ದಿವಂಗತ ಡಾ। ಎನಿಬಿಸೆಂಟರ ಜನ್ಮ ದಿನವಾದ ಅಕ್ಟೋಬರ ತಾ. ೧ ಮತ್ತು ಮಹಾತ್ಮರು ಹುಟ್ಟಿದ ದಿನವಾದ ತಾ. ೨ರಲ್ಲಿ ನಮ್ಮ ಜಿಲ್ಲಾ ಹಿಂದುಸ್ಥಾನ ಸ್ಕೌಟ್ ದಳದವರು ಆ ದಿನಾಚರಣೆಯನ್ನು ಜರುಗಿಸಲಿರುವರು; ಆ ದಿನಗಳಲ್ಲಿ ಆಸ್ಪತ್ರೆಗಳ ಸಂದರ್ಶನ, ಖಾದಿ ಮಾರಾಟ, ಆರೋಗ್ಯ ಬೋಧನೆ, ತಿಬಿರಾಗ್ನಿ ಮೊದಲಾದ ಹಲವು ಕಾರ್ಯಕ್ರಮಗಳು ಸ್ಕೌಟರಿಂದ ನಡೆಸಲ್ಪಡುವುವು.

ಭಾಷಣಗಳು

ಹಿಂದೂ ಮಹಾಸಭೆಗಳ ಧ್ಯೇಯಗಳ ಕುರಿತಾಗಿ ಸಾರ್ವಜನಿಕ ಸಭೆಗಳ ಮುಂದೆ, ಉರ್ವದ ಮಾರಿಗುಡಿಯಲ್ಲಿಯೂ, ಕೊಂಚಾಡಿ ಶ್ರೀ ರಾಮಾಶ್ರಮ ಹಾ. ಎ. ಶಾಲೆಯಲ್ಲಿಯೂ, ಶ್ರೀ। ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರು ಈಚೆಗೆ ಭಾಷಣಗಳನ್ನು ಕಥಾರೂಪವಾಗಿ ಮಾಡಿದರು.

ಬಟ್ಟೆಗಳನ್ನು ಶುಭ್ರಮಾಡಲು ಉತ್ತಮ ತರಗತಿಯ

೫೦೧ ಸ್ಪೆಷಲ್ ಸಾಬೂನು



- ಮನೆಯಲ್ಲಿ ಬಟ್ಟೆಗಳನ್ನು ಒಗೆಯುವುದು ಸುಲಭಸಾಧ್ಯ.
- ನಾಜೂಕಾದ ಬಟ್ಟೆಗಳಿಗೆ ಹಾನಿಕರವಲ್ಲ.
- ಪ್ರಾಣಿಗಳ ಕೊಬ್ಬು ಮಿಶ್ರವಾಗಿಲ್ಲ

ಟಾಮ್ಕೋ ಸೇಲ್ಸ್ ಡಿಪಾರ್ಟ್‌ಮೆಂಟ್, 2 A, ಸೌತ್ ಪೆರೆಡ್, ಬೆಂಗಳೂರು.

ದಿ ತಾತಾ ಆಯಿಲ್ ಮಿಲ್ಸ್ ಕಂಪೆನಿ, ಲಿ.

ತಾತಾಪುರ ಮತ್ತು ಬೊಂಬಾಯಿ.

ಕಾಸರಗೋಡು:—ಈ ಸೆಂಟರಿನ ಉಪಾಧ್ಯಾಯರ ಮಾಸಿಕ ಸಭೆಯು ತಾ. ೧೩ರಲ್ಲಿ ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಶ್ರೀ। ಕೆ. ಭವಾನಿಶಂಕರ ರಾವ್ ಬಿ. ಎ., ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ। ಯಂ. ಕೆ. ರಾಮುಣ್ಣಿ ಬಿ. ಎ., ಎಲ್. ಟಿ. ಯವರು ದಯೆಮಾಡಿಸಿದ್ದರು. ವರದಿವಾಚನ, ಗಣಿತಪಾಠ ಕಲಿಸುವ ಕುರಿತು ಭಾಷಣ, ತಕಲಿಯಲ್ಲಿ ನೂಲುವ ಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳೂ, ಅಧ್ಯಕ್ಷರ ಸುರಸವಾದ ಭಾಷಣವೂ ಇದ್ದುವು.

ತಿರುವಾಗಿಲು:—ಇಲ್ಲಿಯ ಲೇಬರ್ ಶಾಲೆಯ ಹಳೆ ವಿದ್ಯಾರ್ಥಿಗಳಲ್ಲೊಬ್ಬರಾಗಿದ್ದು, ಪ್ರಕೃತ ಮದ್ರಾಸಿನಲ್ಲಿ "ನರ್ಸ್ ಟ್ರೈನಿಂಗ್" ಪಡೆಯುತ್ತಿರುವ ಕುದ್ರೆಪ್ಪಾಡಿ ಗುರುವಾರರ ಮಗಳು ಶ್ರೀಮತಿ ರುಕ್ಮಿಣಿ ಎಂಬ ಹರಿಜನ ಮಹಿಳೆಯು, ಈ ಶಾಲೆಯ ಮಕ್ಕಳಿಗೆ ಕಳೆದ ಮೂರು ಶನಿವಾರಗಳಲ್ಲಿ ಭೋಜನ ವಿತ್ತರು. ತಾ. ೩೦ ರಂದು ರಾವ್ ಸಾಹೇಬ್ ತಿರುವಾಗಿಲು ರಾಮಯ್ಯ ಆಳ್ವ, ರಾ। ಕೂಡ್ಲು ಸದಾಶಿವ ಶ್ಯಾನುಭಾಗ ಮುಂತಾದ ಊರ ಮಹನೀಯರೂ ತಾ. ೬ ರಂದು ಜಿಲ್ಲಾ ಲೇಬರ್ ಆಫೀಸರರೂ ಈ ಸಂದರ್ಭದಲ್ಲಿ ಚಿತ್ಕೃಪಿಸಿದ್ದರು.

PETROL RATIONING

You are not getting all the petrol you want because it is required elsewhere to help win the War. You can help still further by contributing the money You save thereby to the

Governor's War Fund.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ ನಂಬ್ರ 169/1941.

ನರಸಿಂಹ ಗಡಿಯಾರ— **ವಾದಿ.**

ಮತ್ತು

ಪಾಂಡುರಂಗ ಪ್ರಭು— **ಪ್ರತಿವಾದಿ.**

ಇವರೊಳಗೆ

ಪ್ರತಿವಾದಿ—

ಪಾಂಡುರಂಗ ಪ್ರಭು, ಮಾಧವ ಪ್ರಭುಗಳ ಮಗ, ಹಾಲಿ Sha Shivaji Hindu Restaurant, Lal Bagh. Comdi Galli Bombay 13 ಯಂಬಲ್ಲಿರುವವ—

1938-1939-1940ನೆ ಇಸವಿಗಳ ವ್ಯಾದೆಗಳಿಗೆ ವಾದಿಗೆ ಬಹಾ ಗೇಣಿ ಬಾಕಿ ವ ಬಡ್ಡಿ ಕೂಡಾ ಕೋರ್ಟು ಖರ್ಚು ಸಮೇತ ಬರಮಾಡಿಕೊಳ್ಳುವರೆ ವಾದಿಯು ಮಾಡಿದ ಸದ್ರಿ ದಾವೆಯು ತನ್ಸಿ ಬಗ್ಗೆ ತಾರೀಕು 24—9—1941ಕ್ಕೆ ಇಟ್ಟಿರುವದರಿಂದ ಸದ್ರಿ ದಾವೆಗೆ ನಿಮ್ಮ ಆಕ್ಷೇಪಗಳೇನಾದರೂ ಇದ್ದರೆ ಸದ್ರಿ ದಿನ ಪೂರ್ವಾಹ್ನ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ನೀವು ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ಯಾ ಮಾಡಿ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವದು ಎಂಬದನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸೋಣವಾಗಿಯದೆ.

P. Ramachandra Rao,
Pleader for Plaintiff.

ಕಾರ್ಕಳ, ತಾರೀಕು 11—9—1941.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 164/1939
R. E. P. 443/1941
R. E. A. 578/1941

ವೆಂಕಟ್ರಮಣ ಶ್ಯಾನುಭಾಗ ಸಹಾ— **ವಾದಿರು-ಅರ್ಜಿದಾರರು**

ಮತ್ತು

ಗೋವಿಂದ ಭಾಗ್ವತಾ— **ಪ್ರತಿವಾದಿ-ಎದ್ರಿ.**

ಇವರೊಳಗೆ

ಸದ್ರಿ ಅಮ್ಲಜ್ಯಾರಿಯಲ್ಲಿ ಎದ್ರಿಯ ಹಕ್ಕಿನ ಸ್ಥಿರಾಸ್ತಿ ಏಲಂ ಮಾಡಿಸುವ ಬಗ್ಗೆ ಅರ್ಜಿದಾರರು ಏಲಂ ಇಸ್ತಿಹಾರು ದಾಕ್ಲು ಮಾಡಿರುತ್ತಾರೆ. ಸದ್ರಿ ಏಲಂ ಇಸ್ತಿಹಾರು ಮಂಜೂರುಮಾಡಬೇಕಾಗಿಯೂ ಮತ್ತು ಸದ್ರಿ ಇಸ್ತಿಹಾರಿನಿಂದ ತೋರುವ ಆಸ್ತಿ ಏಲಂ ಸಮಯ ಅರ್ಜಿದಾರರಿಗೆ ಯಾ ಅರ್ಜಿದಾರ ಬಗ್ಗೆ ಅರ್ಜಿದಾರರ ವಕೀಲರಿಗೆ Bid ವ set off ಪರ್ಮಿಶನ್ ಕೊಡಬೇಕಾಗಿ ಸಹಾ ದಾಕ್ಲು ಮಾಡಿದ ಸದ್ರಿ R. E. A. 578/1941ನೇ ಅರ್ಜಿ ಸಹಾ ಇದೇ ಬರುವ ತಾ. 24—9—1941ಕ್ಕೆ ಇಟ್ಟಿದೆ. ಆದುದರಿಂದ ಪ್ರತಿವಾದಿ-ಎದ್ರಿಯಾದ ನೀವು ಆ ದಿವಸ ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ [illegible]ಸಿಯದೆ.

K. Vasudeva Kamath,
Advocate for Petitioners.

ಕಾರ್ಕಳ, ತಾ. 9—9—1941

ಬಾದಶಾಹಿ ತತ್ತ್ವದ ಹೊಸ ಮರಿ!

ಮಿ. ಚರ್ಚಿಲ್ಲರ ಭಾಷಣದಲ್ಲಿ ಇಂಡಿಯಕ್ಕೇನೂ ಇಲ್ಲ!

ಮಿ। ಚರ್ಚಿಲ್ಲರು ಇಂಡಿಯದ ಕುರಿತಾದ ತಮ್ಮ ದೀರ್ಘ ಮೌನವನ್ನು ಬಿಟ್ಟು ಈಗ ಪಾರ್ಲಿಮೆಂಟಿನಲ್ಲಿ ಮಾತಾಡಿದರು. ಅವರು ಮಾತಾಡಿದುದು ಅವರಿಗೂ, ಅಮೆರಿಕದ ಪ್ರೆಸಿಡೆಂಟರಿಗೂ ಈಚಿಗೆ ನಡೆದ ಸಂಭಾಷಣೆಯ ವಿಷಯದಲ್ಲಿ; ಅನಂತರ ಅವರಿಬ್ಬರೂ ಸೇರಿ ಹೊರಡಿಸಿದ ಆ ಸಂಯುಕ್ತ ಪ್ರಕಟಣೆಯ ವಿಚಾರದಲ್ಲಿ. ಇದರಲ್ಲಿ ಇಂಡಿಯಕ್ಕೇನೂ ಸಂಪತ್ತಿಲ್ಲವೆಂದುದು ಯಾರನ್ನೂ ಅಚ್ಚರಿಗೊಳಿಸಿಲ್ಲ.

ಮಿ। ಚರ್ಚಿಲ್ಲರು ಸಂಪ್ರದಾಯವಾದಿಗಳು; ಮೊದಲಿದ್ದುದು ಹಾಗೆಯೇ ಇರಲೆಂಬುವವರು. ಹಾಗಾಗಿ, ಶತಮಾನಗಳಿಂದ ನಡೆದು ಬಂದ ಜಗತ್ತಿನ ಆ ಉಚ್ಚ ಕನಿಷ್ಟ ಭಾವ, ಅನ್ಯಾಯ, ದಾಸ್ಯ ಇವು ಇದ್ದರೂ ಇರಬಹುದಾಗಿಕೆ. ಈ ಕಾರಣದಿಂದಲೇ, ಅವರು ತಮ್ಮ "ಎಂಟು ಪ್ಯಾಂಟುಗಳ" ಸಂಯುಕ್ತ ಪ್ರಕಟಣೆಯು, ಇಂಡಿಯಾ, ಬರ್ಮಾ ಅಥವಾ ಸೆಲ್ಫ್ ಗವರ್ನ್‌ಮೆಂಟ್‌ಗಳಿಲ್ಲದ ಬ್ರಿಟಿಷ್ ಸಾಮ್ರಾಜ್ಯದ ಭಾಗಗಳಿಗೆ ಲಗಾವಲ್ಲ ಎಂದಿದ್ದಾರೆ.

ಇದರಲ್ಲಿ ಸ್ವಾರಸ್ಯವೇನೆಂದರೆ,–ಪ್ರೆಸಿಡೆಂಟ್ ರುಜ್‌ವೆಲ್ಟರು, "ಪ್ರತಿಯೊಂದು ಖಂಡದ ಪ್ರತಿಯೊಂದು ವಿಭಾಗದ ಸಮಸ್ಯೆಗಳನ್ನು ನಾವು ತರ್ಕಿಸಿದ್ದೇವೆಂದು" ಒಪ್ಪಿದ ಮೇಲೆಯೂ, ಇಂಡಿಯವನ್ನು ಬ್ರಿಟಿಷರು ತಮಗೆ ಬೇಕಾದಂತೆ ನಡೆಸಿಕೊಳ್ಳಲೆಂದು ಬ್ರಿಟಿಷರ ಧೋರಣೆಗೇ ಒಪ್ಪಿಸಿಕೊಟ್ಟಿರುವುದೇ.

ರುಜ್‌ವೆಲ್ಟ್-ಚರ್ಚಿಲ್ಲರ ವಾಗಾಡಂಬರದ ಆ ಸಂಯುಕ್ತ ಪ್ರಕಟಣೆಯಲ್ಲಿ "ಮಾನವವರ್ಗದ ಉನ್ನತಿಗಾಗಿ ವಿಜಯವು ಬೇಕಾಗಿದೆ" ಎಂಬ ಅರ್ಥವಿದೆಯಾದರೂ, ಈ ಪ್ರಕಟಣೆಯು ಇಂಡಿಯದ ಅದೃಷ್ಟವನ್ನು ಬದಲಾಯಿಸದು; ಎಂದಿನಂತೆ ಭಾರತವನ್ನು ಬ್ರಿಟಿಷರು ತಮಗೆ ಬೇಕಾದಂತೆ ನಡೆಸಿಕೊಂಡು ಹೋಗುವ "ಯಾವತ್ತು ಹಕ್ಕುಗಳೂ" ಬ್ರಿಟನಿಗೇ ಸೇರಿದೆ ಎಂಬುದಿದು, ಪರಸ್ಪರ ವಿರೋಧದ ನುಡಿಗಳ ಒಂದು ವಿಚಿತ್ರ ಪ್ರಕರಣವಾಗಿದೆ. ಹಾಗಾದರೇನು ಪ್ರೆಸಿಡೆಂಟ್ ರುಜ್‌ವೆಲ್ಟರು, ಜಗತ್ತನ್ನು ತಪ್ಪು ಗ್ರಹಿಕೆಯ ಹಾದಿಗೆಳೆಯುವ ಒಂದು ಕೃತಕವಾದ ಸಂಧಿಗೆ ದಸ್ಕತು ಹಾಕಿದರೆ? ಎಂದು ಒಬ್ಬನು ಶಂಕಿಸುವಂತಾಗಿದೆ.

ರುಜ್‌ವೆಲ್ಟ್— ಚರ್ಚಿಲ್ಲರ ಭೇಟಿಯ ಕಾಲದಲ್ಲಿ, ಅವರ ದೃಷ್ಟಿಯಲ್ಲಿದ್ದುದು ಮುಖ್ಯವಾಗಿ ನಾಜಿ ಹಿಡಿತಕ್ಕೊಳಗಾದ ಯುರೋಪಿನ ಪ್ರಭುತ್ವಗಳ ವಿಚಾರವನ್ನಲಾಗಿದೆ; ಬ್ರಿಟಿಷ್ ಸಾಮ್ರಾಜ್ಯದ ವಿಚಾರವಲ್ಲವೆಂದು ಅರ್ಥ ಬರುತ್ತದೆ. ಆದರೆ ಬ್ರಿಟಿಷ್ ಸಾಮ್ರಾಜ್ಯದ ಮುಖ್ಯವಾದ ಸೂತ್ರಗಳು ಕೆಲವು ಬದಲಾಗದೆ, ಈ ಪ್ರಕಟಣೆಯಲ್ಲಿ ತೋರುವ ಜಗತ್ತಿನ ಆರ್ಥಿಕ ಸ್ಥಿತಿಯ ಸುಧಾರಣೆಗಳಾದರೂ ಹೇಗಾದೀತು? ಎಂಬುದು ತಿಳಿಯದು.

ಈ ಸಂಯುಕ್ತ ಪ್ರಕಟಣೆಯಲ್ಲಿ, ತಮ್ಮ ಸ್ವಾತಂತ್ರ್ಯ ಕಳೆದುಕೊಂಡ ಯುರೋಪಿನ ಹಲವು ಹದಿನೆಂಟು ರಾಷ್ಟ್ರಗಳಿಗೆ, ಬ್ರಿಟನೂ ಅಮೆರಿಕವೂ ಮಹತ್ತಾದ ಹಲವು ಉಪಕಾರಗಳನ್ನು ಮಾಡುವ ಉದ್ದೇಶಗಳ ಸೂಚನೆ ಇದೆ; ಸರಿಯೇ. ಆದರೆ ಮುಂದೆ ವಾರ್ಸೆಲಿ ಸಂಧಿಯಂಥವುಗಳಕ್ಕೆ ಆಸ್ಪದಕೊಡಬಾರದೆಂದಿದ್ದರೆ, ಲೋಕಕ್ಕೆ ಉಪಕಾರ ಮಾಡಲು ಹೊರಟವರು ದಲಾಲರ ವೇಷಕ್ರಮವನ್ನು ಅನುಸರಿಸಬಾರದೆಂದಷ್ಟೇ ಅಲ್ಲ; ಅವರು ಯುರೋಪಿನಲ್ಲಿ ಶಾಶ್ವತ ಶಾಂತಿ ನೆಲಸುವ ಏರ್ಪಾಡನ್ನೂ ಮಾಡಬೇಕು. ಮುಖ್ಯವಾಗಿ ಬ್ರಿಟನ್, ತನ್ನ "ಸ್ಪೆಶಲ್" ಹಕ್ಕುಗಳ ಮಾತು ಬಿಟ್ಟು, ಜನಾಂಗ ತತ್ತ್ವಗಳನ್ನು, ಜನಾಂಗಗಳ ಸ್ವಯಂ ನಿರ್ಧಾರದ ಸೂತ್ರಗಳನ್ನು ಮನ್ನಿಸಬೇಕು; ಹಾಗೆ, ಈಗ ಅಲ್ಲಲ್ಲಿ ಸುತ್ತಿಕೊಂಡಿರುವ ಬಾದಶಾಹಿ ತತ್ತ್ವಗಳ ಜೀರ್ಣವಾದ ಹೊದಿಕೆಯನ್ನು ತೆಗೆದೆಸೆದು, ಜನಗಳ ಸದ್ಭಾವವನ್ನು ಸಂಪಾದಿಸಲು ನೋಡಬೇಕು.

ಮಿ। ಚರ್ಚಿಲ್ಲರ ದೃಷ್ಟಿಯಲ್ಲಿ, ಬ್ರಿಟಿಷ್ ಸಾಮ್ರಾಜ್ಯದ ವಿಚಾರವೇ ಬೇರೆ, ಯುರೋಪಿನ ವಿಚಾರವೇ ಬೇರೆಯಾಗಿದೆ. ಆದರೂ, ಎಲ್ಲಿ ನೋಡಿದರೂ ನ್ಯಾಯನೀತಿ, ಸ್ವಾತಂತ್ರ್ಯ ಇವುಗಳ ವಿಚಾರದಲ್ಲಿ ಯಾರಿಗೂ ಕಡಿಮೆಯಾಗಿಲ್ಲವೆಂದು, ಕಡಿಮೆಯಾಗದೆಂದು ಮಿ। ಚರ್ಚಿಲ್ಲರ ಆಶ್ವಾಸನ. ಆದರೆ ಅವರದು ಇದು ಬಾಯುಪಚಾರವಲ್ಲದಿದ್ದರೆ, ಯುದ್ಧಪ್ರಯತ್ನಗಳಲ್ಲಿ ಇಂಡಿಯವು ತನ್ನ ಅದ್ವಿತೀಯವಾದ ಉತ್ಸಾಹ ಪೂರ್ವಕವಾದ ಸಹಕಾರ ಸ್ಫೂರ್ತಿಯನ್ನು ತೋರಬೇಕಾಗಿತ್ತಲ್ಲವೇ? ಅದೀಗ ತೋರುತ್ತಿದೆಯೇ? ತೋರದಿದ್ದರೆ ಅದಕ್ಕೇನು ಹೊಸ ಕಾರಣವಿರಬಹುದು?

ಅದ್ಭುತ ಕಾರ್ಯಗಳ ಉದ್ಘೋಷದ ಈ ಸಂಯುಕ್ತ ಪ್ರಕಟಣೆಯಲ್ಲಿ, ಸಾತ್ವಿಕ ಸ್ವಭಾವದ ಬ್ರಿಟಿಷ್—ಅಮೆರಿಕಗಳಿಗೆ ಯಾವ ರೀತಿಯ ಆತ್ಯಾಶೆಯೂ ಇಲ್ಲವೆನ್ನಲಾಗಿದೆ. ಆದರೆ ಇಂಡಿಯದ ಪ್ರಶ್ನೆ ಬರುವಾಗ ಮಾತ್ರ ಅಲ್ಲಿ "ಹಲವು ಜಾತಿ, ಹಲವು ಕುಲ"ಗಳ ಸಂಬಂಧವಾದ "ಬ್ರಿಟಿಷರ ಜವಾಬುದಾರಿ" ತಪ್ಪುವುದೇ ಇಲ್ಲ! ಎಲ್ಲರೂ ಕಂಡ ಹಾಗೆ ಇಂಡಿಯದ ಹಿತಾಸಕ್ತಿಯನ್ನು ಹಿಂದಕ್ಕೊತ್ತಿ, ಬ್ರಿಟಿಷ್ ಹಿತಾಸಕ್ತಿಯನ್ನು ಮುಂದಕ್ಕೊತ್ತಲಾಗಿದೆ. ಅದರ ಗತಿ ಬದಲಾದೀತೆಂಬುದನ್ನು ಈ ಪ್ರಕಟಣೆ ಹೇಳುವುದಿಲ್ಲ. ಅನ್ನುವಾಗ ಈ ಪ್ರಕಟಣೆ, ಕನ್ನಡಿಯೊಳಗಿನ ಗಂಟೆಂದರೆ ಹೆಚ್ಚೆ?

ಒಟ್ಟಿನಲ್ಲಿ, ಈ ಪ್ರಕಟಣೆಯಲ್ಲಿ ಜಗತ್ತಿನಲ್ಲಿ ಹೊಸ ವ್ಯವಸ್ಥೆಯನ್ನು ನ್ಯಾಯನೀತಿಯ ಅಧಿಕಾರಗಳನ್ನು ದೊಡ್ಡದಾಗಿ ಸ್ಥಾಪಿಸುವುದೆಂದು ಉದ್ಘೋಷಿಸಲ್ಪಟ್ಟಿರುವುದಾದರೂ, ಅವೆಲ್ಲವೂ ಯುದ್ಧಾನಂತರ ಎಲ್ಲಿ ಆಗುವುದೋ ಎಲ್ಲಿ ಹೋಗುವುದೋ ದೇವರ ಬಲ್ಲ. ಇಂಡಿಯದ ವಿಷಯದಲ್ಲಿಯಂತೂ, ಈ "ಎಂಟು ಪ್ಯಾಂಟು"ಗಳ ಗಂಭೀರ ಗರ್ಜನೆ, ಅದೊಂದು ಹಾಳು ಹರಟೆಯೇ! ದೇವತಾನುಗ್ರಹದಿಂದ ಅದಕ್ಕೂ ಇಂಡಿಯಕ್ಕೂ ತಿಲಾಂಶ ಸಂಬಂಧವೂ ಇಲ್ಲ. ಇಂಡಿಯಕ್ಕೆ, ಬ್ರಿಟಿಷರು ಏನು ಹೇಳಬೇಕೊ, ಆ ತೀರ್ಪನ್ನು ಮೊದಲೇ ಹೇಳಿಬಿಟ್ಟಿದ್ದಾರೆ. ಇನ್ನು ಅದರಲ್ಲಿ ಬದಲಾವಣೆ ಏನೂ ಇಲ್ಲ. ಮುಂದೆ ಹತ್ತು ಪ್ಯಾಂಟಿನ ಸಂಯುಕ್ತ ಪ್ರಕಟಣೆ ಹೊರಟರೂ, ಅದೂ "ಅಧೀನ ಭಾರತ"ಕ್ಕೆ ಅನ್ವಯಿಸದು ಎನ್ನುವಾಗ, ಭಾರತದ ಪ್ರಜೆಗಳು "ವರ್ತಮಾನಗಳ ದೃಷ್ಟಿ"ಯಿಂದ ಮಾತ್ರ ಇಂಥ ಭಾಷಣಗಳನ್ನು ಮೇಲಿಂದ ಮೇಲೆ ಓದಿದರೆ ಸಾಕಾಗಿದೆ. ಪ್ರಸ್ತುತಃ ಯುದ್ಧ ಮುಗಿಯುವ ವರೆಗೆ, ಯುರೋಪಿನ ರಾಷ್ಟ್ರ ವಿಚಾರವೇ ಹೊರತು, ನಮ್ಮ ನಿಮ್ಮ ವಿಚಾರಕ್ಕೆ ಅಲ್ಲಿ ಅವಕಾಶವಿಲ್ಲ. ಇದಿಷ್ಟನ್ನು ಮಿ। ಚರ್ಚಿಲ್ಲರು ಸ್ಪಷ್ಟವಾಗಿ ಇಂದು ಸೂಚಿಸಿದ್ದಾರೆ.

ಈಗ ನಮ್ಮ ರಾಷ್ಟ್ರ ನಾಯಕರು, ಕಾಂಗ್ರೆಸಿನವರು,—ಸೂಕ್ತವಾದ ಮಾರ್ಗವನ್ನು ಕಂಡುಹಿಡಿಯುವುದು ಅಗತ್ಯವೆನ್ನಿಸಿದೆ. ಮಿ। ಚರ್ಚಿಲ್ಲರು ಒಳ್ಳೇ ಸಮಯದಲ್ಲಿ ಒಳ್ಳೊಳ್ಳೆಯ ಮಾತುಗಳನ್ನಾಡಿದ್ದಾರೆ. ಭಾರತದ ಕರ್ತವ್ಯವನ್ನು ನಿರ್ಧರಿಸಲು, ಐಕತೆ ಇಲ್ಲಿ ಬಿಗಿಯಾಗಲು ಮಾರ್ಗ ತೋರಿಸಿಕೊಟ್ಟಿದ್ದಾರೆ. ಹಿಂದುಸ್ಥಾನ ವೃದ್ಧಿಯ ಗತಿಯನ್ನು ಸಂಪಾದಿಸಲು, ಬ್ರಿಟಿಷರ ಪರವಾಗಿ, ಮಿ। ಚರ್ಚಿಲ್ಲರು, ಚರ್ಚೆ ಏನೂ ಇಲ್ಲದೆ "ಸಹಾಯ ಮಾಡಿದುದೆಂದರೆ" ಹೀಗೆ. ಈ ಸಂದರ್ಭವನ್ನೂ ನಾವು ಕೈಬಿಟ್ಟರೆ ನಮಗೆ "ಅವಿವೇಕಿ"ಗಳೆಂಬ ಅಪಕೀರ್ತಿ ಬಾರದೆ ಇದ್ದೀತೇ?



ನಿಮ್ಮ ಶ್ವಾಸಕ್ಕೆ
ನಾಸನೆ ಇದ್ದರೆ ನೀವು
ಆರೋಗ್ಯವನ್ನು
ಅನುಭವಿಸಲಾರಿರಿ

ಅನುನಿತ್ಯವೂ ನಮ್ಮ ಯಕೃತ್ತಿನಿಂದ ಎರಡು ಪೈಂಟ್ ಪಿತ್ತದ ದ್ರವವು ಕರುಳೊಳಗೆ ಸುರಿಯದಿದ್ದರೆ ನಮ್ಮ ಚಲನಗಳು ಘಟ್ಟಿಯಾಗಿ, ಮಲಬದ್ಧತೆಯುಂಟಾಗುತ್ತದೆ ಮತ್ತು ನಮ್ಮ ಆಹಾರವು ಅಸ್ವಾಭಾವಿಕವಾಗಿ ನಮ್ಮ 28 ಫೀಟಿನ ಕರುಳುಗಳಲ್ಲಿ ಹಾಳಾಗುತ್ತದೆ. ಈ ಹೊಲಸು ಪ್ರತಿ ಆರು ನಿಮಿಷಗಳಿಗೊಮ್ಮೆ ನಮ್ಮ ದೇಹದಲ್ಲೆಲ್ಲಾ ವಿಷವನ್ನು ಕಳುಹಿಸುತ್ತದೆ. ಅದು ನಮ್ಮನ್ನು ಮ್ಲಾನಚಿತ್ತರನ್ನಾಗಿಯೂ, ಜಡಸ್ವಭಾವದವರನ್ನಾಗಿಯೂ ಯಾವದಕ್ಕೂ ಬಾರದವರನ್ನಾಗಿಯೂ ಮಾಡುತ್ತದೆ. ನಮ್ಮ ಮಿತ್ರರು ಈ ಹೊಲಸು ನಮ್ಮ ಬಾಯಿಯಿಂದ ಹೊರಡುವದನ್ನು ಅನುಭವಿಸಿ ಅದನ್ನು ದುರ್ವಾಸನಾಮಯವಾದ ಶ್ವಾಸವೆನ್ನುತ್ತಾರೆ. ಭೇದಿಯು ಮತ್ತು ಬಾಯಿ ಮುಕ್ಕಳಿಸುವ ಇತರ ಔಷಧಗಳು ಸ್ವಲ್ಪ ಮಟ್ಟಿಗೆ ಮಾತ್ರ ಸಹಾಯ ಮಾಡುವವು ಕಾರ್ಟರರ ಚಿಕ್ಕ ಲಿವರ್ ಮಾತ್ರೆಗಳನ್ನು ಸೇವಿಸಿ. ಅವುಲ ಎರಡು ಪೈಂಟ್ ಪಿತ್ತದ್ರವವು ಸರಾಗವಾಗಿ ಸುರಿಸುತ್ತವೆ. ಮತ್ತಾಗ ನೀವು 'ಇನ್ನೂ ಇನ್ನೂ' ಹುರುಪುಗೊಂಡವರಾಗುತ್ತೀರಿ. ಕಾರ್ಟರರ ಲಿಟ್ಲ್ ಲಿವರ್ ಪಿಲ್ಸ್ ಎಂಬ ಹೆಸರಿನಿಂದಲೇ ಕೇಳಿರಿ ಮತ್ತು ನೀವು ಕೇಳಿದುದನ್ನೇ ತೆಗೆದುಕೊಳ್ಳಿ. 41

ನೋ ಟಿ ಸು.

ಜಯ ಲಕ್ಷ್ಮೀ ಬೇಂಕ್, ಲಿಮಿಟೆಡ್, ಪುತ್ತೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ನಗ ಈಡಿನ ಮೇಲೆ ಸಾಲಪಡಕೊಂಡ ಅನಂತರ ಸದರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟಿಸುಗಳು ವಾಪಸು ಬಂದಿರುವದರಿಂದ ಸದರಿಯವರು ಈಡಿಟ್ಟ ನಗ ಗಳು ಇದೇ ತಾ. 27-9-41ನೆ ಶನಿವಾರ ದಿವಸ ಶ್ಯಾಮ ಘಂಟೆ 3ಕ್ಕೆ ಯಾ ನಮಗೆ ಅನಂತರ ಯುಕ್ತಕಂಡ ತಾರೀಕಿನಲ್ಲಿ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವವು ಎಂಬದನ್ನು ಈ ಮೂಲಕ ತಿಳಿಸಿರುತ್ತದೆ.

ಸಾಲದ ನಂಬ್ರ	ಸಾಲಪಡಕೊಂಡವರ ಹೆಸರು	ಸಾಲದ ಮೊಬಲಗು
		ರೂ. ಆ. ಪೈ
533	ಬೊಳುವಾರು ಕೃಷ್ಣ, ಮಂಜಪ್ಪರ ಮಗ, ವ್ಯಾಪಾರಿ,	
38-39	ಪುತ್ತೂರು ಕಸಬಾ.	2-0-0
4183	ಬೀಡು ಹಮ್ಮದೆ ಭ್ಯಾರಿ, ಅಬ್ದುಲ್ಲ ಬ್ಯಾರಿಗಳ ಮಗ,	
38-39	ಕೆದಂಬಾಡಿಗ್ರಾಮ.	100-0-0
1127	ಡಿ	3-0-0
39-40		
241	ಕುರಿಯ ಗುಡ್ಡಪ್ಪ ರೈ, ಲಕ್ಕಣ್ಣ ರೈ ಪೊಮ್ಮಗ,	
39-40	ಎಣ್ಮೂರುಗ್ರಾಮ.	17-0-0
2731	ಡಿ	9-0-0
39-40		
321	ಗೋಳ್ತಿಲ ಬಡ್ಪಕುಂಞ ಬ್ಯಾರಿ, ಪಕ್ರಬ್ಬ ಬ್ಯಾರಿಗಳ	
39-40	ಮಗ, ಅರಿಯಡ್ಕಗ್ರಾಮ.	4-0-0
684	ಡಿ	5-0-0
39-40		
460	ದಿವಾಣ ಶಂಕರ ಭಟ್ಟಾ, ಈಶ್ವರ ಭಟ್ರ ಮಗ, ವಿಟ್ಲ	
40-41	ಪಡ್ನೂರುಗ್ರಾಮ.	25-0-0
2087	ಡಿ	13-0-0
40-41		
1040	ದಡ್ಡು ಸುಬ್ಬಯ್ಯ ಪೂಜಾರಿ, ಪಕೀರ ಪೂಜಾರಿ ಅಳಿಯ,	
40-41	ಅಲಂಕಾರುಗ್ರಾಮ.	12-0-0
1236	ಇಡ್ಯಪೆ ಐತಪ್ಪ ಗೌಡಾ, ಬೀರು ಗೌಡರ ಮಗ,	
40-41	ಕೆದಂಬಾಡಿಗ್ರಾಮ.	18-0-0
1979	ನನ್ಯ ಮಮ್ಮಿಬ್ಯಾರಿ, ಅಬ್ದುಲ್‌ರಹಿಮಾನ ಬ್ಯಾರಿಗಳ	
40-41	ಮಗ, ಮೂಡ್ನೂರುಗ್ರಾಮ.	12-0-0
2773	ಬಾಳೆಕೋಡಿ ವೆಂಕಟ್ರಮಣ ಭಟ್ಟಾ, ಶಂಕರ ಭಟ್ಟರ	
40-41	ಮಗ, ಕನ್ಯಾನಗ್ರಾಮ.	25-0-0
		245-0-0

Jayalaxmi Bank, Ltd., Puttur. (S. K.)
12—9—41.

P. Sanjiva Rao,
Agent.

ತಾಲೂಕು ವರ್ತಮಾನ

ಉಡುಪಿ:—ಸ್ಥಳೀಯ ಸರಕಾರಿ ಆಸ್ಪತ್ರೆಯ ಲೇಡೀ ಡಾಕ್ಟರ್ ಶಾರದಾ ಬಾಯಿ ಅಮ್ಮಾಳ್ ಅವರಿಗೆ ಕಂಜೀವರಂ ಆಸ್ಪತ್ರೆಗೆ ವರ್ಗವಾಗಿದೆ.

ಕುಂದಾಪುರ:—ಈ ಪ್ರಾಂತದ ಬೀಜಾಡಿ ಎಂಬಲ್ಲಿಗೆ ಮೈಸೂರು ಕಡೆಯಿಂದ ಫ್ಲೇಗಿನ ಸೋಂಕಿರುವ ಳ ಮುಂದಿ ಬಂದಿದ್ದು ಅವರಲ್ಲೊಬ್ಬರು ಮೃತರಾದರು. ಮಿಕ್ಕವರು ಆರೋಗ್ಯ ಹೊಂದುತ್ತಿದ್ದಾರೆ.

ಕಾರ್ಕಳ:—ಈ ಊರಿನ ಗೌಡ ಸಾರಸ್ವತ ಸಮಾಜದ ಬಾಲ ವಿಧವೆ ಶ್ರೀ। ಶಾಂತಾ ದೇವಿ ಎಂಬಾಕೆಯನ್ನು ಮದ್ರಾಸಿನ ವಿಶ್ವಕರ್ಮ ಸಮಾಜದ ಶ್ರೀ। ಗಣೇಶ ಎಂಬವರು ಬೆಂಗಳೂರಲ್ಲಿ ವಿವಾಹ ಮಾಡಿಕೊಂಡರಾಗಿ ತಿಳಿದು ಬಂದಿದೆ.

ಕಡಬ:—ಇಲ್ಲಿಯ ಜನಪ್ರೀತ ಡಾ। ಎ. ಎಸ್. ಹೆಬ್ಬಾರರು ರಜೆಯ ಮೇಲೆ ತೆರಳುವ ಸಂದರ್ಭದಲ್ಲಿ ಆ ಊರಿನ ಮಹಾ ಜನರು ಡಾಕ್ಟರರ ಸನ್ಮಾನಾರ್ಥವಾಗಿ ಒಂದು ವಿದಾಯ ಕೂಟವನ್ನೇರ್ಪಡಿಸಿ ಗೌರವಿಸಿದರು.

ಮಿಜಾರು ಅಶ್ವತ್ಥಪುರ:—ಇಲ್ಲಿಯ ಶ್ರೀ ವಾಣೀವಿಲಾಸ ಹಾ. ಎ. ಶಾಲೆಯಲ್ಲಿ ದಿವಂಗತ ದಿ ಬ. ಮಹಾಬಲ ಹೆಗ್ಡೆಯವರ ಪುತ್ರ ಡಾ। ಎಂ. ಶಂಭು ಹೆಗ್ಡೆ ಎಂ. ಬಿ. ಬಿ. ಎಸ್. ಸಿವಿಲ್ ಅಸಿ॥ ಸರ್ಜನ್ ಇವರ ಸನ್ಮಾನಾರ್ಥವಾಗಿ ಬಂದು ಸತ್ಕಾರ ಕೂಟವು ಈಚಿಗೆ ಕಾರ್ಕಳ ರೇಂಜ್ ಶಾಲೆಗಳ ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ. ಯು. ಕೃಷ್ಣರಾವ್, ಬಿ. ಏ. ಎಲ್. ಟಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಕಮಿಟಿಯವರೂ ಉಪಾಧ್ಯಾಯರೂ ಡಾ। ಶಂಭು ಹೆಗ್ಗಡೆರವರಿಗೆ ಆ ಹುದ್ದೆ ದೊರಕಿದ ಬಗ್ಗೆ ಸಂತೋಷ ಸೂಚಿಸಿ ಅವರ ಶ್ರೇಯೋಭಿವೃದ್ಧಿಯನ್ನು ಕೋರಿ ಅವರೂ ದಿವಂಗತ ಹೆಗ್ಡೇರಂತೆ ಲೋಕೋಪಕಾರಿಗಳಾಗಿ ಕೀರ್ತಿಶಾಲಿಗಳಾಗಿ ಬಾಳಲೆಂದು ಹಾರೈಸಿ ಅಧ್ಯಕ್ಷರೂ ಭಾಷಣಕೊಟ್ಟ ಮೇಲೆ, ಶಾಲಾಕಮಿಟಿಯವರ ಮಾನ

ಪ್ರಕಟಣೆ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 630/35
R. I. A. No. 450/40
R E. P. No 224/41
R. E. A. No. 670/41

ದೇವರಾಜ ಹೆಗ್ಡೆ— **ಅರ್ಜಿದಾರ.**
ಮತ್ತು
ಸದಾಶಿವ ಭಟ್ಟ ಕೂಡಾ— **ಯದ್ರಿರು.**
ಇವರೊಳಗೆ

ಕಾರ್ಕಳ ತಾಲೂಕು ಮಾಳ ಗ್ರಾಮಸ್ಥ, ಹಾಲಿ ಪುತ್ತೂರು ತಾಲೂಕು ಮಲವಂತಿಗೆ ಗ್ರಾಮದ ಗುರಿಗದ್ದೆ ಎಂಬಲ್ಲಿರುವ ಜನಾರ್ಧನ ಭಟ್ರ ಮಗ 3ನೇ ಎದ್ರಿ ಚಂದ್ರಶೇಖರ ಭಟ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಸದ್ರಿ ಅಮ್ಲಜಾರಿಯಲ್ಲಿ ನಿಮ್ಮ ಕುಟುಂಬದ ಸ್ಥಿರಾಸ್ತಿಯನ್ನು ಏಲಂಮಿನ ಬಗ್ಗೆ ಅರ್ಜಿದಾರರು ಏಲಂ ಇಸ್ತಿಹಾರು ಹಾಜರುಮಾಡಿರುವದರಿಂದಲೂ ಮತ್ತು ಸದ್ರಿ ಆಸ್ತಿ ಏಲಂ ಸಮಯ ಬಿಡ್‌ಮಾಡುವರೆಯೂ ಹಾಗೆ ಬಿಡ್‌ಮಾಡುವ ಐವೇಜು ಪೈಸಲೆ ಐವೇಜಿನಲ್ಲಿ Set off ಮಾಡುವದೇ ಸಹಾ ಪರ್ಮಿಶನ್ ಕೇಳಿ ಅರ್ಜಿದಾರನು ಅರ್ಜಿ ಕೊಟ್ಟಿರುವದರಿಂದ ಸಹ ಇವುಗಳ ಕುರಿತು ನಿಮಗೆ ಏನಾದರೂ ಆಕ್ಷೇಪಣೆಗಳು ಇರುವುದಾದರೆ ತಾರೀಕು 10-10-1941ನೇ ದಿವಸ ಬೆಳಿಗ್ಯೆ 10 ಗಂಟೆಗೆ ನೀವು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳದೆ ಇದ್ದಲ್ಲಿ ಅವುಗಳ ಕುರಿತು ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲಕ ನೀವು ತಿಳಿದಿರತಕ್ಕದ್ದು.

ಕೋರ್ಟು ಹುಕುಂ ಪ್ರಕಾರ
ಎಂ. ಎಸ್. ಅಧಿಕಾರಿ.
ಅರ್ಜದಾರನ ಕಡೆ ವಕೀಲ.

ಮೊಕ್ಕಾಂ ಕಾರ್ಕಳ, 12—9—'41.

ಪತ್ರದ ಸಮರ್ಪಣೆಯಾಗಿ ಉಪಹಾರ ಭಾವಚಿತ್ರಗಳ ಕೂಟದೊಡನೆ ಸಭೆ ಮುಗಿಯಿತು.

ರಿಜಿಸ್ಟರ್ಡ್ ನಂ. 18024

ರಕ್ತವೃದ್ಧಿಗೆ— ವೀರ್ಯಪುಷ್ಟಿಗೆ

ವೀರ ರತ್ನ ನಂ. 1.

ವೀರ್ಯ (ಧಾತು) ನಷ್ಟದಿಂದುಂಟಾದ ಸಮಸ್ತ ವ್ಯಾಧಿಗಳಿಗೆಲ್ಲಾ ಅಮೃತಪ್ರಾಯವಾದದ್ದು

ಇಂದ್ರಿಯವು ನಿರಾಗಿ ಸೋರುವಿಕೆ, ಮುಷ್ಟಿ ಮೈಥುನ ಸ್ವಪ್ನಾವಸ್ಥೆ, ವೃದ್ಧಾಪ್ಯ, ಅಜೀರ್ಣ, ಮಲಬದ್ಧತೆ, ನರಗಳ ನಿಶ್ಶಕ್ತಿ, ನಪುಂಸಕತ್ವವೇ ಮುಂತಾದ ಭಯಂಕರ ವ್ಯಾಧಿಗಳನ್ನು ಬಹು ಶೀಘ್ರದಲ್ಲೇ ಗುಣಪಡಿಸಿ ನವಯೌವನವನ್ನುಂಟುಮಾಡಿ ದೀರ್ಘಕಾಲ ರತಿಸುಖವನ್ನನುಭವಿಸುವಂತೆ ಮಾಡುವುದು. ಪಥ್ಯವೇನು ಇಲ್ಲ. ಅನುಪಾನ ಪತ್ರಿಕೆ ಔಷಧಿಯ ಜೊತೆಯಲ್ಲುಂಟು. ಬೆಲೆ: ½ ಪೌಂ. ರೂ. 1-8-0. ¼ ಪೌಂ. ಆಣೆ 0-14-0

ವೀರ ರತ್ನ (ನಂ. 2) ತೈಲ

ಇದನ್ನು ಜನನೇಂದ್ರಿಯದ ಮೇಲೆ ಹಚ್ಚುವುದರಿಂದ ಬಾಲ್ಯದ ಅನೇಕ ದುರಭ್ಯಾಸಗಳಿಂದಲೂ, ಅತಿಭೋಗದಿಂದಲೂ, ಮುಷ್ಟಿ ಮೈಥುನಗಳಿಂದಲೂ, ಜನನೇಂದ್ರಿಯವು ಬಿಗಿತಪ್ಪಿ ಡೊಂಕಾಗಿರುವಿಕೆ ಆದರಿಂದುಂಟಾದ ನರಗಳ ದೌರ್ಬಲ್ಯ, ನಪುಂಸಕತ್ವವೇ ಮುಂತಾದುವನ್ನು ಶೀಘ್ರದಲ್ಲಿಯೇ ಗುಣಪಡಿಸಿ ನರಗಳಲಿ ಬಲವನ್ನುಂಟುಮಾಡಿ ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ನೂರಾರು ಮಾತುಗಳಿಂದೇನು? ಉಪಯೋಗವೇ ನಿಜವಾದ ಉದಾಹರಣೆ ಇದರಿಂದ ಗಾಯ ಗುಳ್ಳೆಗಳಾಗುವುದಿಲ್ಲ. ಬೆಲೆ: ಅರ್ಧ ತೊಲೆ ಸೀಸೆ 1ಕ್ಕೆ ರೂ. 1—4—0.

ಪತ್ರವ್ಯವಹಾರಗಳು ಗುಟ್ಟಾಗಿಡಲ್ಪಡುವುದು. ಅಂಚೆವೆಚ್ಚ ಬೇರೆ.

ವೀರ ರತ್ನ ಫಾರ್ಮಸಿ, 20 ಗ್ರೈನ್ ಬಜಾರ್ ನ್ಯೂ ಮಾರ್ಕೆಟ್, ಬೆಂಗಳೂರು, ಸಿಟಿ (K.)

THE BANK OF MANGALORE LTD., MANGALORE

Balance Sheet as at 30th June 1941

CAPITAL & LIABILITIES

Paid-up Capital — — —	20,865	0	0
General & Contingent Reserves — —	5,900	0	0
Income-tax Reserve — — —	1,350	1	0
Due to Bankers	nil		
Deposits — — —	1,32,152	8	3
Bills for Collections — — —	21,574	1	2
Sundries including Profits — —	3,232	1	11
	1,85,073	12	4

PROPERTY & ASSETS

Furniture & Safes — — —	1,400	0	0
Authorised Investments — —	1,16,164	6	10
Investment on Govt. Securities —	7,854	0	0
Fixed Deposit with a Scheduled Bank —	10,000	0	0
Bills per Contra — — —	21,574	1	2
Sundries — — —	3,585	3	0
Cash-in-hand & with Bankers at Call	24,496	1	4
	1,85,073	12	4

ನಾಜಿಗಳ ಅಪಪ್ರಚಾರದ ಸನ್ಮೋಹನಾಸ್ತ್ರ

ಹೆಣ್ಣು!

ಪ್ರಪಂಚದಲ್ಲೆ ಸುಂದರಿಯಾದ ಹೆಣ್ಣಿಗೆ ಮನಸೋಲದವನಾರು? ಜರ್ಮನರು ಈ ಮರ್ಮವನ್ನು ಚೆನ್ನಾಗಿ ತಿಳಿದವರು. ಈ ಸನ್ಮೋಹನಾಸ್ತ್ರದಿಂದಲೂ ಶತ್ರುರಾಷ್ಟ್ರಗಳ ಪರಾಜಯದ ಹಾದಿಯನ್ನು ಪರಿಷ್ಕರಿಸಿಕೊಂಡಿರುವರು.

ಯುರೋಪಿನ ಅನೀತಿಯ ಪ್ರಚಾರ ಕಾರ್ಯದಲ್ಲಿ, ಜರ್ಮನಿಯ ಅಧಿಕಾರಿಗಳು ಉಪಯೋಗಿಸಿಕೊಂಡಷ್ಟು ಮಂದಿ ಹೆಂಗಸರನ್ನು, ಇನ್ನಾವ ರಾಷ್ಟ್ರಗಳೂ ಬಳಸಿಕೊಂಡಿಲ್ಲ. ಇವರೆಲ್ಲರೂ ಜರ್ಮನಿಯ ಗುಪ್ತಚಾರ ದಳದ ಅಥವಾ "ಫಿಫ್ತ್ ಕಾಲಮಿನವರ" ಕೆಲಸ ಕಾರ್ಯಗಳನ್ನೇ ಪೂರೈಸುವವರು.

ಬೆಲ್ಜಿಯಮಿನಲ್ಲಿ ಹಲವು ಮಂದಿ ಫ್ರೆಂಚ್ ಮಹಿಳೆಯರು ವಾಸಿಸುತ್ತಿದ್ದರು. ಅವರಲ್ಲಿ ಹಲವರ ಗಂಡಂದಿರು ಫ್ರೆಂಚ್ ಸೇನೆಗೆ ಸೇರಿದವರಾಗಿದ್ದರು. ಈ ಸಂದರ್ಭದಲ್ಲಿ "ಯಾವತ್ತು ಫ್ರೆಂಚ್ ಸೇನೆಗಳೂ ನಿಪಾತಮಾಡಲ್ಪಟ್ಟವೆಂಬ" ಅಪಪ್ರಚಾರದ ಸುಳ್ಳು ಸುದ್ದಿಯೊಂದು ಹಬ್ಬಿತು. ಇದನ್ನು ನಂಬಿ ಈ ದುಃಖವನ್ನು ಆ ಫ್ರೆಂಚ್ ಮಹಿಳೆಯರು, ಬೆಲ್ಜಿಯಮ್ಮಿನ ತಮ್ಮ ನೆರೆಯವರಲ್ಲಿ ಹೇಳಿಕೊಂಡರು. ಆಗ ಆ ಬೆಲ್ಜಿಯಮಿನವರು, "ಜರ್ಮನರ ವಿರುದ್ಧ ಕಾದಾಡುವುದು ಫಲವಿಲ್ಲ"ವೆಂದು ಧೈರ್ಯಗೆಡುವಂತಾಯಿತು. ಇಷ್ಟಕ್ಕೆಲ್ಲಾ ಕಾರಣಭೂತರು, ಈ ಅವಾಂತರ ಪ್ರಳಯದ ನೂತನ ಬ್ರಹ್ಮರು–ಆ ಜರ್ಮನ್ ಗುಪ್ತಚಾರಿಣಿಯರೇ.

ನಾಜಿ ಮಹಿಳೆಯರ "ಫಿಫ್ತ್ ಕಲಂ" ಎಂಬುದು ಒಲುಪು ಬಯ್ಯಾರಿಗಳ ದೊಂದು ದೊಡ್ಡ ದಂಡು! ಈ ದಂಡಾಳುಗಳನ್ನು ನಾಜಿಗಳು, ತಾವು ದಂಡೆತ್ತಿ ಹೋಗಲಿದ್ದ ಹಲವು ರಾಷ್ಟ್ರಗಳ ಅಧಿಕಾರಿಗಳ ಮೇಲೆ ಪ್ರಯೋಗಿಸಿದ್ದಾರೆ; ಆ ಅಧಿಕಾರಿಗಳನ್ನು, ಈ ಸುಂದರಿಯರ ಬಲೆಯಲ್ಲಿ ಸಿಲುಕಿಸಿ, ಮೈಮರೆಸಿ, ಆ ರಾಷ್ಟ್ರಗಳ ರಹಸ್ಯವನ್ನು ಸಂಗ್ರಹಿಸಿದ್ದಾರೆ.

ಈ ಜೆಲುವ ತರುಣಿಯರು, ಪರರಾಷ್ಟ್ರಗಳ ವಿನೋದ ಮಂದಿರಗಳಲ್ಲಿ, ಪಾನಭೋಜನ ಗೃಹಗಳಲ್ಲಿ ಓಡಾಡುತ್ತ, ಅಲ್ಲಿಗೆ ಬರುವ ಅಧಿಕಾರಿಗಳೊಡನೆ ಸಖ್ಯ ಬೆಳೆಸಲು ನೋಡುವುದು ಮಾಮೂಲು; ಅದೇ ಅವರ ಕಾರ್ಯಾರಂಭದ "ಶ್ರೀಗಣ".

ಹಿಟ್ಲರ್ ಕಣ್ಣಿಟ್ಟದ್ದ ಒಂದು ರಾಷ್ಟ್ರದ ಒಬ್ಬ ಅಧಿಕಾರಿ, ಯಾವಳೋ ಒಬ್ಬ ವಿದೇಶೀ ಹೆಣ್ಣಿನೊಡನೆ ತಿರುಗುತ್ತಿರುವ ವಾರ್ತೆ ತಿಳಿದು, ಆ ಸರಕಾರ ಅವನಿಗೆ ದಂಡನೆ ವಿಧಿಸುವಷ್ಟರಲ್ಲಿಯೇ, ಆ ಹೆಣ್ಣು ಆ ರಾಷ್ಟ್ರದ ಸಕಲ ಮುಖ್ಯ ರಹಸ್ಯಗಳನ್ನೂ ಆ ಅಧಿಕಾರಿಯಿಂದ ಮೆತ್ತಗೆ ಸಂಗ್ರಹಿಸಿಕೊಂಡು ಜರ್ಮನಿಗೆ ಜಾರಿ ಬಿಟ್ಟಿದ್ದಳು!

ಹಿಮ್ಲರ್ ತನ್ನ ಬರ್ಲಿನಿನ ಗೆಸ್ಟೆಪೋ ಕಾರ್ಯಾಲಯದಲ್ಲಿ, ನೂರಾರು ನಾಜಿ ಸುರಸುಂದರಿಯರ ಭಾವಚಿತ್ರಗಳನ್ನೆಲ್ಲ, ಬಹು ಗುಪ್ತವಾಗಿ ಇರಿಸಿಕೊಂಡಿರುವನು. ಆ ಸುಂದರಿಯರನ್ನು ಕಂಡರೆ, ಎಂಥವನಿಗೂ "ಮೇನಕೆಯನ್ನು ಕಂಡ ವಿಶ್ವಾಮಿತ್ರ"ನ ಗತಿಯೇ. ಅಂಥ ಸ್ಫುರದ್ರೂಪಿ ಕನ್ನಿಕೆಯರ, ಅನುಪಮ ಸೌಂದರ್ಯದ ಮಹಿಳೆಯರ ಚಿತ್ರಪಟಗಳನ್ನು ಮಾತ್ರ, ಅವನು ಸಂಗ್ರಹಿಸಿಕೊಂಡು, ಸಮಯ ಬಿದ್ದಾಗ, ಅವರನ್ನು ಉಪಯೋಗಿಸಿಕೊಳ್ಳುವನು. ಈ ಮೋಹಿನೀ ಮಾಯಾವಿನಿಯರ ಚಿತ್ರ ಸಂಗ್ರಹವು, ಗೆಸ್ಟೆಪೋ ದಳದ ನಾಯಕನಾದ ಹೈನ್‌ರಿಚ್ ಹಿಮ್ಲರನಲ್ಲಿ ಹೀಗೆ ಹೇಗೆ ಯಾವ ರೀತಿಯಿಂದ ಸಂಗ್ರಹವಾಗುತ್ತಿದೆ ಎಂಬುದು ಯಾರಿಗೂ ತಿಳಿದಿಲ್ಲ.

ಜರ್ಮನಿಯ ಈ ಮಾಯಾ ಸುಂದರಿಯರ ಭಾವಚಿತ್ರಗಳ ಗುಟ್ಟು ಜರ್ಮನಿಯಲ್ಲಿ ತಿಳಿದುದೆಂದರೆ—ಮೂವರಿಗೆ! ಹಿಮ್ಲರ್, ಗೊಬೆಲ್ಸ್, ಅಲ್ಲದೆ (ನಾಜಿ ಗುಪ್ತ ಪೋಲೀಸು ಬಲದ ವಧೆಯ ಅಧಿಕಾರಿ) ಬುಚ್–ಈ ತ್ರಿಮೂರ್ತಿಗಳಿಗೆ ಮಾತ್ರ!

ಈ ಸುಂದರಿಯರಾದರೂ, ಸಾಮಾನ್ಯರಲ್ಲ. ದೇಶಹಿತಕ್ಕಾಗಿ, ಜರ್ಮನಿಯ ಉದ್ಧಾರಕ್ಕಾಗಿ ಯಾವ ಕಾರ್ಯ ತಾವು ಮಾಡಬೇಕು? ಅದಕ್ಕೆ ಅವರು ಸಿದ್ಧರೇ. ದೇವತೆಗಳ ಸುಖಕ್ಕಾಗಿ ಮನ್ಮಥ ಭಸ್ಮವಾದಂತೆ, ಈ ಕಾಮಿನಿಯರೂ ಜರ್ಮನಿಗಾಗಿ, ಶತ್ರುಗಳ ಫಿರಂಗಿಗೆ ಬಲಿ ಬೀಳಲೂ ಬೆದರುವವರಲ್ಲ.

ಈ ನಾಜಿ ಸುಂದರಿಯರ ಸಾಹಸ ಕಾರ್ಯಗಳು ಒಂದೆರಡಲ್ಲ; ಇವರು ವಂಚಿಸಲು ನೋಡಿದ ಯುರೋಪಿನ ರಾಷ್ಟ್ರಗಳ ದೊಡ್ಡ ಅಧಿಕಾರಿಗಳು ಒಬ್ಬಿಬ್ಬರಲ್ಲ: ಇವರ ಕೈಗೆ ಸಿಕ್ಕದವರು, ಇವರಿಗೆ ಮನಸೋತು ಮರುಳಾಗದವರು ವಿರಳ. ಈ ಚೆಲುವೆಯವರ ಪ್ರಭಾವವೆಂದರೆ ಅಷ್ಟು!

ಹಿಟ್ಲರನು ಆದೊಂದು ರಾಷ್ಟ್ರವನ್ನು ಹಿಡಿಯುವ ಮುನ್ನ, ಇಂಥವಳೊಬ್ಬ ಅದ್ವಿತೀಯ ರಮಣಿ, ಆ ರಾಷ್ಟ್ರದ ಮುಖ್ಯಾಧಿಕಾರಿಯ ಬಳಿಗೆ ಕಳುಹಲ್ಪಟ್ಟಳು. ಅವಳೊಬ್ಬ ಗುಪ್ತಚಾರಿಣಿಯಾಗಿದ್ದಳು. ಆರಂಭದಲ್ಲಿ ಆಕೆಗೆ ಅವನನ್ನು ಬಗಲಿಗೆ ಹಾಕುವುದು ಕಷ್ಟವಾದರೂ ಅನಂತರ ಅವನು ಅವಳ ವಶನಾದ. ಅವನು ವಿಧುರನಾಗಿದ್ದುದರಿಂದ, ಆಕೆಗೆ ಅವನು ಮಲಗುವ ಕೊಟಡಿಯ ವರೆಗೂ ಪ್ರವೇಶ ದೊರಕಿತು. ಅಲ್ಲಿ ಅವಳು ಆ ರಾಜ್ಯದ ಗುಪ್ತ ದಾಖಲೆಗಳ ಚಿತ್ರವೆತ್ತಿದಳು.

ಪರಿಣಾಮ,–ನಾಜಿಗಳಿಗೆ ಆ ರಾಷ್ಟ್ರ ಸುಲಭದಲ್ಲಿ ವಶವಾಯಿತು.

ಈ ಸುಂದರಿಯರು ಕೆಲ ಅರಸರನ್ನೂ ಅಲುಗಾಡಿಸದೆ ಬಿಡಲಿಲ್ಲ. ಹಿಟ್ಲರನಿಗೆ ಬೇಕಾಗಿದ್ದ ಒಂದು ರಾಷ್ಟ್ರಕ್ಕೆ ಒಬ್ಬ ಮೋಹಿನಿಯನ್ನು ನಾಜಿಗಳು ಕಳುಹಿಸಿದ್ದರು. ಅವಳಿಗೆ ಬೇಕಾದಷ್ಟು ದುಡ್ಡು ಕಾಸನ್ನೂ ಕೊಟ್ಟಿದ್ದರು ಖರ್ಚಿಗೆ. ಅವಳು ಆ ರಾಷ್ಟ್ರದ ಸಮಾಜದಲ್ಲಿ ಒಬ್ಬ ರಾಜಕುಮಾರಿಯಂತೆ ಓಡಾಡತೊಡಗಿದಳು. ಒಂದು ದಿನ ಅವಳು ಅಲ್ಲಿನ ತರುಣ ಅರಸರನ್ನೂ ಅವರ ಒಂದು ಅರಮನೆಯಲ್ಲಿ ಏಕಾಂತವಾಗಿ ಸಂಧಿಸಿದಳು. ಇದರ ಪರಿಣಾಮವಾಗಿಯೋ ಎಂಬಂತೆ, ಈ ಅರಸರು 'ಮಿತ್ರರಾಷ್ಟ್ರ'ಗಳ ಬಾಂಧವ್ಯವನ್ನು ಕಡಿದುಕೊಂಡರು. ಹಿಮ್ಲರ ಗೋಬೆಲ್ಸರಿಗೆ ಈ ಸನ್ಮೋಹನಾಸ್ತ್ರದಿಂದ ಸಿಕ್ಕಿದ ಇನ್ನೊಂದು ದೊಡ್ಡ ವಿಜಯವೆಂದರೆ—ಇದೇ.

ಇನ್ನು ಕೆಲವು ರಾಷ್ಟ್ರಗಳಲ್ಲಿಯೂ ಈ ಸುಂದರಿಯರು ದೊಡ್ಡ ಅಧಿಕಾರ ಪದವಿಯಲ್ಲಿರುವವರನ್ನು ಮಾತಾಡಿಸಲು ಹೋದುದಿದೆ. ಒಂದೆರಡು ಸಂದರ್ಭಗಳಲ್ಲಿ ಇವರ ಆಟ ಸಾಗದೆ ವಿಫಲಮನೋರಥರಾಗಿ ಹಿಂದಿರುಗಿ ಬಂದುದೂ ಇದೆ. ಯದ್ಯಪಿ ಫ್ರಾನ್ಸ್, ಬೆಲ್ಜಿಯಂ, ಪೋಲೆಂಡ್ ಮೊದಲಾದ ಕಡೆ ಇವರು ಅಧಿಕಾರಿಗಳನ್ನು ಮರುಳು ಗೊಳಿಸಲು ಮಾಡಿದ ತಂತ್ರಗಳು,

(೧೪ನೇ ಪುಟಕ್ಕೆ ಮುಂದುವರಿಸಿಯದೆ.)

ಆ ಕೆಮ್ಮು, ಅಥವಾ ನೆಗಡಿಯನ್ನು ಗುಣಪಡಿಸಿಕೊಳ್ಳಿ.

ಉದ್ರೇಕಿಸುವ ಕೆಮ್ಮು ಮತ್ತು ನೆಗಡಿ ಇವು ನಮ್ಮ ಚೇತನ ಶಕ್ತಿಯನ್ನು ಕಡಿಮೆಮಾಡಿ, ಎದೆ ಮತ್ತು ಪುಪ್ಪುಸಗಳ ಅಪಾಯಕರ ಬೇನೆಗೆ ಎಡೆಗೊಡುತ್ತವೆ. ಅದುಕಾರಣ ಪೆಪ್ಸ್—ವಿಷಹಾರಕ ಶ್ವಾಸನೀಯ ಬಿಲ್ಲೆಗಳನ್ನು ಸೇವಿಸಿ ಬೇಗನೆ ಕೆಮ್ಮು ಮತ್ತು ನೆಗಡಿಗಳನ್ನು ಗುಣಪಡಿಸಿಕೊಳ್ಳಿ.

ಪೆಪ್ಸ್ ಬಾಯಲ್ಲಿ ಕರಗಿ, ಅಮೂಲ್ಯ ಔಷಧಿಯ ಸಾರಗಳನ್ನು ಹೊರಸೂಸುತ್ತಿದ್ದು,—ಇವು ನಿಮ್ಮ ಉಸಿರಾಟದಲ್ಲಿ ಬೆರೆತು, ಹಾಗೆ ಪುಪ್ಪುಗಳೊಳಗೆ ಅಳಕ್ಕೂ ಸೇರಿಕೊಳ್ಳಲ್ಪಡುತ್ತವೆ. ಹೀಗೆ ಪೆಪ್ಸ್ ಗಂಟಲು ಮತ್ತು ಶ್ವಾಸನಾಳಗಳ ಕೆಡುಕನ್ನು ಹೋಗಲಾಡಿಸಿ, ಬೇನೆ ತಗ್ಗಿಸಿ, ಕೆಮ್ಮು, ಥಂಡಿ, ಇನ್‌ಫ್ಲುಯೆಂಜ, ಶ್ವಾಸಪ್ರಣಾಳಗಳಿಗೆ ತಕ್ಕ ಫಲಕಾರಿ ಚಿಕಿತ್ಸೆ ಕೊಡುತ್ತದೆ.

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸ್‌ನ್ನು ಒಂದು ರೂಪಾಯಿಯಂತೆ ಮಾರುತ್ತಾರೆ.

ಏಜಂಟರು:– ಮೆಸರ್ಸ್ ದಾಧಾ ಎಂಡ್ ಕೊ., ಪಿ. ಟಿ. ಮದ್ರಾಸು.



ಪೆಪ್ಸ್ ಸೇವಿಸಿ

PEPS

ವಿಷಹಾರಕ ಶ್ವಾಸನೀಯ ಬಿಲ್ಲೆಗಳು.

ಅಚ್ಚುಕಟ್ಟಾದ, ಆರೋಗ್ಯವಾದ ಕೂದಲನ್ನು ಹೊಂದಿರಿ.

ಈ ಸುರಕ್ಷಿತ, ಸುಲಭ ರೀತಿಯಿಂದ

1 ಬಾಚುವುದಕ್ಕೆ ಮೊದಲು ಸ್ವಲ್ಪ "ವ್ಯಾಸಿಲೈನ್" ಪೊಮೇಡನ್ನು ಹಚ್ಚಿ. ನೀವು ಎಷ್ಟು ಚೆನ್ನಾಗಿ ಆಣಿಸುವಿರಿಂಬುದನ್ನು ನೋಡಿ.

2 "ವ್ಯಾಸಿಲೈನ್" ಪೊಮೇಡ್, ಪರಿಶುದ್ಧವಾದುದು. ಇದರಿಂದ ತಲೆಬುರುಡೆ ಒಣಗುವುದಿಲ್ಲ. ಕೂದಲು ಉರಿಯುವುದಿಲ್ಲ. ಒಂದು ಸೀಸೆ "ವ್ಯಾಸಿಲೈನ್" ಪೊಮೇಡನ್ನು ಉಪಯೋಗಿಸಿ ನಿಮ್ಮ ಸೌಂದರ್ಯವನ್ನು ಹೇಗೆ ವೃದ್ಧಿಪಡಿಸುವುದೆಂಬುದನ್ನು ನೋಡಿ.

11-C

ನೋಟೀಸು

ದಕ್ಷಿಣ ಕನ್ನಡಾ
ಸಬೋರ್ಡಿನೇಟ್ ಜಡ್ಜರ
ಕೋರ್ಟಿನಲ್ಲಿ

O. S. 4/40
R. E. P. 71/41 & R. E. A. 281/41

ಯು. ನರಸಿಂಗ ರಾವ್—ಇವರ ಜನರಲ್ ಪವರ್ ಆಫ್ ಎಟರ್ನಿ ಹೋಲ್ಡರ್ ದಿವಾನ್ ಬಹದ್ದೂರ್ ಯು. ರಾಮು ರಾವ್— **ಅರ್ಜಿದಾರ**

ಮತ್ತು

ಸೀತಾರಾಮು ವೈಲಾಯಾ ಸಹಾ— **ರೆಸ್ಪೊಂಡೆಂಟರು.**

2. ಪರಮೇಶ್ವರ ವೈಲಾಯಾ–(ವೆಂಕಟ್ರಮಣ ವೈಲಾಯರ ಮಗ), 4. ಶಂಕ್ರನಾರಾಯಣ (ಮೈನರ–ಗಾರ್ಡಿಯಾನ 2ನೇ ರೆಸ್ಪೊಂಡೆಂಟ ಪರಮೇಶ್ವರ ವೈಲಾಯಾ) ಕಾಸರಗೋಡು ತಾಲೂಕು ಅಡೂರು ಕಸಬೆಯಲ್ಲಿರುವವರು. ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ಅಮ್ಲಜ್ಯಾರಿ ಅರ್ಜಿ ವ್ಯವಹರಣೆಯಲ್ಲಿ ಅರ್ಜಿದಾರನ ಕಡೆಯಿಂದ ಹಾಜರು ಪಡಿಸಿದ ಏಲಂ ಇಸ್ತಿಹಾರಿನ ಷರತ್ತುಗಳನ್ನು ನಿರ್ಣಯಿಸುವರೆಯೂ ಮತ್ತು ಏಲಂ ಸಮಯ ಬಿಡ್ ಮಾಡುವರೆಯೂ ವ ಹಾಗೆ ಬಿಡ್ ಮಾಡಿ ಆಖೈರು ದರಖಾಸ್ತಿಗೆ ಅರ್ಜಿದಾರನು ನಿಂತಲ್ಲಿ ದರಖಾಸ್ತಿನ ಹಣ ಪೈಸ್ಲೆ ಹಣದಲ್ಲಿ ಮುಜ್ರಿ ಮಾಡುವರೆ ಪರ್ಮಿಶನ್ ಕೊಡಬೇಕಾಗಿ ದಾಕಲು ಮಾಡಿದ ಅರ್ಜಿ R. E. A. No. 281/1941 ಸಹಾ ತಾರೀಕು 3–10–1941ಕ್ಕೆ ನಿಮ್ಮ ಹಾಜರಾತಿ ಬಗ್ಯೆ ಇಟ್ಟಿರುತ್ತದೆ.

ಆದ್ದರಿಂದ ಸದರಿ ದಿವಸ ಹಗಲು ಘಂಟೆ 10–30ಕ್ಕೆ ವಕೀಲರ ಮುಕಾಂತರವಾಗಲೀ ಖುದ್ದಾನಿಂದಾಗಲೀ ಕೋರ್ಟು ಮುಂದೆ ಹಾಜರಾಗಿ ಉದಹರಿಸುವರೆ ತಪ್ಪಿದ್ದಲ್ಲಿ ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸೋಣಾಗುವುದು.

By order of Court
M. Janardan Malya,
Vakil for Petitioner.
Mangalore, Dated 8—9—1941

ಬರ್ಮಾ ಕರಾರು ಹೋಗಬೇಕು

ಕಲ್ಕತ್ತೆಯ ಒಂದು ಸಾರ್ವಜನಿಕ ಸಭೆಯಲ್ಲಿ ಅಲ್ಲಿನ ಡೆಪ್ಯುಟಿ ಮೇಯರರು ಭಾಷಣಮಾಡುತ್ತ 'ಇಂಡಿಯಾ ಬರ್ಮ ಗಳ ಕರಾರು, ಬರ್ಮದಲ್ಲಿನ ಸುಮಾರು ೧೦ ಲಕ್ಷ ಮಂದಿ ಹಿಂದೀ ನಿವಾಸಿಗಳ ನ್ಯಾಯಸಮ್ಮತವಾದ ಹಕ್ಕುಗಳಿಗೆ ವಿಶೇಷವಾದ ಅನ್ಯಾಯಮಾಡಿದೆ; ಆ ಕರಾರು ರದ್ದಾಗಬೇಕು' ಎಂದರು. ಈ ಸಂದರ್ಭದಲ್ಲಿ ಸಮಗ್ರ ಭಾರತದ ಪ್ರಾತಿನಿಧ್ಯವುಳ್ಳ ಒಂದು ಶಿಷ್ಟಮಂಡಲ ವೈಸರಾಯರ ಭೇಟಿ ಮಾಡಬೇಕೆಂದು ನಿರ್ಣಯವಾಯಿತು.

ಸಮುದ್ರದಲ್ಲಿ ಶತ್ರುಗಳಿಗೆ ನಷ್ಟ

ಒಂದು ಜರ್ಮನ್ ಡಿಸ್ಟ್ರಾಯರನ್ನೂ, ಪ್ರಾಯಶಃ ಮತ್ತೊಂದು ಲ್ಯಾಟ್ ಕ್ರುಯಿಜರನ್ನೂ ಮರಮನ ಸ್ಕೆನ ಬಳಿ ಮುಳುಗಿಸಲಾಗಿದೆ; ಜರ್ಮನಿಯ ೧೪ ಸಾವಿರ ಟನ್ ಭಾರದ ಒಂದು ತರಬೇತಿ ಹಡಗು "ಬ್ರಿಮ್ಸಿ", ಬ್ರಿಟಿಷ್ ನೌಕಾಬಲದಿಂದ ಉತ್ತರ ನಾರ್ವೆ ಜಲಧಿಯಲ್ಲಿ ಸಮಾಧಿಗೊಳಿಸಲ್ಪಟ್ಟಿದೆ; ಅಲ್ಲದೆ ಇಂಗ್ಲಿಷ್ ಕಾಲಿವೆಯಲ್ಲಿ ಶತ್ರುಗಳ ಎರಡು ಸರಬರಾಯಿ ಹಡಗು–೪೦೦೦ ಮತ್ತು ೫೫೦೦ ಟನ್ನುಗಳದು–ಅದರೊಂದಿಗೇ ಒಂದು "ಯೂ" ಬೋಟೂ ಬ್ರಿಟಿಷರಿಂದ ಮುಳುಗಿಸಲ್ಪಟ್ಟಿತೆಂದೂ ತಿಳಿದು ಬಂದಿದೆ.

ಮಿ। ಫಜಲುಲ್ ಹಕ್ಕರು

ಬಂಗಾಳದ ಪ್ರಧಾನರಾದ ಮಿ। ಫಜಲುಲ್ ಹಕ್ಕರು ನ್ಯಾಶನಲ್ ಡಿಫೆನ್ಸ್ ಕೌನ್ಸಿಲಿನ ತಮ್ಮ ಸದಸ್ಯತನಕ್ಕೆ ರಾಜಿ ಕೊಡುವುದರೊಂದಿಗೇ ಸಮಗ್ರ ಭಾರತ ಮುಸ್ಲಿಂ ಲೀಗಿನ ಕೌನ್ಸಿಲ್ ಹಾಗೂ ವರ್ಕಿಂಗ್ ಕಮಿಟಿಯ ಮೆಂಬರಿಕೆಗೂ ರಾಜಿಕೊಟ್ಟಿದ್ದಾರೆ. ಹಾಗೆ ರಾಜೀ ಕೊಡುವಾಗ "ಒಬ್ಬನೇ ಒಬ್ಬ ವ್ಯಕ್ತಿಯ ಸ್ವೇಚ್ಛಾಚಾರದ ಅಭಿಲಾಷೆಗೆ ಮುಸ್ಲಿಂ ಲೀಗಿನ ಪ್ರಜಾಪ್ರಭುತ್ವದ ತತ್ತ್ವಗಳು ಅಧೀನವಾಗಿರುವುದರ ಕುರಿತು" ಪ್ರಸ್ತಾವಿಸಿ, ಶ್ರೀ। ಜಿನ್ನರ ಏಕನಾಯಕತ್ವದ ಕಾರ್ಯನೀತಿಯನ್ನು ಟೀಕಿಸಿದ್ದಾರೆ.

ನಾಜಿಗಳ ಅಪಪ್ರಚಾರದ ಸನ್ಮೋಹನಾಸ್ತ್ರ—ಹೆಣ್ಣು!

(೧೩ನೇ ಪುಟದಿಂದ ಮುಂದುವರಿದುದು)

ಹೂಡಿದ ಕೃತ್ರಿಮೋಪಾಯಗಳು ಜಗತ್ತನ್ನೇ ಬೆರಗುಗೊಳಿಸುವಂಥವಾಗಿವೆ.

ಈ ಸುಂದರಿಯರ ಮುಖ್ಯ ಗುರಿಯು ರಾಷ್ಟ್ರಗಳ ಗುಪ್ತ ದಾಖಲೆಗಳನ್ನೋ, ಪ್ಲಾನುಗಳನ್ನೋ ಅವುಗಳ ಪ್ರತಿಚ್ಛಾಯೆಯನ್ನೋ ಗುಟ್ಟಿನಲ್ಲಿ ಜಾರಿಸಿ ಜರ್ಮನಿಗೆ ಒದಗಿಸುವುದು!

ಬ್ರಿಟನಿನಲ್ಲಿ ಮಾತ್ರ ಈ ಮಂಧರೆಯರ ಮಾಟ ನಡೆದ ಹಾಗಿಲ್ಲ.

ಈ ಸುರಸುಂದರಿಯರು, ಯುರೋಪಿನ ರಾಷ್ಟ್ರಗಳ ಉಚ್ಚಾಧಿಕಾರಿಗಳನ್ನೋ, ಅರಸರನ್ನೋ ಹೀಗೆ ತಮ್ಮ ಬುಟ್ಟಿಗೆ ಹಾಕಿಕೊಂಡು ಜರ್ಮನಿಯ ದಿಗ್ವಿಜಯ ಕಾರ್ಯವನ್ನು ಸುಲಭ ಮಾಡುತ್ತಿದ್ದಾಗ, ಇದೇ ಗುಪ್ತಚಾರಿಣಿಯವರ ವರ್ಗಕ್ಕೆ ಸೇರಿದ ಇತರ ಮಹಿಳೆಯರೂ ಜನಕ್ಷೆಯ ತಲೆ ಕೆಡಿಸಲು ಬೇರೆ ಬೇರೆ ಹಂಚಿಕೆಗಳನ್ನು ಹೂಡುತ್ತಿದ್ದಾರೆ. ಅವರು, ಹಿಟ್ಲರನು ಪಾದವನ್ನೂರುವನೆಂಬ ವದಂತಿಯೂ, ಭೀತಿಯೂ ಇರುವ ರಾಷ್ಟ್ರ ಯಾವುದೆಂಬುದನ್ನು ಕಂಡು ಹಿಡಿದು, ಅಲ್ಲಿಗೆ ನುಗ್ಗುವರು. ಅಲ್ಲಿ ಇವರು ಬೀದಿಗಳಲ್ಲಿ, ಸಂತೆಗಳಲ್ಲಿ, ವಹಿವಾಟದ ಕೇಂದ್ರಗಳಲ್ಲಿ ಕುಳಿತು ಹಿಟ್ಲರನ ದಾಳಿಯಿಂದ ತಾವು ಅನಾಥರಾದೆವೆಂದು ಮನೆಮಾರು ಕಳೆದುಕೊಂಡೆವೆಂದು, ಅವನ ಕ್ರೂರಾಚರಣೆಯಿಂದ ನೊಂದು ಬೆಂದು ದೇಶಭ್ರಷ್ಟರಾದೆವೆಂದು ಗೋಳಿಡುತ್ತ ತಮ್ಮ ನಷ್ಟಕಷ್ಟದ ಭೀಕರವಾದ ಸುಳ್ಳು ಕತೆಗಳನ್ನು ಒದರುತ್ತ, ನಾಜಿಗಳನ್ನು ಎದುರಿಸುವುದು ದುರ್ಗತಿಗೆ ಕಾರಣನೆಂದೂ, ನಾಜಿಗಳು ಅಜೇಯರೆಂದೂ ಮುಂತಾಗಿ ನಾಜಿ ಪರಾಕ್ರಮವನ್ನು ವರ್ಣಿಸುತ್ತ ಜನಗಳ ತಲೆ ಕೆಡಿಸಲು ಪ್ರಯತ್ನಿಸುವರು ಅವರನ್ನು ಅಧೀರರನ್ನಾಗಿ ಮಾಡಲು ನೋಡುವರು. ಹೀಗೆ ರಾಷ್ಟ್ರಗಳ ಜನಗಳ ಬುದ್ಧಿಯನ್ನು ಮಂಕು ಮಾಡುವಾಗ ಆ ರಾಷ್ಟ್ರವೀರರ ಶೌರ್ಯ ಸ್ತಂಭನವಾಗುತ್ತೆ, ಬೆದರಿಕೆಯ ಮಾತ್ರದಿಂದಲೇ ಸೋಲು ಪ್ರಾಪ್ತವಾಗದೆ ಇನ್ನೇನಾದೀತು?

ಶ್ರೀ। ಜಿನ್ನರ ಪಾಶ
ಈ ಕಡೆಯೂ ಬಿದ್ದಿದೆಯೇ?

ಪಂಜಾಬ್ ಪ್ರಧಾನರಾದ ಸರ್. ಸಿಕಂದರ್ ಹಯಾತ್‌ಖಾನರ ಪ್ರಯತ್ನದಿಂದ, ಸರ್. ಫೆರೋಜ್‌ಖಾನ್ ನೂನ್ ರಿಗೆ ವೈಸರಾಯರ ವಿಸ್ತರಣದ ಕೌನ್ಸಿಲಿನಲ್ಲಿ ಸ್ಥಾನ ಸಿಕ್ಕಿತೆಂದು ಹೇಳಲಾಗಿದೆ. ಈಗ ಸರ್. ಫೆ. ಖಾ. ನೂನರು, ವೈಸರಾಯರ ಕೌನ್ಸಿಲಿನಲ್ಲಿ ಆ ಸ್ಥಾನವನ್ನು ಸ್ವೀಕರಿಸಿದಂತೆ, ಅವರನ್ನು ಪ್ರೇರೇಪಿಸಬೇಕಾಗಿ ಶ್ರೀ। ಜಿನ್ನಾರವರು ಪಂಜಾಬಿನ ಪ್ರಧಾನರನ್ನು ಒತ್ತಾಯಪಡಿಸಿರುವುದಾಗಿ ವಾರ್ತೆ. ಸರ್. ನೂನರು ಮುಸ್ಲಿಂ ಲೀಗಿಗೆ ಸೇರಿದವರಲ್ಲವಾದುದರಿಂದ, ಶ್ರೀ। ಜಿನ್ನರ ಈ ಉಪಾಯ ವೇನೋ!

ಗ್ರೇಂಡ್
ಆಕ್ಸನ್ ಸೇಲ್
ತಾ. 28–9–41ರ ವರೆಗೆ ಮಾತ್ರ.
ಅನೇಕ ತರದ ಜವುಳಿಗಳು
ಬೆಲೆ ಅತಿ ಕಡಿಮೆಗೆ
ವಿಕ್ರಿತ ಮತ್ತು ಏಲಂ ಕೂಡಾ
ಪ್ರತಿ ಆದಿತ್ಯ, ಬುಧ, ಶುಕ್ರವಾರಗಳಲ್ಲಿ.
ಏಲಂ ಸಂಜೆ ಗಂಟೆ 5ಕ್ಕೆ ಪ್ರಾರಂಭ
ಎ. ವರದರಾಜು ಚೆಟ್ಟಿಯಾರ್,
ಜವುಳಿ ಅಂಗಡಿ,
ಮಾರ್ಕೆಟ್ ರಸ್ತೆ, ಮಂಗಳೂರು.

Please write to us for your needs in
RUBBER STAMPS
Monogram Seals, Peon Badges, Sign Boards, Marble Boards, Facsimile Stamps, Embossing, Etc.
CROWN RUBBER STAMP CO.,
A 17, Balmatta Road (Estd: 1926) MANGALORE.
(Among the list of Mysore Govt.'s approved Firms.)
Certified by the Agent of India, Ceylon.

50 ವರ್ಷಗಳಿಂದ ಜಗತ್ಪ್ರಸಿದ್ಧ
ಮದನಮಂಜರಿ
ಮಾತ್ರೆಗಳು
ಬಲಹೀನತೆ, ನುಲಬದ್ಧತೆ, ವೀರ್ಯಸ್ಖಲನ, ಧಾತುವಿಕಾರ ಮೊದಲಾದುವುಗಳನ್ನು ಶೀಘ್ರದಲ್ಲೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ.
ಕ್ರಯ: ಡಬ್ಬಿ 1ಕ್ಕೆ 1 ರೂ.
ಮದನಮಂಜರಿ ಫಾರ್ಮಸಿ,
184, ಚೈನಾ ಬಜಾರ್. ಮದ್ರಾಸ್.
ಪುತ್ತೂರು ಏಜೆಂಟರು:—ಪೈ ಫಾರ್ಮೆಸಿ.

ವೆಂಕಟಗಿರಿ ಮಹಾತ್ಮೆ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ.

ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ, ಮುದ್ದಾದ ಮುದ್ರಣ. ಬೆಲೆ ರೂಪ್ಯಾ ೧–೮–೦ ಟಪ್ಪಾಲು ಹಾಸಲು ಬೇರೆ.
ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1–8–0. ಟಪ್ಪಾಲು ಹಾಸಲು ಬೇರೆ.
ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ನೂತನ ಪಾಠಪಟ್ಟಿಗನುಸಾರವಾಗಿ ಪ್ರಕಟಿಸಲ್ಪಟ್ಟ ಈ ಕೆಳಗಿನ ನಮ್ಮ ಹೊಸ ಪುಸ್ತಕಗಳು ಮದ್ರಾಸು ಟೆಕ್ಸ್‌ಟ ಬುಕ್ ಕಮಿಟಿಯವರಿಂದ ಕ್ಲಾಸು ಉಪಯೋಗಕ್ಕಾಗಿ ಮಂಜೂರಾತಿಯನ್ನು ಹೊಂದಿವೆ. (Vide consolidated list of approved books Fort St. George Gazette, dated 30—4—1940, pages 59, 60, 62, 68, 70, 71, 86, 87, 88, 92 & 155.)

(1) **ಹೊಸ ಕನ್ನಡ ಪಾಠಮಾಲೆ**—1ರಿಂದ 5ನೇ ದರ್ಜೆಯ ವರೆಗೆ.
(2) **ನೂತನ ಬಾಲ ಗಣಿತ**—3ನೇ ದರ್ಜೆಯಿಂದ 8ನೇ ದರ್ಜೆಯ ವರೆಗೆ.
(3) **ಭಾರತದ ಇತಿಹಾಸ**—6ನೇ, 7ನೇ ಮತ್ತು 8ನೇ ದರ್ಜೆಗಳಿಗೆ
(4) ಡಿ ಡಿ I, II, III, IV ಮತ್ತು V ಫಾರ್ಮುಗಳಿಗೆ.
(5) **ನೂತನ ಸಾಮಾನ್ಯ ಗಣಿತ**—IV ಫಾರ್ಮಿಗೆ.

ಹೊಸ ಕನ್ನಡ ಪಾಠಮಾಲೆಯ 6, 7, ಮತ್ತು 8ನೇ ದರ್ಜೆಯ ಪುಸ್ತಕಗಳು ಅಚ್ಚಿನಲ್ಲಿವೆ. ಹೆಚ್ಚಿನ ಮಾಹಿತಿಗೆ ನಮಗೆ ಬರೆದುಕೊಳ್ಳಿರಿ:—

ಬಾಲಸಾಹಿತ್ಯ ಮಂಡಲ, ಲಿಮಿಟೆಡ್, ಮಂಗಳೂರು.

Guaranteed For Purity,.
BEST CASTOR OIL.
TASTELESS KP ODOURLESS.
ಶುದ್ಧಮಾಡಿದ ಹರಳೆಣ್ಣೆ ವಾಕರಿಕೆ ಕಹಿಃ ಇಲ್ಲವೆಂದು ಡಾಕ್ಟರಗಳಿಂದ ಸರ್ಟಿಫೈಮಾಡಿದ್ದು
CASTOR OIL WORKS, COIMBATORE.

K. P. Castor Hair Oil

ಬಹಳ ತಂಪು, ಚೇತನದಾಯಕ, ಉತ್ತಮ ಪರಿಮಳ, ಕೂದಲು ಬೆಳೆಸಲು ಸಹಾಯಕವಾಗುತ್ತದೆ. ಕ್ಷಾಂತಿ ಗೂಡಿಸುತ್ತದೆ. ಕೂದಲು ಬಾಚಿ ಅಣಿ ಮಾಡುವರೆ ನೆರವಾಗುತ್ತದೆ.

ಅತ್ಯುತ್ತಮವಾದ ಕೂದಲು ಶಕ್ತಿವರ್ಧಕ ಒಮ್ಮೆ ಪರೀಕ್ಷಿಸಿರಿ.

ಯೋಗ್ಯ ದರದಲ್ಲಿ ಉತ್ತಮ
ದೇವಪೂಜಾ ಸಾಮಗ್ರಿ
ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ.

ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ
ಕಲ್ಮಂಜೆ ವ್ಯಾಸಾಚಾರ್ಯ,
ಭ್ಯಾಂಡೆ ವ್ಯಾಪಾರಿ, ಉಡುಪಿ, ದ. ಕ.
Kalmanje Vyasacharya, Brass-ware Merchant, UDIPI, S. K.

ಕೇಸ್ಟ್ರೋಫೀನ್

ಹರಳೆಣ್ಣೆ ಚಾಕ್‌ಲೇಟ್‌ಗಳು.

ಮಕ್ಕಳಿಗೂ ಹಾಗೂ ಜವ್ವನಿಗರಿಗೂ ಏಕಪ್ರಕಾರವಾಗಿ ಪೂರ್ಣ ನಿರುಪದ್ರವಿ, ಸಿಹಿ, ಆನಂದದಾಯಕ, ಪ್ರಯೋಜನಕಾರಿಯಾದ ಉತ್ತಮ ಚೇತನದಾಯಕ ಬೇಧಿ ಔಷಧಿ.

ಉದರಶೂಲೆಗೊಳಿಸದು ಮತ್ತು ಚಟಹಿಡಿಸದು. ಸೀಸೆಗಳಲ್ಲಿ 25, 50 ಮತ್ತು 100 ಚಾಕ್‌ಲೇಟುಗಳು, ಹಾಗೂ 2 ಬಿಲ್ಲೆಗಳ ಪ್ಯಾಕೇಟುಗಳು.

ಪ್ರತಿ ಒಂದಕ್ಕೆ ಒಂದಾಣೆ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲೂ, ಸ್ಟೋರ್‌ಗಳಲ್ಲೂ ಸಿಗುತ್ತದೆ.

ಕೇಸ್ಟ್ರೋಫೀನ್ ಮೆನ್ಯುಫೇಕ್ಚರಿಂಗ್ ಕಂಪೆನಿ,
ಪಿ. ಒ. ಬಾಕ್ಸ್ ನಂಬ್ರ 88, **ಕ ರಾ ಚಿ.**

ಮಕ್ಕಳಿಗೆ

ಡೋಂಗರೆ ಇವರ

ಬಾಮ್ಮ ಪುತ್ತ

ಆದರ್ಶಕರವಾದ ಪೌಷ್ಟಿಕ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಶಾಂತಿ— ಪ್ರೇಮಗಳ ನಾಡನ್ನರಸುತ್ತ ...

(೪ನೇ ಪುಟದಿಂದ ಮುಂದುವರಿದುದು)

ಮುಸಿಕುಡಿಕೆ ಕಾಗದಗಳನ್ನು ಅವನೆದುರಿಟ್ಟು, ತಾನು ಅವನಿಗೆ ಮುಖ ಮಾಡಿ, "ನನ್ನನ್ನು ನೋಡುತ್ತ ನೋಡುತ್ತ ಕವಿತೆ ಬರೆಯಿರಿ", ಎಂದಿಳಂತೆ!

* * * *

ನನ್ನ ಶಂಕರು!....ಓ್ಹು....ಏನಾಗಿಬಿಟ್ಟ! ಎಂತಹ ಪರಿವರ್ತನೆ!....ನನ್ನ ಎದೆಯೊಡೆದು ನೀರಾಗುತ್ತಿದೆ....

....ತಿರುಮಲರಾಯರು ಇಹದ ಯಾತ್ರೆಯನ್ನು ಮುಗಿಸಿದರು. ನನ್ನ ಶಂಕರುವನ್ನು, ನನ್ನ ಕವಿಯನ್ನು ಕೆಡಿಸಿ ಹೋದರು.

ನನ್ನ ಕೋಣೆಯಲ್ಲಿ ಕುಳಿತು ವಿರಹ ಗೀತಗಳನ್ನು, ದುಃಖಪೂರ್ಣ ಕವಿತೆಗಳನ್ನು ಬರೆಯುವುದು ಶಂಕರನ ಕೆಲಸ. ಆತ ಶಶಿಯನ್ನು ಮರೆಯಲು ಶಕ್ತನಾಗುತ್ತಲೇ ಇಲ್ಲ. ಮೋಡದ ಮರೆಯಿಂದ ಹೊರಬರುವಂತೆ, ಅವಳಿಗೆ ಕರೆ ಕಳುಹುವುದು; ಪೂರ್ಣಿಮೆಯಂದು ಚಂದ್ರನನ್ನು ಕಂಡು ನಿನ್ನ ಮುಖದಲ್ಲಿ ಕಲೆಗಳೇಕೆ? ದುಗುಡವೇಕೆ? ಎನ್ನುವುದು ಶಂಕರನ ದಿನವಹಿಯಾಗಿ ಹೋಯಿತು.

ಪತಿ ಕವಿತೆಗಳನ್ನು ಕಳುಹಿಸಿದರೆ, ಶಶಿ-ಪತ್ನಿ-ಉತ್ತರ ಬರೆಯುತ್ತಿದ್ದಳು. "ವೃಥಾ ವೆಚ್ಚ ಮಾಡದಿರಿ; ಕವಿತೆ ಕಳುಹಿಸಬೇಕಾಗಿಲ್ಲ!"

ಹುಣ್ಣಿಗೆ ಬರೆಯೆಳೆಯಲು ಪ್ರತಿ ತಿಂಗಳೂ ಐವತ್ತೈವತ್ತು ರೂಪಾಯಿಗಳನ್ನು ಬೇರೆ ಕಳುಹುತ್ತಿದ್ದಳು!

* * * *

ಶಂಕರುವಿಗೆ ಸಾವಧಾನವಾಗಿ ಎಲ್ಲವೂ ತಿಳಿಯಿತು. ನನ್ನ ಕೋಣೆ ಅವನ ವಸತಿಯಾಯಿತು. ನನ್ನ ಹಾಸಿಗೆ ಅವಸಿಗೆ ಶಯ್ಯೆಯಾಯಿತು. ನನ್ನ ಆರೈಕೆಯೇ ರೋಗಿಗೆ ಶುಶ್ರೂಷೆಯಾಯಿತು. ಶಂಕರು,-ನನ್ನ ಶಂಕರು-,ಕಾಯಿಲೆ ಬಿದ್ದ.

* * * *

ಮೂರು ತಿಂಗಳ ದೀರ್ಘ ಕಾಹಿಲೆ ಜೀವನ-ಮರಣಗಳೊಡನೆ ಹೋರಾಟ. ನಾನು ನನ್ನ ಕವಿಯನ್ನು ಉಳಿಸಿಕೊಳ್ಳಲು ಶಕ್ತನಾದೆ!

ಅಂದು ಶಂಕರು ಮೆಲ್ಲನೆ ಎದ್ದು ಕುಳಿತಿದ್ದ...."ಶಿವೂ....ಸೇಡಿನ—ಪ್ರತೀಕಾರದ-ಹಂಬಲ ಬಲವಾಗುತ್ತಿದೆ.... ಅವಳನ್ನು ತೀರಿಸದೆ,....ನನಗೆ ನೆಮ್ಮದಿಯಾಗದು...."

ನಾನು ನಡುಗಿದೆ. ಎಷ್ಟೊತ್ತು ನೀರವ.

ಕೊನೆಗೆ ಶಂಕರನೇ ಪುನಃ ತುಟಿ ದೆರೆದ.

"ಇಲ್ಲ....ನನಗೆ ಆ ಅಧಿಕಾರವಿಲ್ಲ" ಎಂದು ಮೆಲ್ಲನೆ ನುಡಿದ.

ಹೋದ ಉಸಿರು ಮರಳಿ ಬಂತು ನನಗೆ.

* * * *

ಇಂದಿಗೆ ಆರು ಮಾಸಗಳಾದುವು;-ನನ್ನನ್ನು, ತಾನು ಪ್ರೀತಿಯಿಂದ ಕಂಡ ಹುಟ್ಟೂರನ್ನು, ತನ್ನನ್ನು ಆದರಿಸಿ ಸನ್ಮಾನಿಸಿದ ಜನತೆಯನ್ನು ಬಿಟ್ಟು, ಅನಿರ್ದಿಷ್ಟ ನಾಡಿಗೆ ಶಾಂತಿ ಪ್ರೇಮಗಳನ್ನರಸುತ್ತ ಶಂಕರು ಹೊರಟುಹೋಗಿ.

ಶಶಿಗಿನ್ನೂ ಯೌವ್ವನದ ಮಬ್ಬು. ಅವಳ ಸುಂದರ ಮುಖ, ಕಾಂತಿವಿಹೀನವಾಗಿ, ಚರ್ಮ ಸುಕ್ಕುಗಟ್ಟಿ, ಗಲ್ಲ ಒಳಕ್ಕೆ ಹೋಗಿ, ಕಣ್ಣು ಹೊಂಡಕ್ಕಿಳಿದು, ವಿರೂಪವಾಗಿ ತೋರಿದಾಗಲಷ್ಟೇ ಅವಳಿಗೆ ಎಚ್ಚರವಾಗುವುದು.

ಪಾಕಿಸ್ತಾನದ ಕರೆಯಲ್ಲಿ ಹುರುಳಿಲ್ಲಿ!

(೧ನೇ ಪುಟದಿಂದ ಮುಂದುವರಿದುದು)

೧೮೫೭ರ "ಸಿಪಾಯಿ ದಂಗೆ"ಯನ್ನು, ಹಿಂದೂ-ಮುಸ್ಲಿಮರು ಸಹಕರಿಸಿ ಜರಗಿಸುತ್ತಿದ್ದ ಆ ಕಾದಾಟವನ್ನು-ಸಿಕ್ಖರ ಸಹಾಯದಿಂದ ಬ್ರಿಟಿಷರು ಅಣಗಿಸಿದರು. ಈ ಬಹು ಸಂಖ್ಯಾಕ ಮತಗಳೆರಡು ಒಂದಾಗಿ ಬಿಟ್ಟರೆ, ತಮಗೆ ತೊಂದರೆಯಾಗಬಹುದು ಎಂದು ಆಗಲೇ ಬ್ರಿಟಿಷರು ಮನಗಂಡಿದ್ದರೇನೋ!

೧೯೦೯ರಲ್ಲಿ, ಹೊಸ ನಿಯಮ ಒಂದರ ಮೂಲಕ, ಭಿನ್ನ ಭಿನ್ನ ಕಾನ್ಸ್ಟಿಟ್ಯುಎನ್ಸಿಗಳನ್ನು ನಿರ್ಮಿಸಿದಾಗ, ಸಯ್ಯದ್ ಹಸನ್ ಇಮಾಮರೂ, ಎಂ। ಜಿನ್ನಾರವರೂ ರಾಷ್ಟ್ರದ ಐಕ್ಯತೆಯನ್ನು ಕಾಪಾಡುವುದಕ್ಕಾಗಿ, ಆ ನಿಯಮಕ್ಕೆ ತಮ್ಮ ಪ್ರಬಲ ವಿರೋಧವನ್ನು ವ್ಯಕ್ತಗೊಳಿಸಿದ್ದರು!

ಆದರೆ ಒಮ್ಮೆ ನಿರ್ಮಿಸಲ್ಪಟ್ಟ ವೈಷಮ್ಯತೆಯ ಕಿಚ್ಚನ್ನು, ಎರಡೂ ಪಕ್ಷಗಳ ಮತಾಂಧರು ಆರಗೊಡಲಿಲ್ಲ. ಆಳುವ ಕೆಲ ಅಧಿಕಾರಿಗಳು ಆಶಿಸಿದುದೂ ಅದನ್ನೇ.

ಅವರಿವರೊಳಗೆ ಅಧಿಕಾರ ಲಾಲಸೆಯು ಉತ್ಪನ್ನವಾಯಿತು. ಉದ್ಯೋಗಗಳಿಗಾಗಿ ಕಾದಾಟ-ಸ್ಪರ್ಧೆಗಳಿಗೆ ಆರಂಭವಾಯಿತು. "ಸ್ವಜಾತಿಯ ರಕ್ಷಣೆಗಾಗಿ" ಎಂಬ ಹೆಸರಿನಿಂದ ಅಸಾಧ್ಯ ಕೇಳಿಕೆಗಳು ದೇಶದ ಮುಂದಿಡಲ್ಪಟ್ಟುವು.

ಜ ಜ ಜ ಜ

"ಮುಸ್ಲಿಂ ಮತವು ಗಂಡಾಂತರದಲ್ಲಿ!" ಎಂಬ ಕೂಗು ಎಬ್ಬಿಸಲ್ಪಟ್ಟಿತು. "ಮುಸ್ಲಿಂ ಸಮಸ್ಯೆ"ಯೊಂದರ ನಿರ್ಮಾಣವಾಯಿತು. ಈ ಸಮಸ್ಯೆ ಜೆಕೊಸ್ಲಾವಾಕಿಯದ ಜರ್ಮನ್ ಸುಡೆಟೆನ್ ಸಮಸ್ಯೆಗಳಷ್ಟೇ ಭೀಕರವಾಗಿ ಕಾಣತೊಡಗಿತು.

"ಪಾಕಿಸ್ಥಾನ"ದ ಕರೆ ಕೇಳಿ ಬಂತು.

ಭರತ ಭೂಮಿಯಲ್ಲಿ, ಅಣ್ಣತಮ್ಮಂದಿರಂತೆ, ನಾವು ಈ ತನಕ ಬಾಳಿದೆವು; ಇನ್ನಾದರೂ ಬಾಳುವೆವು!

ತರುಣ ಭಾರತವು ಎದ್ದುನಿಲ್ಲುತ್ತಲಿದೆ. ಹಿಂದೂ ಮತ್ತು ಮುಸ್ಲಿಂ ಯುವಕರು, ತಮ್ಮ ನೈಜ ಕರ್ತವ್ಯಗಳನ್ನು ಅರಿತುಕೊಳ್ಳುತ್ತಿದ್ದಾರೆ. ಪಾಕಿಸ್ಥಾನದಂತಹ ಸಮಸ್ಯೆಗಳನ್ನು ಎರೋಧಿಸುತ್ತಿದ್ದಾರೆ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಪೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ

(REGD.)

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ; ತುರಿಕಜ್ಜಿ, ಹುಳುಕಡ್ಡಿ, ಪಿತ್ಥಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ,
ಲಿಮಿಟೆಡ್

AMRUTANJAN DEPOTS. BOMBAY. MADRAS. CALCUTTA.

ಬೊಂಬಾಯಿ ——— ಮದ್ರಾಸ್ ——— ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE PIE-MONEY BANK, LTD.,
Maidan Road, Mangalore.

Undertakes all kinds of Banking Business.
Current account at 2½% per annum.
Savings Bank Deposits at 4½% per annum.
FIXED DEPOSITS.
For 2 years 5%. 1 year 4½%. For 6 months 4%. 3 months 3½%.
Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.
Apply for particulars:— *K. R. Guru, Managing Director.*

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗ ಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗ ಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯತಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು.

ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0

ಆತಂಕನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.
ಏಜಂಟ್ಸ್:—ಪರ್ಲ್ ಎಂಡ್ ಸನ್ಸ್, ಮಂಗಳೂರು.

CONFIDENCE

IS A GREAT ASSET IN BUILDING BUSINESS.

THE

Bombay Life Assurance Co., Ltd.

has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to Represent, it pays you to consult us:—

KOCHIKAR BROTHERS, LTD.,

CHIEF AGENTS FOR SOUTH INDIA—INCLUDING INDIAN STATES

Udipi, Mangalore, Calicut, Madras, Trivendrum, Bangalore City, & Bombay 4.

Edited and Published by B. Vittal Rau at the Kanteerava Office, Maidan North Road, Mangalore
Printed by M. Baburaya Prabhu, B. A., at the Mangalore Press, Car Street, Mangalore.